UNIVERSAL LIBRARY
OU_198185
UNIVERSAL LIBRARY

# ಆರತಿ

ಹೆಣ್ಣುಮಕ್ಕಳ ಕಥಾಸಂಕಲನ

ಸಂಪಾದಕರು :

**ಮೋವುಂಡಿ ಮಲ್ಲಾರಿ**
**ಕುಲಕರಣಿ ದತ್ತಾತ್ರೇಯ**

**ಮನೋಹರ ಗ್ರಂಥ ಭಾಂಡಾರ**
**ಧಾರವಾಡ**

**ದೀಪಾವಳಿ ೧೯೪೧** **ಬೆಲೆ : ಹನ್ನೆರಡಾಣೆ**

ಪ್ರಕಾಶಕರು :
ದ. ಬಾ. ಕುಲಕರ್ಣಿ
ಮನೋಹರ ಗ್ರಂಥ ಭಾಂಡಾರ
ಧಾರವಾಡ

Checked 1965

ಪ್ರಕಾಶನ
ವೃಷಸಂವತ್ಸರ–ದೀಪಾವಳಿ

ಮುದ್ರಕರು :
ನಾ. ಅ. ಹೊಸಕೇರಿ
ವಿಜಯ ಮುದ್ರಾಲಯ
ಧಾರವಾಡ

# ಮುನ್ನೋಟ

ನಮ್ಮ ಅಕ್ಕ-ತಂಗಿಯರ ಇದೊಂದು ಕಥಾಸಂಕಲನವನ್ನು ಸಂಪಾದಿಸಿ ಪ್ರಕಟಿಸುವರೆ ನಮಗೆ ಬಹಳ ಸಂತೋಷವಾಗುತ್ತಿದೆ; ಹೆಮ್ಮೆ ಎನಿಸುತ್ತಿದೆ. ಹಿಂದೊಮ್ಮೆ ಕನ್ನಡ ಸಾಹಿತ್ಯಮಂಡಪದಲ್ಲಿ 'ರಂಗವಲ್ಲಿ' ಯನ್ನಿಕ್ಕಿದಾಗ, ದಿವಂಗತ ಗೌರಮ್ಮನವರ 'ಕಂಬನಿ' ಯಿಂದ ಶಾರದೆಯ ಪಾದ ತೊಳೆದಾಗ, ನಮ್ಮ ಹೆಣ್ಣುಮಕ್ಕಳು ಎಷ್ಟೊಂದು ಮುಂದುವರಿಯುವರೆಂಬ ಕಲ್ಪನೆ ನಮಗೆ ಇರಲಿಲ್ಲ. ಆದರೀ ದೀಪಾವಳಿಯ ದಿನ ಅವರು ಬೆಳಗಿದ ದೀಪಗಳ 'ಆರತಿ' ಯನ್ನೆತ್ತುವಾಗ, ಇಷ್ಟು ಕಾಲ ಕನ್ನಡನಾಡು ತನ್ನ ಹೆಣ್ಣುಮಕ್ಕಳನ್ನು ಮನೆಯ ಮೂಲೆಯಿಂದ ಹೊರಗೆ ಕರೆಯಲಿಲ್ಲವಲ್ಲ, ಕರೆದು ನುಡಿಯಿಸಲಿಲ್ಲವಲ್ಲ,— ಕರೆದು ನುಡಿಯಿಸಿದ್ದರೆ ನಮ್ಮ ಸಾಹಿತ್ಯದ ಹೊಳೆ ಇನ್ನಿಷ್ಟು ತುಂಬಿ ಹರಿಯ ಬಹುದಾಗಿತ್ತಲ್ಲ, ನಮ್ಮ ಬಾಳು ಇನ್ನಷ್ಟು ರಸಮಯವಾಗಬಹುದಾಗಿತ್ತಲ್ಲ,-

ಹಿಂದೆ ಹೆಣ್ಣುಮಕ್ಕಳು ಬಾಯಿಂದ ಮಾತ್ರ ನುಡಿಯುತ್ತಿದ್ದರು; ಅವರ ಕೈ ನುಡಿಯುತ್ತಿರಲಿಲ್ಲ. ತಾಯಿಬಾಯಿ ಎಂದಿನಿಂದಲೂ ಕಥನ ಕಲೆಗೆ ಆವಾಸ ವಾಗಿರುವುದು. ಮನೆಯಲ್ಲಿ ಅಕ್ಕ-ತಂಗಿಯರು, ಅತ್ತಿಗೆ-ನಾದಿನಿಯರು, ಅತ್ತೆ-ಸೊಸೆಯರು, ತಾಯಿ-ಮಕ್ಕಳು ತಮ್ಮ ಸುಖ-ದುಃಖಾನುಭವಗಳನ್ನು ತೋಡಿಕೊಳ್ಳುವುದು, ಓರಗೆಯ ಗೆಳತಿಯರು ಮನಬಿಚ್ಚಿ ಹರಟುವುದು, ಗಂಡನಿಗೆ ಹೆಂಡತಿ ದಿನದಿನದ ಮಾತು ಉಸಿರುವುದು, ಮುದುಕಿಯರು ಊರ-ನಾಡ ಸುದ್ದಿಯನ್ನು ಹೇಳುವುದು—ಎಲ್ಲಾ ಕತೆಯಾಗಿಯೇ ಇರುವುದು. ಅವರು ಹಸುಗೂಸುಗಳನ್ನು ಆಡಿಸುವ ಸೊಲ್ಲಿನೊಳಗೂ ಹಿಂದಿನ ಒಂದಾ ನೊಂದು ಕತೆಯೋ ಅವರ ಮುಂದಿನ ಆಶೆ-ಆಕಾಂಕ್ಷೆಗಳೋ ಅಡಕವಾಗಿ ಇರುವವು. ತಾನು ನುಡಿದುದೇ ಕತೆಯಾಗಿರುವ ಹೆಣ್ಣಿನ ಕೈಗೂ ಈಗಲೀಗ ಬಾಯಿ ಬಂದಿದೆ. ಇದು ನಮ್ಮ ನಾಡಿನ ಭಾಗ್ಯ; ಅವಳ ಸಾಹಿತ್ಯವೊಂದು ಹಾಲಕ್ಕಿಯ ಒಸಗೆನುಡಿ.

ಇಂದಿನ ಸಣ್ಣಕತೆಗಳಿಗೆ ಗಂಡು-ಹೆಣ್ಣಿನ ವಿಲಾಸವೇ ವಸ್ತುವಾಗಿರುವುದು ಹೆಚ್ಚು. ಇನ್ನು ಕೆಲವಕ್ಕೆ ಹೆಣ್ಣು ಕಡಿಮೆಯೆಂದು ತಿಳಿಯುವ ಸಮಾಜದ ಕ್ರೌರ್ಯವನ್ನು ಹಳಿಯುವುದೇ ಒಂದು ಕಥಾವಸ್ತುವಾಗಿರಬಹುದು. ಕೆಲವು ಕತೆಗಾರರಿಗೆ ಅತ್ತೆಯ ಕಾಟವನ್ನು ದೂರುವ ಬಯಕೆ, ಇನ್ನು ಕೆಲವರಿಗೆ ಆಭರಣಗಳ ಹುಚ್ಚು. ಇವೆಲ್ಲ ಲೋಕರೂಢಿಗಳು ವಿಚಾರಿಸಬೇಕಾದ ಅಂಶಗಳು ನಿಜ. ಆದರೆ ಇನ್ನೊಂದು ದೃಷ್ಟಿಯಲ್ಲಿ ಸುಂದರವಾದ ದಾಂಪತ್ಯಜೀವನ, ಅಕ್ಕ-ತಂಗಿಯರ ಒಲುಮೆ, ಅತ್ತಿಗೆ-ನಾದಿನಿಯರ ನಲಿವು, 'ಅತ್ತೆಗೆ ಸೊಸೆ ಮುದ್ದು',: ಸೊಸೆಗೆ ಅತ್ತೆಯಲ್ಲಿ ಗೌರವ, ಮನೆಯ ಹಿರಿಯನೊಡನೆ ಇವರೆಲ್ಲರ ಆದರದ ನಡೆವಳಿಕೆ, ಗೆಳತಿಯರ ಆಟನೋಟಗಳು, ತಾಯಿ ಮಕ್ಕಳ ವಾತ್ಸಲ್ಯ—ಆದರ್ಶ ಕುಟುಂಬ ಜೀವನದ ಇವೆಲ್ಲ ವಿಷಯಗಳು ಉತ್ತಮ ಕಥಾವಸ್ತುಗಳಾಗಬಲ್ಲವು. ಈ ಪ್ರಾಸಂಗಿಕ ಜೀವನದ ಅನುಭವ ಹೆಣ್ಣುಮಕ್ಕಳಿಗೆ ಸಹಜವಾಗಿರುವುದರಿಂದ ಈ ಕಥಾವಸ್ತುಗಳನ್ನವರು ಹೆಚ್ಚು ವಾಸ್ತವವಾಗಿ ಬಳಸಿಕೊಳ್ಳಬಲ್ಲರು. ಈ ಮಾತಿನ ನಿದರ್ಶನ ಇಲ್ಲಿಯ ಹಲವು ಕತೆಗಳಲ್ಲಿ ಕಂಡು ಬರುತ್ತಿದೆ.

ಈ ಸಂಕಲನದ ಒಂಬತ್ತು ಕತೆಗಳಲ್ಲಿ ಒಂದೊಂದೂ, ಒಂದು ಪ್ರಣಯ ಜೀವನದ ರಹಸ್ಯವನ್ನೊ, ಒಂದು ಸಾಮಾಜಿಕ ಸಮಸ್ಯೆಯನ್ನೊ, ಒಂದು ಮನೋವಿಶ್ಲೇಷಣದ ಚಿತ್ರವನ್ನೊ ಓದುಗರೆದುರು ನಿಲ್ಲಿಸುವುದು. ಒಬ್ಬರು ನವದಂಪತಿಗಳ ಚೆಲ್ಲಾಟದ ಜೀವನವನ್ನು ಸಲಿಗೆಯ ಸಲ್ಲಾಪದಿಂದ ಸರಸವಾಗಿ ಚಿತ್ರಿಸಿದಾರೆ; ಪ್ರೇಮದ ಸವಿಯ ಮಾದರಿಯನ್ನು ತೋರಿದಾರೆ. ಒಬ್ಬರು ವಿವಾಹಪೂರ್ವದ ಪ್ರಣಯಪ್ರಸಂಗಗಳನ್ನು ಅಂದವಾಗಿ ಕೊರೆದಿದಾರೆ; ಹೆಣ್ಣು ಮಕ್ಕಳ ಮೇಲೆ ಒತ್ತಾಯ ನಡೆಸುವ ಹಿರಿಯರ ಹೃದಯದಲ್ಲಿ ಭೀಷಣ ಚಿತ್ರವೊಂದನ್ನು ಮುದ್ರಿಸಿ ಮದುವೆಯ ವಿಷಯದಲ್ಲಿ ಪ್ರೇಮಕ್ಕೆ, ಮಕ್ಕಳ ಒಲವಿಗೆ ಇಂಬು ದೊರೆಯಬೇಕೆಂಬ ಕಡೆ ಅವರ ದೃಷ್ಟಿಯನ್ನು ಸೆಳೆದಿದಾರೆ. ಹೆಣ್ಣಿಗೆ ಬಟ್ಟೆ-ಬರೆ, ವಸ್ತು-ಒಡವೆಗಳ-ಆಸೆ ಒಂದು ಕಡೆ, ಮಕ್ಕಳ ಮೇಲಿನ ಕಕ್ಕುಲತೆ ಒಂದು ಕಡೆ; 'ರಾಜಿ' ಯ ಹೃದಯದಲ್ಲಿ ನಡೆಯುವ ಇವೆರಡು ಬಯಕೆ-ಒಲವುಗಳ ಕದನವನ್ನು ಒಳ್ಳೆಯ ಮನೋವೇಧಕವಾಗಿ ನುಡಿದಿದಾರೆ ಒಬ್ಬ ತಾಯಿ. ಮನ್ವಾದಿಗಳಿಂದ ದೊರೆತ ಬಹುಪತ್ನೀತ್ವದ ಅಧಿಕಾರವನ್ನು ದುರುಪ

ಯೋಗಿಸಿ ಗಂಡು ಸ್ವೇಚ್ಛಾಚಾರಿಯಾಗಿ ಸಮಾಜದ ಸ್ವಾಸ್ಥ್ಯವನ್ನೂ ಹೆಣ್ಣಿನ ಸುಖವನ್ನೂ ಮಣ್ಣುಗೂಡಿಸುವುದನ್ನು ಖಂಡತುಂಡಾಗಿ ತೋರಿಸಿದಾರೆ ಒಬ್ಬ ಸೋದರಿ. ಗಂಡನು ಸತ್ತರೆ ಹೆಂಡತಿಗೆ ಶಿಕ್ಷೆಯೆ ? ಅದೊಂದು ಎಂತಹ ಚಿತ್ರ ಹಿಂಸೆ ! ಅದನ್ನು ಮನ ಮರಗುವಂತೆ, ಎದೆ ಕರಗುವಂತೆ ಚಿತ್ರೀಕರಿಸಿ ಅಂತಹ ಶಾಸ್ತ್ರದ ಮೇಲೆ ಶಸ್ತ್ರವೆತ್ತಿದಾರೆ ಇನ್ನೊಬ್ಬ ಸಹೋದರಿ. ಮದುವೆಯಾದವರಿಗೆ ಒಂದು ಸಂತಾನವಾಗಬೇಕು; ಅದು ಮನೆಗೆ ದೀವಿಗೆ, ಅವರ ಪ್ರೇಮದ ಪುತ್ಥಳಿ; ಇಲ್ಲದಿದ್ದರೆ ಒಲಿಮ ಕೂಡಿದ ಜೋಡಿಯಲ್ಲಿಯೂ ಅದೇ ಒಂದು ವಿರಸವಾಗಿ ಕೂಡುತ್ತದೆ, 'ಚೆನ್ನಿ'ಯಲ್ಲಿ....ಹೇಗೂ ಚೆನ್ನಿ ಹೆರುತ್ತಾಳೆ. ಅದೇ ಒಂದು ಕ್ಷಯರೋಗವಾಗಿ ಅಂಟಿಕೊಳ್ಳುವುದವಳಿಗೆ. ಎಷ್ಟು ಸೂಕ್ಷ್ಮ ವಾಗಿ ಹೆಣ್ಣಿನ ಭಾವನೆಗಳ ಈ ತೊಡಕನ್ನು ತೋರಿದಾರೆ ಈ ತಾಯಿ! ಕತೆಗಾತಿಯರಿಬ್ಬರ ಗೆಳೆತನದ ಬಗೆಯನ್ನು 'ಕನಸೊ ನೆನಸೊ' ಎಂಬುದು ಸೂಚಿಸಿದೆ. ಸಾಹಿತ್ಯದಲ್ಲಿ ಸ್ತ್ರೀಯರು ಹೇಗೆ ಸ್ಥಾನವನ್ನು ಪಡೆದುಕೊಳ್ಳ ಬೇಕೆಂಬ ಬಗೆಗೆ ದಿವಂಗತ ಗೌರಮ್ಮನವರ ದೃಷ್ಟಿಕೋನವನ್ನು, ಅವರ ಸಹಜಸರಲ ಹೃದಯುವನ್ನು ಸುಂದರ ಸನ್ನಿವೇಶವಲ್ಲಿ ಹೆಣೆದಿದಾರೆ ಇಲ್ಲಿ. 'ಹೆಣ್ಣೆಂಬ ಸಹಾನುಭೂತಿಯಿಂದಲ್ಲ, ನಿಜವಾದ ಗುಣದಿಂದ ಹೆಂಗಸು ಹೆಸ ರಾಗಬೇಕೆ'ಂದು ಅವರ ಹೃದಯ ಮಿಡಿಯುತ್ತಿತ್ತು; ಹೆಣ್ಣಿಗಾಗಿ ಅವರ ಗೌರವದ ಬಯಕೆಯಿದೊಂದು; ಅವರ ಜೀವನದ ಕೊನೆ ಈ ಕತೆಯು ಮುಗಿತಾಯ; ಅವರ ಜೀವ ಇಲ್ಲಿ ನಿಂತಿದೆ. ತಾಯಿಯಿಲ್ಲದ ತಬ್ಬಲಿಯ ಹಂಬಲು ಒಂದರಲ್ಲಿ, ಅನುಕೂಲದಾಂಪತ್ಯವನ್ನು ಕಲಕಿದ ವಿಧಿವಿಲಾಸ ಇನ್ನೊಂದರಲ್ಲಿ ಬರುತ್ತವೆ. ಹೀಗೆ ಜೀವನದೊಳಗಿನ ವಿವಿಧ ಅನುಭವಗಳನ್ನು ಕಲಾತ್ಮಕವಾಗಿ ಹೇಳಲು ಇಲ್ಲಿ ಪ್ರಯತ್ನಪಟ್ಟಿದಾರೆ. ಎಷ್ಟೋ ಕೃತಿಗಳು ಯಶಸ್ವಿಯಾಗಿವೆಯೆಂದು ಹೇಳಬಹುದು.

ಸಮಾಜವನ್ನು, ಧಾರ್ಮಿಕ ರೂಢಿಗಳನ್ನು, ಸ್ತ್ರೀಯರ ಹೃದಯ ಭಾವನೆಗಳನ್ನು, ಕೌಟುಂಬಿಕ ಸಮಸ್ಯೆಗಳನ್ನು ಹೆಣ್ಣಿನ ಕಣ್ಣಿನಿಂದಲೂ ನೋಡಬೇಕು. ಹೆಣ್ಣುಮಕ್ಕಳ ಬರೆವಣಿಗೆ ಜನಕ್ಕೆ ಆ ದೃಷ್ಟಿಯನ್ನು ಕೊಡು ತ್ತದೆ. ಸ್ತ್ರೀಹೃದಯವನ್ನು, ಅಲ್ಲಿ ಮೂಡಿದ ಜೀವನದ ಪ್ರತಿಬಿಂಬವನ್ನು ಆ ದೃಷ್ಟಿ ತೋರಿಸುವುದು; ಅದರ ಯಥಾರ್ಥ ಕಲ್ಪನೆಯನ್ನು ಕೊಡುವುದು.

ಅಂದಾಗ ಜೀವನವು ಇಡಿಯಾಗಿ ಕಾಣುವುದು. ಇತ್ತೀಚೆಗೆ ಹಲವು ಜನ ಕನ್ನಡಿತಿಯರು ತಮ್ಮ ದೃಷ್ಟಿಯನ್ನು ಜನಕ್ಕೆ ಕೊಡುತ್ತಿದಾರೆ; ಸಾಹಿತ್ಯವನ್ನು, ಹೆಚ್ಚಾಗಿ ಲಘುಕಥಾಸಾಹಿತ್ಯವನ್ನು ನಿರ್ಮಿಸುತ್ತಿದಾರೆ. ಅವುಗಳಿಂದ ಕೆಲವು ಉತ್ತಮವಾದುವನ್ನು ಈ ದೃಷ್ಟಿಯಿಂದ ಆಯ್ದು ಈ 'ಆರತಿ'ಯನ್ನು ಹತ್ತಿಸಿದೇವೆ. ಜನರ ಹೃದಯವನ್ನು, ಜೀವನವನ್ನು ಇದು ಸ್ವಲ್ಪವಾದರೂ ಬೆಳಗೀತೆಂದು ಹಾರಯಿಸಿದೇವೆ.

ದೀಪಾವಳಿ
೨೦–೧೦–೪೧

**ಸಂಪಾದಕರು**

# ನಿವೇದನ

ದಿವಂಗತ ಸೌ. ಗೌರಮ್ಮನವರ ನೆನಪಿಗಾಗಿ ೧೯೪೦ನೆಯ ಎಪ್ರಿಲ್ ತಿಂಗಳಲ್ಲಿ ಹೆಣ್ಣು ಮಕ್ಕಳ ಸಣ್ಣ ಕತೆಗಳ ಮೇಲಾಟವೊಂದನ್ನು ನಡೆಯಿಸಿದೆವು. ಮೇಲಾಟದಲ್ಲಿ ಇಪ್ಪತ್ತೈದು ಜನ ಕಥೆಗಾರ್ತಿಯರು ಭಾಗತೆಗೆದುಕೊಂಡಿದ್ದರು. ಅದರಲ್ಲಿ ಉತ್ತಮವೆನಿಸಿದ ಮೂರು ಕತೆಗಳಿಗೆ ಬಹುಮಾನ ಹಂಚಲಾಯಿತು. ಈ ಸಂಕಲನದಲ್ಲಿನ ಮೊದಲಿನ ಮೂರು ಕತೆ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ಪಡೆದ ಕೃತಿಗಳು.

ಹದಿನಾಲ್ಕು ಜನ ಕಥೆಗಾರ್ತಿಯರ ಒಂದೊಂದು ಕತೆಗಳನ್ನು 'ರಂಗವಲ್ಲಿ' ಎಂಬ ಹೆಸರಿನಿಂದ ೧೯೫೭ರ ನಾಗಪಂಚಮಿಯ ದಿನ ಪ್ರಕಟಿಸಿದೆವು. ನಮ್ಮ ನಾಡಿನ ಸಾಹಿತ್ಯಿಕ ಸೋದರಿಯರಿಗೆ ಅವರಿಂದ ಪ್ರೋತ್ಸಾಹ ದೊರೆತಂತಾಗಿ ಉತ್ಸಾಹದಿಂದ ಬರೆಯತೊಡಗಿದರು. ಅಂತೆಯೇ ಕೇವಲ ಹೆಣ್ಣುಮಕ್ಕಳಿಗಾಗಿ ನಡೆದ ಸ್ಪರ್ಧೆಕೂಡ ಅಷ್ಟು ಯಶಸ್ವಿಯಾಗಿ ನಡೆಯಿತೆನ್ನಬಹುದು. — ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆನಿಸುತ್ತದೆ: ಸಾಮಾನ್ಯವಾಗಿ ಈವರೆಗೆ ನಡೆದ ಕಥಾಸ್ಪರ್ಧೆಗಳಲ್ಲಿ ( ಕೇವಲ ಹೆಣ್ಣುಮಕ್ಕಳಿಗಾಗಿ ನಡೆದುವಲ್ಲ. ) ಬಹುತರ ಹೆಣ್ಣುಮಕ್ಕಳೇ ಪ್ರಥಮ ಬಹುಮಾನ ಪಡೆದ ಹಲವು ನಿದರ್ಶನಗಳು ನೆನಪಿಗೆ ಬರುತ್ತವೆ. ಕೆಲವು ದಿನಗಳ ಹಿಂದೆ ಉಡುಪಿಯ ಮಿತ್ರಮಂಡಲಿಯವರೂ ' ಜಯಕರ್ನಾಟಕ ' ಪತ್ರಿಕೆಯವರೂ ನಡೆಸಿದ ಸ್ಪರ್ಧೆಗಳಲ್ಲಿ ದಿವಂಗತ ಸೌ. ಗೌರಮ್ಮನವರು ಪ್ರಥಮ ಬಹುಮಾನ ಪಡೆದಿದ್ದರು. ಕಳೆದ ವರುಷ ಪರಿಷತ್ತಿನವರು ನಡೆಸಿದ ದಿವಂಗತ ಭಾಸ್ಕರರಾಯರ ಜ್ಞಾಪಕ ಸ್ಪರ್ಧೆಯಲ್ಲಿ ಈ ಸಂಗ್ರಹದಲ್ಲಿಯ 'ಕನಸೋ ನೆನಸೊ' ಎಂಬ ಕತೆ ಬರೆದ ಶ್ರೀಮತಿ 'ವಾಣಿ' ಅವರ 'ಮಿಂಚು' ಎಂಬ ಕತೆಗೆ ಪ್ರಥಮ ಬಹುಮಾನ ದೊರೆಯಿತು. ಈ ಸಲ 'ಜಯಂತಿ' ಪತ್ರಿಕೆಯವರು ನಡೆಸಿದ ಸ್ಪರ್ಧೆಯಲ್ಲೂ ಈ ಸಂಗ್ರಹದಲ್ಲಿ ಬಂದಿರುವ ಕುಮಾರಿ ದೇವಾಂಗನಾ ಶಾಸ್ತ್ರಿಯವರ ' ವೇಣಿ ಸಂಹಾರ ' ಎಂಬ ಕತೆಗೆ ಪ್ರಥಮ ಬಹುಮಾನ ದೊರೆತಿದೆ. ಅಲ್ಲದೆ ೧೯೫೮

ರಲ್ಲಿ ಧಾರವಾಡದ ನಾಡಹಬ್ಬ ಮಂಡಲದವರು ನಡೆಸಿದ ಕಥಾ ಸ್ಪರ್ಧೆಯಲ್ಲಿ ಶ್ರೀಮತಿ ಶಿವೂತಾಯಿ ವಣ್ಣೂರ ಆವರ ಒಂದು ಕತೆಗೆ ಪ್ರಥಮ ಬಹುಮಾನ ದೊರೆಯಿತು.

ಈ ' ಆರತಿ 'ಯನ್ನೆತ್ತುವ ಹಬ್ಬದ ಪ್ರಸಂಗದಲ್ಲಿ ಒಬ್ಬರ ನೆನವು ಬಹಳ ನೋವನ್ನುಂಟುಮಾಡುತ್ತಿದೆ. ಶ್ರೀ. ಹ. ಪೀ. ಜೋಶಿಯವರು ನಾವು ನಡೆಸಿದ ಕಥಾಸ್ಪರ್ಧೆಯ ಪರೀಕ್ಷಕ ಮಂಡಲದ ಹಿರಿಯರಾಗಿ ಕೆಲಸ ಮಾಡಿದರು. ಬಹುಮಾನ ಪಡೆದ ಮತ್ತು ಇತರ ಕೆಲವು ಹೆಣ್ಮಕ್ಕಳ ಕತೆಗಳನ್ನು ಸೇರಿಸಿ ಸಂಕಲನವಾಗಿ ಪ್ರಕಟಿಸಬೇಕೆಂದು ಹಾರಯಿಸಿ, ಅದಕ್ಕೊಂದು ಒಳ್ಳೆಯ ಮುನ್ನುಡಿಯನ್ನು ಬರೆದುಕೊಡುವುದಾಗಿ ಹೇಳಿದವರು ಈಗ ಹೊರಟು ಹೋಗಿದ್ದಾರೆ. ಈ ಆರತಿ ಹಸೆಯ ಮೇಲೆ ಇರಬೇಕಾದ ಒಲವಿನ ಬಂದು ಈಗ ಇಲ್ಲ.

ಈ 'ಆರತಿ'ಯಲ್ಲಿ ದೀಪಗಳನ್ನು ಬೆಳಗಿದ ಕತೆಗಾತಿಯರಿಗೆ, ಹೊದಿಕೆಗೆ ಭಾವಪೂರ್ಣ ಚಿತ್ರವನ್ನು ಬರೆದ ಶ್ರೀ. ಸಂಗಮ ನಾರಾಯಣರಿಗೆ, ಸಹೃದಯ ದಿಂದ ಮುದ್ರಿಸಿಕೊಟ್ಟ ಶ್ರೀ. ಹೊಸಕೇರಿ ನಾರಾಯಣರಿಗೆ, ನೆರವಾದ ಕೆಲವು ಮಿತ್ರರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ದೀಪಾವಳಿ<br>೨೦–೧೦–೪೧

**ಪ್ರಕಾಶಕರು**

# ಆ ರ ತಿ

**ದೀಪಗಳು :**

ನನ್ನ ಪರೀಕ್ಷೆ
ಕನಸೋ ನೆನಸೋ ?
ಶಾಲ್ಮಲೆಗೆ
ಅಂದು : ಇಂದು
ಚಿನ್ನಿ
ಹುಚ್ಚಿ ಯಾರು ?
ಮಾತೃಹೃದಯ
ಒಂದು ಎರಡು ಮೂರು....
ವೇಣೀಸಂಹಾರ

**ಬೆಳಗಿದವರು :**

ಶ್ರೀಮತಿ ಎಚ್. ಸುಮಿತ್ರಮ್ಮ. ಬೆಂಗಳೂರು
ಶ್ರೀಮತಿ "ವಾಣಿ", ಮೈಸೂರು
ಶ್ರೀಮತಿ ಕುಸುಮ ದೇಶಪಾಂಡೆ, ಹುಬ್ಬಳ್ಳಿ
ಶ್ರೀಮತಿ ಗೀತಾದೇವಿ ಕುಲಕರ್ಣಿ, ಧಾರವಾಡ
ಶ್ರೀಮತಿ ಆರ್. ರತ್ನಾಬಾಯಿ ಎಂ.ಎ. ಚಿತ್ತೂರು
ಶ್ರೀಮತಿ ವಸಂತಾದೇವಿ, ಬೆಂಗಳೂರು
ಶ್ರೀಮತಿ ಸರಸ್ವತೀಬಾಯಿ ರಾಜವಾಡೆ, ಉಡುಪಿ
ಶ್ರೀಮತಿ ಶಾಂತಾದೇವಿ ಮಾಳವಾಡ, ಧಾರವಾಡ
ಶ್ರೀಮತಿ ಕುಮಾರಿ ದೇವಾಂಗನಾಶಾಸ್ತ್ರಿ, ಗೋಕರ್ಣ

## ದೀಪಗಳು

ಊರಸು ಕಾಯುವ ಹಿರಿಯಮ್ಮಾ,
ನಿನಗಾರತಿ ಬೆಳಗಲು ಬರುತಿಹರು;
ಸವಿಯಾರತಿ ಬೆಳಗಲು ಬರುತಿಹರು
ಹತ್ತಾರು ಜನರು ಮುತ್ತೈದೆಯರು.

—ವಿ. ಸೀ.

# ನನ್ನ ಪರೀಕ್ಷೆ

ನನಗೆ ಚಿತ್ರದುರ್ಗಕ್ಕೆ ವರ್ಗವಾಗಿ ಹದಿನೈದು ದಿನವಾಗಿತ್ತು. ಸೆಕ್ರೆಟರಿಯೇಟ್‌ನಿಂದ ಡೆಪ್ಯೂಟಿಕಮೀಷನರರ ಆಫೀಸಿಗೆ ಹಾಕಿದ್ದರು. ಹೊಸ ಊರು. ಹೊಸ ಜನ. ಆದ್ದರಿಂದ ಒಬ್ಬನೇ ರೂಂ ಮಾಡಿಕೊಂಡು ಹೋಟೆಲಿನಲ್ಲಿ ಊಟ ಮಾಡುತ್ತಿದ್ದೆ.

ಚಿತ್ರದುರ್ಗ ಹಳೆಯ ಊರು. ಊರಿನ ಸುತ್ತಲೂ ಕೋಟೆಗೋಡೆಗಳು; ಅಲ್ಲಲ್ಲಿ ಭಗ್ನವಾಗಿದ್ದರೂ ಪೂರ್ವದ ಇತಿಹಾಸವನ್ನು ಸಾರುತ್ತಿರುವ ಕಲ್ಲುಗೋಡೆಗಳು. ಪಕ್ಕದಲ್ಲೇ ಬೆಟ್ಟ. ಧವಳಪ್ಪನ ಗುಡ್ಡ, ಅಂಕಲಿಮಠ ಮೊದಲಾದ ನೋಡಬೇಕಾದ ಸ್ಥಳಗಳು ಇವೆ. ಆದರೆ ನನಗೆ ಏಕೋ ಈ ಊರ ವಾಸ ಬಹಳ ಬೇಸರಿಕೆಯದಾಗಿ ಕಂಡುಬಂತು. ಮೊದಲನೆಯದಾಗಿ, ಹೊರಗೆ ಸ್ನೇಹಿತರಿಲ್ಲ; ಮನೆಯಲ್ಲಿ 'ಕುಸುಮ' ಇಲ್ಲ. ಬೆಂಗಳೂರು ಮೈಸೂರಿನಲ್ಲೇ ಹುಟ್ಟಿಬೆಳೆದ ನನಗೆ ಇಲ್ಲಿ ಹೊತ್ತು ಕಳೆಯುವುದು ಬಹಳ ಕಷ್ಟವಾಗಿತ್ತು. ಕುಸುಮಾನ ಕರೆದುಕೊಂಡು ಬರಬೇಕೆಂದರೆ ಸರಿಯಾದ ಮನೆ ಸಿಕ್ಕದು. ಅಲ್ಲದೆ ಆಫೀಸಿನಲ್ಲಿ ಕೆಲಸ ಜಾಸ್ತಿ. ಬೆಂಗಳೂರಿನಂತೆ ಹತ್ತು ಗಂಟೆಗೆ ಹೋಗಿ ಐದು ಗಂಟೆಗೆ ಬರುವಂತಿಲ್ಲ. ಆರು ಗಂಟೆಯಾದರೂ ಸರಿ, ಆರೂವರೆಯಾದರೂ ಸರಿ, ಕೆಲಸ ಮುಗಿಯುತ್ತಿರಲಿಲ್ಲ. ಆ ಹಳೇ ರಿಕಾರ್ಡುಗಳೋ ನೋಡುವುದಕ್ಕೇ ಬೇಸರ. ದಿನಕ್ಕೊಂದು ಕಟ್ಟು ಸಹ ಪೂರ್ತಿ ಓದಲು ಸಾಧ್ಯವಾಗುತ್ತಿರಲಿಲ್ಲ. ಆದರೇನು ಮಾಡುವುದು ? ಸರ್ಕಾರಿ ನೌಕರಿ. ಬೇಕೆಂದ ಕಡೆಗೆ ಹಾಕುತ್ತಾರೆಯೇ ?

* * * * * *

ಸಾಯಂಕಾಲ ಆಫೀಸಿನಿಂದ ರೂಮಿಗೆ ಬಂದೆ. ಕುರ್ಚಿಯಮೇಲೆ ಕುಳಿತು ಬೀಸಿಕೊಳ್ಳುತ್ತಿದ್ದೆ. ಆಳು ಬಂದು "ಸ್ವಾಮೀ ಮಧ್ಯಾನ ಒಂದು ಬಣ್ಣದ ಕಾಗದ ಬಂದಿತ್ತು. ನೀವೇಳಿದ್ದಂತೆ ಹಾಗೇ ಮಡಗಿದ್ದೇನೆ. ತೆಗೆದು

ಕೊಳ್ಳಿ" ಎಂದು ನೀಲಿಬಣ್ಣದ ಕವರನ್ನು ಕೊಟ್ಟ. ಅದನ್ನು ನೋಡುತ್ತಲೇ ನನ್ನ ಮುಖವರಳಿತು. ಅದು ಕುಸುಮಾ ಬರೆದದ್ದು. ಹಿಂದೆ ಒಂದು ದಿನ ಹೇಳಿದ್ದೆ, 'ಬಣ್ಣದ ಕವರನ್ನು ಆಫೀಸಿಗೆ ಕಳಿಸಬೇಡ' ಎಂದು. ಅದಕ್ಕೇ ಅವನು ಈಗ ಕೊಟ್ಟದ್ದು.

ಕವರನ್ನು ಒಡೆದು ಓದಲಾರಂಭಿಸಿದೆ. ಕುಸುಮ ಎರಡುದಿನ ತಡವಾಗಿ ಬರೆದಿದ್ದಳು. ಮೊದಲನೆಯದಾಗಿ ಕ್ಷಮಾಪಣೆ ಕೇಳಿದ್ದಳು. ಅನಂತರ 'ಮನೆ ಸಿಕ್ಕಿತೇ? ಎಲ್ಲಿ ರೂಂ ಮಾಡಿದ್ದೀರಿ? ಸುತ್ತಮುತ್ತಲಿರುವವರು ಯಾರು? ಆಫೀಸಿನಿಂದ ಬರುವುದು ಎಷ್ಟು ಹೊತ್ತಾಗುತ್ತೆ?' ಇತ್ಯಾದಿ ಒಂದು ಪ್ರಶ್ನ ಮಾಲಿಕೆಯನ್ನೇ ಬರೆದಿದ್ದಳು. ನಾನು ಹಾಗೇ ಮಲಗಿಕೊಂಡು ಯೋಚಿಸ ಲಾರಂಭಿಸಿದೆ. ಬೆಂಗಳೂರಲ್ಲಿ ಒಂದು ತರಹ. ಮನೆಗೆ ಬರುವ ಹೊತ್ತಿಗೆ ಕುಸುಮಾ ಬಂದು ಎದುರುಗೊಳ್ಳುತ್ತಿದ್ದಳು. ಹ್ಯಾಟ್ ತೆಗೆದಿಡುವುದು, ಷೂ ಲೇಸ್ ಬಿಚ್ಚುವುದು ಅವಳ ಕೆಲಸ. ಬೇಡವೆಂದರೂ ಅವಳು ಕೇಳುತ್ತಿರ ಲಿಲ್ಲ. ಆ ಮೇಲೆ ಮುಖ ತೊಳೆದುಕೊಂಡು ಇಬ್ಬರೂ ಕಾಫಿ-ತಿಂಡಿ ತೆಗೆದು ಕೊಳ್ಳುವುದು. ಬಳಿಕ ಕುಸುಮ ಹತ್ತಿರ ಬಂದು ಕುಳಿತು ಬಂದ ಕಾಗದ ಗಳನ್ನು ಓದುವುದು. ಕೊನೆಗೆ ಯಾರಾದರೂ ಸ್ನೇಹಿತರು ಬಂದರೆ ವಾಕ್ ಹೋಗುವುದು; ಅಥವಾ ಕುಸುಮಾ ನಾನು ಲಾಲ್‌ಬಾಗಿಗೋ, ಕಬ್ಬನ್ ಪಾರ್ಕಿಗೋ ಹೋಗುವುದು. ಹೀಗೆ ಯೋಚಿಸುತ್ತಾ ಕಣ್ಣುಮುಚ್ಚಿಕೊಂಡು ೨೦೦ ಮೈಲಿ ದೂರದಲ್ಲಿರುವ ಕುಸುಮಳ ಕೂಡ ಮಾತನಾಡಲಾರಂಭಿಸಿದೆ. ಅವಳ ನೋಟ ನಡಿಗೆ ಎಲ್ಲಾ ಜ್ಞಾಪಕಕ್ಕೆ ಬಂತು. ಹೊತ್ತಾಗಿ ಬಂದ ದಿನ ಅವಳ ಮುಖದಲ್ಲಿನ ನಸುಗೋಪ, ಹತ್ತಿರಕ್ಕೆ ಕರೆದುಕೊಂಡು, 'ಏನು ಬಹಳ ಕೋಪ ಬಂದಂತಿದೆ' ಎಂದರೆ 'ಏನೂ ಇಲ್ಲ' ಎಂದು ಅವಳು ಕೈಕೊಸರಿ ಕೊಂಡು ಹೋಗುತ್ತಿದ್ದುದು ನೆನಪಿಗೆ ಬಂತು. ಕ್ರಿಸ್‌ಮಸ್ ರಜ ಬರುತ್ತಲೂ ಹೋಗಿ ಕುಸುಮಾನ ಕರೆದುಕೊಂಡು ಬರುವುದು ಎಂದುಕೊಂಡೆ.

"ಏನು ಸ್ವಾಮಿ, ನಿದ್ದೆ ಮಾಡುತ್ತಿರುವ ಹಾಗಿದೆ" ಎನ್ನುತ್ತ ಚೆನ್ನಪ್ಪನ ವರು ಬಂದರು. ಗಿಡ್ಡಾದ, ದಪ್ಪ, ಕಪ್ಪು ಆಸಾಮಿ. ಒಂದು ಸಣ್ಣ ಆನೆಮರಿ ಬರುತ್ತಿರುವಂತೆ ಪ್ರವೇಶಿಸಿದರು.

"ಬನ್ನಿ ಸಾರ್. ಸುಮ್ಮನೆ ಕುಳಿತುಕೊಂಡಿದ್ದೆ" ಎಂದು ಕಾಗದವನ್ನು ಜೇಬಿನಲ್ಲಿ ಹಾಕಿಕೊಂಡೆ. ಚೆನ್ನಪ್ಪನವರು ಒಳಗೆ ಬಂದು, "ಏನು ಈಗ ತಾನೇ ಆಫೀಸಿನಿಂದ ಬಂದಿರೋ ? ಕಾಫಿ ಆಯ್ತೆ ?" ಎಂದರು.

"ಇನ್ನೂ ಇಲ್ಲ ಸಾರ್. ಈಗ ತಾನೇ ಬಂದವನು ಹಾಗೇ ಕುಳಿತುಕೊಂಡೆ."

"ಇನ್ನೂ ಕಾಫಿ ತೆಗೆದುಕೊಳ್ಳಲಿಲ್ಲವೇ? ಬೋರಾ, ಏನು ಮಾಡುತ್ತಿದ್ದೀ? ರಾಯರಿಗೆ ಕಾಫಿ ತೆಗೆದುಕೊಂಡು ಬಾ ಎಂದು ಹೇಳು. ಇಲ್ಲಿನವರೇ ಹಾಗೆ ಸ್ವಾಮಿ. ಹೇಳಿದರೆ ಮಾಡ್ತಾರೆ, ಇಲ್ಲದಿದ್ದರೆ ಒಂದೂ ತಿಳಿಯುವುದಿಲ್ಲ."

"ಪರವಾಯಿಲ್ಲ, ಮಾಡುತ್ತಾನೆ. ನನಗೇ ಏಕೋ ಬೇಸರವಾಗಿತ್ತು; ಸುಮ್ಮನಿದ್ದೆ."

"ನೀವು ಬೆಂಗಳೂರು ಸೀಮೆಯವರು; ನಾಜೂಕುವಂತರು. ಇಲ್ಲಿನವರು ಒರಟರು; ತಿಳಿವಳಿಕೆ ಕಡಿಮೆ."

"ಅದೇನೂ ಚಿಂತೆಯಿಲ್ಲ. ಒಂದು ಸಲ ಹೇಳಿದರೆ ತಿಳಿದುಕೊಳ್ಳುತ್ತಾನೆ."

"ಒಂದು ವಿಷಯ ನಿಮಗೆ ತಿಳಿಸೋಣ ಎಂತ ಬಂದೆ. D. C. ಯವರು ನಿಮ್ಮ ವಿಷಯ ಚೆನ್ನಾಗಿ ಮಾತನಾಡಿದರು. ನೀವು ಲೋಕಲ್ ಟೆಸ್ಟುಗಳನ್ನು ಓದಿ ಪ್ಯಾಸುಮಾಡಿದರೆ ಅನುಕೂಲ."

ಅಷ್ಟು ಹೊತ್ತಿಗೆ ಕಾಫಿ ಬಂತು. ಇಬ್ಬರೂ ಕಾಫಿ ಕುಡಿದೆವು. ಚೆನ್ನಪ್ಪನವರು ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಹೊರಟುಹೋದರು. ನಾನು ವಿಚಾರ ಮಾಡಿದೆ, ಲೋಕಲ್ ಟೆಸ್ಟು ಪರೀಕ್ಷೆ ಇನ್ನೊಂದು ತಿಂಗಳಿಗೆ. ಮನೆಯೂ ಸದ್ಯಕ್ಕೆ ಸಿಕ್ಕುವ ಹಾಗಿಲ್ಲ—ಕುಸುಮಾನ ತಂಟೆಯೂ ಇಲ್ಲ. ಓದಿಯೇ ಬಿಡಬೇಕು ಎಂದು ನಿಶ್ಚಯಮಾಡಿದೆ. ಮಾರನೆಯ ದಿನವೇ ಅಪ್ಲಿಕೇಶನ್ ಕಳಿಸಿಬಿಟ್ಟೆ.

* * * * * *

ಮಾರನೆಯ ದಿನದಿಂದ ಓದಲು ಪ್ರಾರಂಭಿಸಿದೆ. ಆಫೀಸಿಗೆ ಹೋಗಬೇಕಾದ್ದು ಹತ್ತು ಗಂಟೆಗೆ. ಬೆಳಗ್ಗೆ ಎಲ್ಲಾ ಏನೂ ಕೆಲಸವಿರುತ್ತಿರಲಿಲ್ಲ.

ಸ್ನೇಹಿತರು ಯಾರೂ ಇಲ್ಲ. ಒಂಬತ್ತೂವರೆ ವರೆಗೆ ಓದುವುದು. ನಂತರ ಸ್ನಾನ ಊಟ ಮುಗಿಸಿಕೊಂಡು ಆಫೀಸಿಗೆ ಹೋಗುವುದು. ಸಾಯಂಕಾಲ ಮನೆಗೆ ಬಂದು ಚಿನ್ನಪ್ಪನವರ ಜೊತೆಗೆ ಸ್ವಲ್ಪ ಹರಟೆ. ಅವರು ಏಳು ಗಂಟೆಗೆ ಹೊರಟು ಹೋಗುತ್ತಿದ್ದರು. ಒಂಬತ್ತು ಗಂಟೆವರೆಗೆ ಓದಿ ಆ ಮೇಲೆ ಊಟ ಮಾಡಿ ಮಲಗುವುದು. ನಾನು B. A. ಕ್ಲಾಸಿನಲ್ಲಿದ್ದಾಗಲೂ ಇಷ್ಟು ಓದಿರಲಿಲ್ಲ. ಏಕೆಂದರೆ ಪುಸ್ತಕ ತೆಗೆಯುವುದರೊಳಗೆ ಯಾರಾದರೂ ಸ್ನೇಹಿತರು ಬರುವುದು. 'ಏನು ಓದುತ್ತೀಯೋ ಸಂಜೆ ಹೊತ್ತಿನಲ್ಲಿ, ಬಾ ಹಾಗೆ ಸುತ್ತಾಡಿಕೊಂಡು ಬರೋಣ' ಎಂದು ಎಳೆದುಕೊಂಡು ಹೋದರೆ ಬರುವುದೇ ಎಂಟುವರೆ ಗಂಟೆಗೆ. ಸರಿ ಊಟಮಾಡಿ ಕುಳಿತುಕೊಂಡರೆ ಕುಸುಮ ಅಡಿಕೆಲೆ ತೆಗೆದು ಕೊಂಡು ಬರುವುದು. 'ಏನು ಓದ್ತೋ. ಕಾಲೇಜಿನಿಂದ ಬಂದತಕ್ಷಣ ಸ್ನೇಹಿತರು. ಇಲ್ಲದಿದ್ದರೆ ಪುಸ್ತಕ' ಎನ್ನುವುದು; ಮೆಲ್ಲಗೆ ಭುಜದಮೇಲೆ ಒರಗಿಕೊಂಡು ಪುಸ್ತಕ ಮುಚ್ಚಿಬಿಡುವುದು. ನಾನೇನಾದರೂ ಕೋಪಿಸಿ ಕೊಂಡರೆ, ನಾನು ಬರುವುದೇ ಇಲ್ಲ. ನೀವು ಓದಿಕೊಳ್ಳಿ ಎನ್ನುವಷ್ಟರಲ್ಲಾಗಲೇ ಅವಳ ಕಣ್ಣಲ್ಲಿ ನೀರು. ಇನ್ನು ಅವಳನ್ನು ಸಮಾಧಾನಪಡಿಸಿ ಅಡಿಕೆಲೆ ಹಾಕಿ ಕೊಳ್ಳುವುದರಲ್ಲಿ ಹತ್ತು ಗಂಟೆ. "ನನಗೆ ನಿದ್ದೆ ಬರುತ್ತೇಂದ್ರೆ. ಈ ದೀಪ ಕಣ್ಣು ಚುಚ್ಚುತ್ತೆ" ಅಂತ ಪ್ರಾರಂಭ ಅವಳದು ಅಂತೂ ನನ್ನ ಓದಿಗೆ ಕಲ್ಲು. ನಾನೊಂದು ದಿನ ಹೇಳಿದೆ. ಅದಕ್ಕೇ ಏನೋ ದೊಡ್ಡವರು ಹೇಳುವುದು. 'ವಿವಾಹೋ ವಿದ್ಯಾನಾಶಾಯ' ಎಂದು. ಕುಸುಮ ಆಗೇನೂ ಮಾತನಾಡ ಲಿಲ್ಲ. ಮಾರನೆಯ ದಿನ ಊಟಮಾಡಿಕೊಂಡು ರೂಮಿಗೆ ಬರುವ ಹೊತ್ತಿಗೆ ಅಡಿಕೆಲೆ ತಟ್ಟೆ ಮೇಜಿನ ಮೇಲಿತ್ತು. ಕುಸುಮಾ ಬರುತ್ತಾಳೆಂದು ಕಾದೆ. ಎಷ್ಟು ಹೊತ್ತಿಗೂ ಬರಲಿಲ್ಲ. ಏನೋ ಕೆಲಸ ಮಾಡುತ್ತಿರಬಹುದೆಂದು ಓದುತ್ತಾ ಇದ್ದೆ. ಕ್ಲಾಕ್‌ನಲ್ಲಿ ಹತ್ತುಗಂಟೆ ಹೊಡೆಯಿತು. ಕುಸುಮ ಇನ್ನೂ ಏಕೆ ಬರಲಿಲ್ಲ ಅಂತ ಒಳಗೆ ಹೋದರೆ ಹಾಲ್‌ನಲ್ಲಿ ಚಾಪೆಯಮೇಲೆ ದಿಂಬಿಟ್ಟು ಕೊಂಡು ಮಲಗಿದ್ದಳು. ಕಣ್ಣೀರಿನಿಂದ ದಿಂಬೆಲ್ಲಾ ನೆನೆದುಹೋಗಿತ್ತು. ನನಗೆ ಪಶ್ಚಾತ್ತಾಪವಾಯಿತು.

ನಾನು ಬೆಳಗ್ಗೆ ಓದಬೇಕು. ಕಾಲೇಜಿನಿಂದ ಬರುವುದು ಐದುವರೆ ಗಂಟೆ. ಆಮೇಲೆ ವಾಕಿಂಗು. ನನ್ನ ಜೊತೆಯಲ್ಲಿ ಮಾತನಾಡಲು ಅವಳಿಗೆ ಸಮಯ

ಸಿಕ್ಕುತ್ತಿದ್ದುದು ರಾತ್ರಿ ಊಟವಾದ ಮೇಲೆ. ಆಗಲೂ 'ನಾನು ಓದಬೇಕು. ನೀನು ಅಡ್ಡಿಮಾಡುತ್ತೀ' ಎಂದರೆ ಅವಳಿಗೆಷ್ಟು ಬೇಸರವಾಗಿರಬೇಕು ? ನಾನು ಇದೊಂದನ್ನೂ ಯೋಚಿಸಿರಲಿಲ್ಲ. ನಾನು ಅವಳ ಸೆರಗಿನಿಂದಲೆ ಕಣ್ಣೀರೊರಸಿ, "ಏಳು ಕುಸುಮಾ, ಒಳಗೆ ಮಲಗಿಕೋ. ಚಾಪೆಯ ಮೇಲೇಕೆ ?" ಎಂದೆ. ಅವಳು, "ಏನೂ ಬೇಡ. ನಾನು ಇಲ್ಲೇ ಮಲಗುತ್ತೇನೆ. ನೀವು ಓದಿಕೊಳ್ಳಿ" ಎಂದಳು. ಆಮೇಲೆ ಅವಳನ್ನು ಸಮಾಧಾನಪಡಿಸಿ ಒಡಂಬಡಿಕೆ ಮಾಡಿಕೊಳ್ಳುವಷ್ಟರಲ್ಲಿ ಹನ್ನೊಂದು ಗಂಟೆಯಾಯಿತು.

ಆಗ ಹಾಸಿಗೆಯ ಮೇಲೆ ಅವಳ ಪಕ್ಕದಲ್ಲಿ ಕುಳಿತು ಓದಬೇಕೆಂದೂ, ಅವಳೇನೂ ಅಡ್ಡಿಮಾಡುವುದಿಲ್ಲವೆಂದೂ ತೀರ್ಮಾನವಾಯಿತು. ಊಟಮಾಡಿ ಹಾಸಿಗೆಯ ಮೇಲೆ ಕುಳಿತುಕೊಂಡು ಕುಸುಮ ಪಕ್ಕದಲ್ಲಿ ಮಲಗಿರುವಾಗ ಓದುವುದೆಂದರೆ, ಅದು ಎಷ್ಟು ಮಟ್ಟಿಗೆ ಸಾಗುತ್ತೋ ನೀವೇ ಯೋಚಿಸಿ ನೋಡಿ. ಇಷ್ಟಾದರೂ ನಾನು ಫಸ್ಟ್ ಕ್ಲಾಸ್. ಸಬ್ಜೆಕ್ಟ ಪಡೆದಲು ನನಗೆ. ರಿಸಲ್ಟು ತಿಳಿದ ದಿನ ಕುಸುಮಾನ ಸಂತೋಷಕ್ಕೆ ಪಾರವೇ ಇಲ್ಲ. ರಿಸಲ್ಟು ಶೀಟನ್ನು ಕೈಯಲ್ಲಿಟ್ಟುಕೊಂಡು ಓರೆನೋಟದಿಂದ ನೋಡುತ್ತಾ, "ಹೆಂಗಸರು ಓದುವುದಕ್ಕೆ ಯಾವಾಗಲೂ ಅಡ್ಡಿಮಾಡುತ್ತಾರೆ !" ಎಂದಳು. ನಾನು ಪರೀಕ್ಷೆಯಲ್ಲಿ ತೇರ್ಗಡೆಯಾದರೂ ಕುಸುಮಾನ ಎದುರಿಗೆ ಸೋಲನ್ನೊಪ್ಪಿಕೊಳ್ಳಬೇಕಾಗಿ ಬಂತು. ಅವಳ ಕೆನ್ನೆಯ ಮೇಲೆ ಮೆಲ್ಲಗೆ ಏಟು ಕೊಟ್ಟು "ಹೌದು. ಈಗ ನೀನು ಏನು ಬೇಕಾದರೂ ಅನ್ನು. ಆ ಸರಸ್ವತೀನೂ ಹೆಂಗಸರ ಪಕ್ಷಪಾತಿ. ಓದಿದವರು ನಾವಾದರೂ ಹೆಸರು ನಿಮಗೆ. ಮೊನ್ನೆ ಪಕ್ಕದ ಮನೆ ಜಗಲಿಯ ಮೇಲೆ ಮಾತಾಡಿಕೊಳ್ಳುತ್ತಿದ್ದರು: 'ಕುಸುಮಾ ಅದೃಷ್ಟವತಿ ನೋಡೆ. ಅವಳ ಯಜಮಾನರಿಗೆ ಫಸ್ಟ್‌ಕ್ಲಾಸ್‌ನಲ್ಲಿ ಪ್ಯಾಸು ಆಗಿ ಪಡಲು ಬಂತು' ಅಂತ."

"ಹೌದು ಮತ್ತೆ, ಅದೃಷ್ಟ ಹೌದೋ ಅಲ್ಲವೋ ?"

"ಮಹಾ. ನಾನು ಓದಿದ್ದು ಎಲ್ಲೋ ಹೋಯಿತು."

"ನೀವು ಓದುವುದಕ್ಕೂ ಅಡ್ಡಿಮಾಡುತ್ತಿದ್ದೆನಲ್ಲಾ. ಅದೇನೋ ಶ್ಲೋಕ ಬೇರೆ ಹೇಳಿದಿರಿ ಅವತ್ತು. ಮರೆತುಹೋಯಿತೇನೋ ಪಾಪ !" ಎಂದು ಕುಸುಮಾ ಬಾಯಿಮುಚ್ಚಿಕೊಂಡು ಒಳಗೇ ನಗುತ್ತಿದ್ದಳು. ಅವಳು ನನಗೆ

ಬಹಳ ಸುಂದರವಾಗಿ ಕಂಡಳು. ಹತ್ತಿರಕ್ಕೆಳೆದುಕೊಂಡು ಮುತ್ತಿಟ್ಟೆ; ಅವಳೂ ಸಾಲ ತೀರಿಸಿಬಿಟ್ಟಳು.

ಇದೆಲ್ಲಾ ಬೆಂಗಳೂರಿನಲ್ಲಿ. ಇಲ್ಲಿ ನನ್ನನ್ನು ಕೇಳುವವರು ಯಾರೂ ಇಲ್ಲ. ಬೇಕಾದಷ್ಟು ಹೊತ್ತು ಓದುತ್ತಿದ್ದೆ. ಪರೀಕ್ಷೆ ಹತ್ತಿರ ಬಂತು. ನಾಲ್ಕು ದಿನ ರಜ ತೆಗೆದುಕೊಂಡು ಬಿಟ್ಟಿದ್ದೆ. ಕುಸುಮ ಮೂರು ನಾಲ್ಕು ಕಾಗದ ಬರೆದಿದ್ದಳು. ಜವಾಬು ಬರೆಯಲು ಹೊತ್ತಿರಲಿಲ್ಲ ಈ ಊರಲ್ಲಿ ಕೆಲಸ ಜಾಸ್ತಿಯೆಂದೂ ನಾಲ್ಕೈದು ದಿನಗಳಲ್ಲಿ ಬರೆಯುತ್ತೇನೆಂದೂ ಒಂದು ಕಾರ್ಡು ಬರೆದು ಹಾಕಿದ್ದೆ. ನಾಡಿದ್ದು ಪರೀಕ್ಷೆ. ಇನ್ನೊಂದು ದಿನ ಮಾತ್ರ ಇದೆ. ಚೆನ್ನಾಗಿ ಓದಿ ಬಿಟ್ಟರೆ ಆ ಮೇಲೆ ತಂಟೆಯಿಲ್ಲ. ಕುಸುಮಾಗೆ ಮೂರು ಕಾಗದಗಳಿಗೂ ದೊಡ್ಡದಾಗಿ ಜವಾಬು ಬರೆಯುವುದು ಅವಳಿಗೆ ಎಷ್ಟು ಕೋಪ ಬಂದಿದೆಯೋ ನೋಡಬೇಕು ಎಂದುಕೊಂಡು ಓದುತ್ತಿದ್ದೆ. ಹಾಗೇ ಸ್ವಲ್ಪ ತೂಕಡಿಕೆ ಬಂದಿರಬೇಕು.

ರಾಮರಾವ್ ಎಂದು ಕೂಗಿದ ಹಾಗಾಯಿತು. ನನ್ನ ಹೆಸರು ಹಿಡಿದು ಕೂಗುವವರು ಯಾರು ಇಲ್ಲಿ ? ಎಂದು ತಟ್ಟನೆ ಎದ್ದು ಬಾಗಿಲು ತೆಗೆದು ಹೊರಗೆ ಬಂದೆ. ಬಂದವನು ನನ್ನ ಭಾವಮೈದುನ ಮುಕುಂದ. "ಇದೇನು ಈಗ ಬಂದೆ ? ಅಪರೂಪ ದರ್ಶನ. ಮನೆಯಲ್ಲಿ ಎಲ್ಲರೂ ಕ್ಷೇಮವೋ ?" ಎಂದೆ. "ಊಂ. ಎಲ್ಲರೂ ಚೆನ್ನಾಗಿದ್ದಾರೆ."

ಇಬ್ಬರೂ ಹೊಟೆಲಿಗೆ ಹೋಗಿ ಊಟ ಮಾಡಿಕೊಂಡು ಬಂದೆವು.

"ಏನು ಭಾವ, ಬಹಳ ಕೆಲಸ ಅಂತ ಕಾಣುತ್ತೆ ಈ ಊರಿನಲ್ಲಿ ?"

"ಹೌದಪ್ಪ, ಏನು ಮಾಡುವುದು, ಸರ್ಕಾರಿ ಕೆಲಸ."

ಮೇಜಿನಮೇಲಿದ್ದ ಪುಸ್ತಕನೋಡಿ, ಮುಕುಂದ "ಏನು ಲೋಕಲ್ ಟೆಸ್ಟಿಗೆ ಓದುತ್ತೀರೇನು ?" ಎಂದ.

"ಊಂ. ನಾಳೆ ಪರೀಕ್ಷೆ. ಏನೋ ಸುಮಾರಾಗಿ ಓದುತ್ತಿದೇನೆ."

"ಸರಿ. ಹಾಗಾದರೆ ನಾಳೆ ರಾತ್ರಿ ಬೆಂಗಳೂರಿಗೆ ಬರುತ್ತೀರಾ ? ನಾನು ಬಂದದ್ದು ನಿಮಗೆ ಓದಲು ತೊಂದರೆಯಾಯಿತೇನೊ."

"ಇಲ್ಲ. ನಿನ್ನಿಂದ ಏನು ಅಡ್ಡಿ ? ಆದರೆ ಬೆಂಗಳೂರಿಗೆ ಈಗೆಲ್ಲಿ ಬರುವುದು ?"

"ಅಲ್ಲಾ, ಅಕ್ಕನಿಗೆ ಮೈಲಿ ಸರಿಯಿಲ್ಲ. ಅಣ್ಣ ನಿಮ್ಮನ್ನು ಕರೆದುಕೊಂಡು ಬಾ ಎಂದರು." ನನಗೇನೋ ಒಂದು ತರಹವಾಯಿತು. "ಏಕೊ, ಏನಾಗಿದೆ ?" ಎಂದೆ.

"ಏನೂ ಇಲ್ಲ. ಒಂದೆರಡು ದಿನ ಜ್ವರ ಬಂದಿತ್ತು; ಅಷ್ಟೇ. ನಿಮಗೆ ಹೇಗೂ ನಾಳೆ ನಾಡಿದ್ದು ರಜವಿದೆಯಲ್ಲ, ಬಂದು ನೋಡಿಕೊಂಡು ಹೋಗಬಹುದು. ಈಗ ಆರೋಗ್ಯವಾಗಿದಾಳೆ. ನಾನು ಹಿರಿಯೂರಿನಲ್ಲಿ ಸ್ನೇಹಿತನನ್ನು ನೋಡಿಕೊಂಡು ನಾಳೆ ಸಾಯಂಕಾಲ ಬರುತ್ತೇನೆ. ರಾತ್ರಿಗೆ ಇಬ್ಬರೂ ಹೊರಡೋಣ" ಎಂದ.

ಮುಕುಂದ ಹಿರಿಯೂರಿಗೆ ಹೋದ. ನಾನು ಪುಸ್ತಕ ತೆಗೆದೆ. ಓದಲು ಮನಸ್ಸು ಬರಲಿಲ್ಲ. ನಾನು ಅವಳ ಕಾಗದಕ್ಕೆ ಜವಾಬು ಕೊಡದಿದ್ದುದು ತಪ್ಪಾಯಿತು. ಅವಳು ಬಹಳ ಸೂಕ್ಷ್ಮದ ಹುಡುಗಿ. ಒಂದು ದಿನ ಮನೆಗೆ ಬರಲು ಹೊತ್ತಾಯಿತೆಂದರೆ ಅಳುತ್ತಾ ಕೂತುಬಿಡುತ್ತಿದ್ದಳು. ಅಂಥವಳಿಗೆ ಹದಿನೈದು ದಿನ ಕಾಗದ ಬರೆಯದೆ ಇದ್ದುದರಿಂದ ಏನೇನೋ ಭಾವಿಸಿಕೊಂಡು ಜ್ವರ ಬಂದಿರಬೇಕು. ಇದೆಲ್ಲಾ ನನಗೆ ಏಕೆ ತೋರಲಿಲ್ಲವೋ ? ನಾಳೆ ರಾತ್ರಿ ಖಂಡಿತ ಹೊರಟುಬಿಡುವುದು ಎಂದುಕೊಂಡೆ. ಓದುವುದಂತೂ ಸಾಧ್ಯವಾಗಲಿಲ್ಲ. ರಾತ್ರಿಯೆಲ್ಲ ನಿದ್ದೆಯೂ ಬರಲಿಲ್ಲ.

ಮಾರನೆಯ ದಿನ ಪರೀಕ್ಷೆ. ಬರೆಯಲು ಒಂದೂ ತೋರಲಿಲ್ಲ. ಕುಸುಮಾ ಚಿತ್ರ ಕಣ್ಣಿಗೆ ಕಟ್ಟಿದಂತಿತ್ತು. ಹೊರಡುವಾಗ ಅವಳು ಮರೆಯದೆ ಕಾಗದ ಬರೆಯಬೇಕೆಂದು ಬಾರಿಬಾರಿಗೂ ಹೇಳಿದ್ದು, ನೀರು ತುಂಬಿದ ಕಣ್ಣುಗಳನ್ನು ಒರೆಸಿಕೊಂಡು, ನನ್ನ ಕಣ್ಣೀರೊರಸಿ ಕಳಿಸಿದ್ದು ಎಲ್ಲಾ ಜ್ಞಾಪಕಕ್ಕೆ ಬಂತು. ಏನೋ ಒಂದು ಗೀಚಿಹಾಕಿ ಮನೆಗೆ ಬಂದೆ. ಬರುವ ಹೊತ್ತಿಗೆ ಮುಕುಂದ ಬಂದಿದ್ದ.

"ಹೊರಡೋಣವೇನು ಭಾವ ?"

"ಕುಸುಮಾ ಹೇಗಿದಾಳೆ ?"

"ಒಂದೆರಡು ದಿನ ಜ್ವರ ಬಂದಿತ್ತು ಅಷ್ಟೆ, ಈಗ ಏನೂ ಇಲ್ಲ. ಆದರೆ ಹೊಟ್ಟೆಗೆ ಏನೂ ತೆಗೆದುಕೊಳ್ಳುವುದಿಲ್ಲ. ಯಾವಾಗಲೂ ಮಲಗಿರುತ್ತಾಳೆ. ಅಣ್ಣ ಗಟ್ಟಿಯಾಗಿ ಹೇಳಿದರೆ ಅಳುತ್ತಾ ಕೂತುಬಿಡುತ್ತಾಳೆ. ನಿಮ್ಮಿಂದ ಕಾಗದ ಬರಲಿಲ್ಲ ಎಂದು ಕಮಲಾನ ಮುಂದೆ ಹೇಳಿದಳಂತೆ. ಅದಕ್ಕೆ ಅಣ್ಣ ನಿಮ್ಮನ್ನು ಕರೆದುಕೊಂಡು ಬಾ ಎಂದು ಹೇಳಿದರು."

ನಾನು ನಾಲ್ಕು ದಿನ ರಜಾಕ್ಕೆ ಬರೆದು ಹೊರಟುಬಿಟ್ಟೆ. ರೈಲಿನಲ್ಲಿ ಹೆಚ್ಚೇನೂ ಗಲಾಟೆಯಿರಲಿಲ್ಲ. ಬೆಂಚಿನಮೇಲೆ ಹಾಸಿಗೆ ಹಾಸಿ ಮಲಗಿದೆವು. ಮುಕುಂದ ಸ್ವಲ್ಪ ಹೊತ್ತಿನಲ್ಲೇ ನಿದ್ದೆ ಮಾಡಿದ. ನನಗೆ ಮಾತ್ರ ನಿದ್ದೆ ಬರಲಿಲ್ಲ. ನನಗೆ ತುಂಬಾ ಕುಸುಮಾನ ಯೋಚನೆ. ರೈಲು ಬಹಳ ನಿಧಾನ ವಾಗಿ ಹೋಗುತ್ತಿರುವಂತೆ ತೋರಿತು. ಮುಕುಂದ ಸುಖವಾಗಿ ನಿದ್ದೆ ಮಾಡು ತ್ತಿದ್ದ. ಮಲ್ಲೇಶ್ವರದಲ್ಲಿ ಎಬ್ಬಿಸಿದ ಮೇಲೇ ಅವನಿಗೆ ಎಚ್ಚರ. ನನ್ನನ್ನು ನೋಡಿ, "ಏನು ಭಾವ, ನಿದ್ದೆ ಮಾಡಲಿಲ್ಲವೇ ?" ಎಂದ.

"ಈ ಬೆಳಕು, ತಗಣಿಕಾಟವಲ್ಲಿ ನಿದ್ದೆ ಬರಲಿಲ್ಲಪ್ಪ," ಎಂದೆ.

ಕುಸುಮಾ ಇನ್ನೂ ಮಂಚದ ಮೇಲೆ ಮಲಗಿದ್ದಳು. ನಾನು ರೂಮಿನಲ್ಲಿ ಹೋಗಿ ಮೆಲ್ಲಗೆ ಬಾಗಿಲು ಮುಚ್ಚಿ ಮಂಚದ ಮೇಲೆ ಕುಳಿತುಕೊಂಡೆ.

"ಕುಸುಮಾ" ಎಂದೆ. ಕಣ್ಣು ಬಿಟ್ಟಳು. ಅವಳ ಮುಖವೆಲ್ಲ ಬಾಡಿ ಹೋಗಿತ್ತು. ಅವಳ ಕೈಯನ್ನು ನನ್ನ ಕೈಯಲ್ಲಿ ತೆಗೆದುಕೊಂಡು ಮೆಲ್ಲಗೆ ಮುತ್ತಿಟ್ಟೆ,

"ಏನು ಕುಸುಮಾ ಹೀಗಿದ್ದೀ ? ಮೈಲಿ ಸ್ವಸ್ಥವಿಲ್ಲದಿದ್ದರೆ ಮೊದಲೇ ಬರೆಯಬಾರದಾಗಿತ್ತೇ ? ನನಗೆ ಗೊತ್ತೇ ಇರಲಿಲ್ಲ" ಎಂದೆ.

"ಬರೆದಿದ್ದರೂ ಏನು ಉಪಯೋಗವಾಗುತ್ತಿತ್ತು ?" ಎನ್ನುವಷ್ಟರಲ್ಲಿ ಕಣ್ಣಲ್ಲಿ ನೀರು ಬಂತು. ಅವಳು ತಟ್ಟನೆ ನನ್ನ ತೊಡೆಯ ಮೇಲೆ ಮಲಗಿ ಕೊಂಡು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಳು.

ಅವಳ ಮಾತಿನ ಅರ್ಥ ತಿಳಿಯಿತು. ಅವಳನ್ನು ಎದೆಗೆ ಅಪ್ಪಿಕೊಂಡು, ಮುಂಗುರುಳನ್ನು ಸರಿಮಾಡುತ್ತಾ "ಅಲ್ಲಾ ಕುಸುಮ, ಎರಡು ದಿನ ಕಾಗದ ಬರೆಯುವುದು ನಿಧಾನವಾದರೆ ಹೀಗೆ ಉಪವಾಸ ಮಾಡಿ ಎಲ್ಲರಿಗೂ ಗಾಬರಿ

ಮಾಡಬೇಕೇ ? ಏನೋ ಪರೀಕ್ಷೆಯಿತ್ತು; ಬರೆಯಲಿಲ್ಲ. ನನ್ನದೂ ತಪ್ಪಾಯಿತು, ಕ್ಷಮಿಸು. ಇನ್ನೆಂದಿಗೂ ನಿನಗೆ ಹೀಗೆ ಮಾಡಲು ಅವಕಾಶ ಕೊಡುವುದಿಲ್ಲ" ಎಂದೆ.

ಕುಸುಮಾ ಹಾಗೇ ಮಲಗಿದ್ದಳು. ಇಷ್ಟರಲ್ಲಿ ಬಾಗಿಲು ತಟ್ಟಿದ ಶಬ್ದವಾಯಿತು. ಬಾಗಿಲು ತೆಗೆದು ನೋಡಿದರೆ ಮುಕುಂದ ಕಾಫಿ ತಂದಿದ್ದ. 'ಅಕ್ಕನಿಗೆ ಕುಡಿ ಎಂತ ಹೇಳಿ ಭಾವ' ಎಂದು ಕೊಟ್ಟು ಹೋದ. ನಾನೇ ಕಾಫಿ ಕೊಟ್ಟೆ. 'ನನಗೆ ಸೇರೋಲ್ಲ' ಎಂದಳು ಕುಸುಮ. ಬಲವಂತಪಡಿಸಿದ ಮೇಲೆ ಅರ್ಧ ಲೋಟ ಕಾಫಿ ಕುಡಿದಳು. ಆಮೇಲೆ ನಾನು ಎರಡು ಮೂರು ದಿನವಿದ್ದೆ. ಕುಸುಮ ಈಗ ಎದ್ದು ಓಡಾಡುತ್ತಿದ್ದಳು. ರಜ ಮುಗಿದದ್ದರಿಂದ ಚಿತ್ರದುರ್ಗಕ್ಕೆ ಹೊರಟೆ. ಈ ಸಲ ಹುಷಾರಾಗಿದ್ದೆ. ಮೂರು ದಿನಕ್ಕೊಂದು ಕಾಗದ ಬರೆಯುತ್ತಿದ್ದೆ. ೧೫ ದಿನದೊಳಗೆ ಮನೆಮಾಡಿ ಕಾಗದ ಬರೆದೆ. ಮಾವನವರು ಕುಸುಮಾನ ಕರೆದುತಂದು ಬಿಟ್ಟು ಹೊರಟುಹೋದರು.

ಈಗ ನನ್ನ ಮತ್ತು ಕುಸುಮಾನ ಸಂಸಾರ. ದೊಡ್ಡವರು ಯಾರೂ ಇಲ್ಲ. ಎಲ್ಲಾ ಹುಡುಗಾಟ. ಬೆಳಗ್ಗೆ ಸ್ನಾನಮಾಡಿ ಕಾಫಿ ತೆಗೆದುಕೊಳ್ಳುವುದು. ಹತ್ತು ಗಂಟೆಯ ತನಕ ಮನೆಯಲ್ಲಿರುತ್ತೇನೆ. ಸ್ನೇಹಿತರ ಕಾಟವಿಲ್ಲವೆಂದು ಕುಸುಮಾಗೆ ಬಹಳ ಸಂತೋಷ. ಸಾಯಂಕಾಲ ಆಫೀಸಿನಿಂದ ಬಂದು ಕಾಫಿ ತೆಗೆದುಕೊಂಡು ಇಬ್ಬರೂ ವಾಕ್ ಹೋಗುವುದು. ನಾವಿಬ್ಬರೂ ಹೋಗುವುದು ಆ ಊರಿನವರಿಗೆ ಬಹಳ ತಮಾಷೆ. 'ಬೆಂಗಳೂರಿನವರು, ನಿತ್ಯ ತಿರುಗಾಡಲು ಹೋಗುತ್ತಾರೆ,' ಎಂದು ಅವರು ಮಾತನಾಡಿಕೊಳ್ಳುವುದು ನಮ್ಮ ಕಿವಿಗೆ ಬೀಳುತ್ತಿತ್ತು. ನಾವು ಹೊರಟರೆ, ಊರಿನ ಹೆಂಗಸರೆಲ್ಲ ಹೊರಗೆ ಬಂದು ನಿಂತುಕೊಳ್ಳುತ್ತಿದ್ದರು.

ಕುಸುಮಾಗೆ ನಾಚಿಕೆ. "ಎಲ್ಲರೂ ಹೊರಗೆ ಬಂದು ನಿಂತುಕೊಳ್ಳುತಾರೆ. ನಾನು ಬರೊಲ್ಲ" ಎನ್ನುವಳು.

"ನನ್ನ ಜೊತೆಗೆ ಮಾತಾಡಿದರೂ ಅವರೆಲ್ಲ ಹಾಸ್ಯ ಮಾಡುತ್ತಾರೆ. ನಾಳೆಯಿಂದ ಮಾತಾಡಬೇಡ," ಎಂದು ನಾನು ಹೇಳುವೆನು.

ಹೀಗೆ ದಿನಗಳು ಕಳೆಯುತ್ತಿತ್ತು.

* * * * * *

ಒಂದು ಸಂಜೆ ಆಫೀಸಿನಿಂದ ಬಂದೆ. ಕುಸುಮಾ ಬಂದು ಬಾಗಿಲು ತೆಗೆದಳು. ಅವಳ ಮುಖ ನಿತ್ಯದಂತಿರಲಿಲ್ಲ. ಗಂಭೀರವಾಗಿತ್ತು. "ಏನು ಸಮಾಚಾರ ?" ಎಂದೆ. "ಏನೂ ಇಲ್ಲ, ಕಾಲು ತೊಳೆದುಕೊಳ್ಳಿ" ಎಂದಳು. ಮುಖ ತೊಳೆದುಕೊಂಡಮೇಲೆ ವಾಂಗಿಭಾತು, ಕಾಫಿ ಕೊಟ್ಟಳು. ತೆಗೆದು ಕೊಂಡು, "ವಾಕ್ ಹೋಗೋಣವೇ ?" ಎಂದೆ.

"ಬೇಡ, ಇವತ್ತೇಕೋ ಬೇಜಾರು."

ಬೇಜಾರಿಗೆ ಕಾರಣ ಗೊತ್ತಾಗಲಿಲ್ಲ. ಹಾಗೇ ಯೋಚಿಸಿ, "ಇವತ್ತೇ ನಾದರೂ ಕಾಗದ ಬಂತೇ ?" ಎಂದು ಕೇಳಿದೆ.

'ಊಂ' ಎಂದು ಕಾಗದ ಕೊಟ್ಟಳು. ಅದು ರಿಸಲ್ಟು ಷೀಟು. ಅದರಲ್ಲಿ ನನ್ನ ನಂಬರೇ ಇರಲಿಲ್ಲ. ನಾನು ಫೇಲು. ನನಗೇನೂ ಅಷ್ಟು ಕೆಡಕೆನಿಸಲಿಲ್ಲ. ನಾನು ಸರಿಯಾಗಿ ಬರೆದಿರಲಿಲ್ಲವೆಂದು ನನಗೆ ಗೊತ್ತಿತ್ತು. ತಿರುಗಿ ನೋಡಿದೆ. ಕುಸುಮಾ ಅಲ್ಲಿರಲಿಲ್ಲ. ಒಳಗೆ ಹೋಗಿ ನೋಡಿದರೆ ಮಂಚದ ಮೇಲೆ ಹಾಸಿ ಗೆಗೆ ಒರಗಿಕೊಂಡು ಅಳುತ್ತಿದ್ದಳು.

ಹತ್ತಿರ ಹೋಗಿ ಕೂತುಕೊಂಡು, "ಅಳುವುದೇಕೆ, ಕುಸುಮಾ, ಹೋದರೆ ಹೋಯಿತು" ಎಂದೆ.

"ನಾನೇ ಅದಕ್ಕೆ ಕಾರಣ. ಮುಕುಂದ ಅವತ್ತು ಬಂದು ಹೇಳದಿದ್ದರೆ ನೀವು ಮನಸ್ಸಿಟ್ಟು ಬರೆಯುತ್ತಿದ್ದಿರಿ. ಪ್ಯಾಸಾಗುತ್ತಿತ್ತು." ಎಂದು ಅಳಲಾ ರಂಭಿಸಿದಳು.

"ಏನು ಮಹಾಪರೀಕ್ಷೆ ? ಹೋದರೆ ಹೋಯಿತು. ಇನ್ನೆರಡು ತಿಂಗಳಿಗೆ ನಿನಗೋಸ್ಕರ ಓದಿ ಪ್ಯಾಸು ಮಾಡುತ್ತೇನೆ" ಎಂದು ಕಣ್ಣೀರೊರಸಿದೆ.

ಕುಸುಮಾ ಎಷ್ಟೋ ಹೊತ್ತು ನನಗೊರಗಿಕೊಂಡು ಹಾಗೇ ಕೂತಿದ್ದಳು. ಅವಳನ್ನು ಸಮಾಧಾನಪಡಿಸುವುದು ದೊಡ್ಡ ಕಷ್ಟವೇ ಆಯಿತು.

* * * * * *

ಇನ್ನೊಂದು ತಿಂಗಳಿಗೆ ತಿರುಗಿ ಪರೀಕ್ಷೆಗೆ ಕಟ್ಟಿದೆ. ಆದರೆ ಈ ಸಲ ಮೊದ ಲಿನಂತೆ ಓದಲಾಗಲಿಲ್ಲ. ಆಫೀಸಿನಲ್ಲಿ ಕೆಲಸ ಜಾಸ್ತಿ. ಬೆಳಗ್ಗೆಯೂ ಹೋಗ ಬೇಕಾಗುತ್ತಿತ್ತು. ಸಾಯಂಕಾಲ ಮನೆಗೆ ಬರುವ ಹೊತ್ತಿಗೆ ಬೇಸರವಾಗಿರು

ತ್ತಿತ್ತು. ಕುಸುಮಾ ಕೂಡ ಹರಟೆಹೊಡೆಯುವುದು. ರಾತ್ರಿ ಊಟಮಾಡಿ ಕೊಂಚ ಓದುವುದು. ಅಷ್ಟರಲ್ಲಿ ಅವಳು ಹಾಲು ಅಡಕೆಲೆ ತೆಗೆದುಕೊಂಡು ಬರುತ್ತಿದ್ದಳು. ನಾನೇನಾದರೂ ಸ್ವಲ್ಪ ತೂಕಡಿಸುತ್ತಿದ್ದರೆ ಸಾಕು. ಮೆಲ್ಲನೆ ಹಿಂದಿನಿಂದ ಬಂದು ಕಣ್ಣುಮುಚ್ಚುವಳು. ಗಾಬರಿಯಾಗೆದ್ದರೆ "ಇದೇ ನೀವು ಓದುವುದು; ಸಾಕು, ಇಲ್ಲಿ ಬನ್ನಿ" ಎಂದು ಹಾಲು ಕೊಟ್ಟು ಅಡಕೆಲೆ ಮಡಿಸಿಕೊಡುವುದು. ಇಷ್ಟಾದ ಮೇಲೆ ನಾನು ಮೇಜಿನ ಹತ್ತಿರ ಓದುತ್ತಿದ್ದರೆ ಅವಳಿಗೆ ನಿದ್ದೆ ಮಾಡಲು ಹೆದರಿಕೆಯಂತೆ. ಮಂಚದಮೇಲೆ ಕೂತುಕೊಂಡರೆ ಭುಜದಮೇಲೆ ಮುಖವಿಟ್ಟುಕೊಂಡು "ಇನ್ನೆಷ್ಟು ಓದಬೇಕು. ನನಗೆ ನಿದ್ದೆ ಬರುತ್ತೆ" ಅಂತ ನನ್ನ ಕ್ರಾಪನ್ನೆಲ್ಲ ಕೆಡಿಸುವುದು. ಈ ಕೀಟಲೆಯಲ್ಲಿ ನಾನು ಓದಿದಂತೇ ಆಯಿತು. ಸುಖವಾಗಿ ರಗ್ಗು ಎಳೆದುಕೊಂಡು ಮಲಗುವುದು.

ಈ ಮಧ್ಯೆ ಕುಸುಮಾ ಸೋದರಮಾವ ಶ್ಯಾಮರಾಯರಿಗೆ ಅಲ್ಲಿಗೇ ವರ್ಗವಾಯಿತು. ಅವರು ಅಲ್ಲಿಗೆ ಬಂದ ಮಾರನೆಯ ದಿನವೇ ನಮ್ಮ ಮನೆಗೆ ಬಂದರು. ಕುಶಲಪ್ರಶ್ನೆಗಳಾದನಂತರ ಶ್ಯಾಮರಾಯರು, "ಕುಸುಮಾನ ಕಳಿಸಿ ಕೊಡಿ. ನಮ್ಮ ಮನೆಯಲ್ಲಿ ಕೆಲವು ದಿನಗಳಿರಲಿ. ನಮ್ಮ ಹುಡುಗಿಯರು ನೋಡಬೇಕೆನ್ನುತ್ತಾರೆ," ಎಂದರು.

ನಾನು "ಆಗಲಿ, ಅದಕ್ಕೇನು ಕಳಿಸುತ್ತೇನೆ," ಎಂದೆ.

ಅವರು ಹೊರಟು ಹೋದಮೇಲೆ ಕುಸುಮಾನ ಕರೆದೆ. ಉತ್ತರ ಬರ ಲಿಲ್ಲ. ಒಳಗೆ ನೋಡಿದೆ. ಅಡಿಗೆ ಮಾಡುತ್ತಿದ್ದಳು. ಬೆಂಕಿಯ ಮುಂದಿದ್ದುದ ರಿಂದ ಮುಖವೆಲ್ಲ ಕೆಂಪಾಗಿತ್ತು. ಮುಂಗುರುಳುಗಳು ಹಣೆಯ ಮೇಲೆ ಹರಿದಾ ಡುತ್ತಿದ್ದವು. ಒಲೆಯಮೇಲೆ ಹಾಲಿಟ್ಟು ಅದನ್ನೇ ನೋಡುತ್ತಾ ಕೂತಿದ್ದಳು. ನಾನು ಮೆಲ್ಲಗೆ ಹೋಗಿ ಕಣ್ಣು ಮುಚ್ಚಿದೆ. ಕುಸುಮ ಗಾಬರಿಯಾಗಿ ಕೂಗಿ ಕೊಳ್ಳುವುದರಲ್ಲಿದ್ದಳು. ನಾನು ಕೈತೆಗೆದು "ಇದೇಕೆ ಕುಸುಮಾ, ಹೆದರಿ ದೆಯಾ?" ಎಂದೆ.

ಕುಸುಮಾ ತಟ್ಟನೆ ನನ್ನನ್ನು ಆಲಿಂಗಿಸಿಕೊಂಡಳು. ಆ ಮೇಲೆ ನಿಧಾನ ವಾಗಿ "ಇದೇನೊಂದ್ರೆ ಹಾಸ್ಯ! ನನಗೆಷ್ಟು ಹೆದರಿಕೆಯಾಯಿತು ಅಂತೀರಿ. ಈ ಮನೆಯಲ್ಲಿ ಒಬ್ಬಳೇ ಇರೋದೆ ನನ್ನ ಕೈಲಾಗೋದಿಲ್ಲ. ನೀವೋ

ಆಫೀಸ್ ರೂಂ ಬಿಟ್ಟು ಒಳಗೇ ಬರೋಲ್ಲ. ನನಗೆ ಈ ಕೋಣೆಗೆ ಬಂದು ಅಡಿಗೆ ಮಾಡಲು ಹೆದರಿಕೆ " ಎಂದಳು.

" ಒಳ್ಳೇ ಹುಡುಗಿ ನೀನು. ಮೂರು ಹೊತ್ತೂ ನಿನ್ನ ಜೊತೆಯಲ್ಲಿರುವುದಕ್ಕೆ ಆಗುತ್ತೆಯೇ ? ನಾಳೆ ಅಮ್ಮನಿಗೆ ಬಾ ಎಂದು ಬರೆಯುತ್ತೇನೆ " ಎಂದೆ. ರಾತ್ರಿ ಕಾಗದ ಬರೆಯುವವರೆಗೆ ಬಿಡಲಿಲ್ಲ. ಬೆಳಗ್ಗೆ ಎಂದರೆ ನನಗೆ ಬರೆಯುವುದಕ್ಕೆ ಆಗುವುದಿಲ್ಲ ಎಂದು ಅವಳ ತರ್ಕ. ಯಾವಾಗಿನಂತೆ ಅವಳ ಮಾತಿಗೇ ಜಯವಾಗಿ ರಾತ್ರಿಯೇ ಕಾಗದ ಬರೆದೆ. " ಈಗಲೇ ಪೋಸ್ಟ್ ಮಾಡಿ ಬರುತ್ತೇನೆ " ಎಂದೆ. " ಏನೂ ಬೇಡ. ನಾನು ಬೆಳಗ್ಗೆ ಪೋಸ್ಟ್ ಮಾಡಿಸುತ್ತೇನೆ " ಎಂದು ಕಾಗದ ಕಿತ್ತುಕೊಂಡಳು. ನಾನೆಲ್ಲಿ ಹೊರಗೆ ಹೋಗುತ್ತೇನೋ ಎಂತ ಭಯ ಅವಳಿಗೆ.

ಮೂರು ದಿನಗಳಲ್ಲಿ ಅಮ್ಮ ಬಂದಳು. ಅಮ್ಮ ಬಂದದ್ದು ಕುಸುಮಾಗೆ ಇನ್ನೂ ಅನುಕೂಲವಾಯಿತು. ಎಲ್ಲಾ ಕೆಲಸಗಳನ್ನೂ ಅವಳೇ ಮಾಡುವಳು. ' ನಿನ್ನ ಸೊಸೆ ಮಾಡಲಿ. ನೀನು ಸುಮ್ಮನಿರಮ್ಮ ' ಎಂದರೆ ' ಅಡಿಗೆಯವನನ್ನು ಇಡು. ಆ ಹುಡುಗಿಯನ್ನೇಕೆ ಹಿಂಸೆ ಮಾಡುತ್ತೀ ಪಾಪ ! ಮಲಗಿರಲಿ ' ಎನ್ನುವಳು. ಯಾರು ಹಿಂಸೆ ಮಾಡುತ್ತಿದ್ದರೋ ನಮಗೇ ಗೊತ್ತು. ಕುಸುಮಾ ಅತ್ತೆಯ ಎದುರಿಗೆ ಅವರಿಗಿಂತ ಗಂಭೀರವಾಗಿರುವಳು. ಆದರೆ ನನ್ನ ರೂಮಿಗೆ ಬಂದೊಡನೆಯೇ ಅವಳ ಗಾಂಭೀರ್ಯ ಎಲ್ಲಿ ಹೋಗುತ್ತಿತ್ತೋ ? ಒಳಗೆ ಬಂದು ಬಾಗಿಲು ಹಾಕಿದಳೆಂದರೆ ಅವಳು ಚೆಲ್ಲಾಟದ ಹುಡುಗಿ. ಮೆಲ್ಲಗೆ ಹತ್ತಿರ ಬಂದು ಕುಳಿತುಕೊಳ್ಳುವುದು; ಪುಸ್ತಕದ ಹಾಳೆಗಳನ್ನು ತಿರುವಿಹಾಕುವುದು; ಇನ್ನೂ ಸುಮ್ಮನಿದ್ದರೆ ಪುಸ್ತಕ ಮುಚ್ಚಿಬಿಡುವುದು. ಅಲ್ಲಿಗೆ ನನ್ನ ಓದು ಮುಗಿಯಿತು. ನಾನೊಂದು ದಿನ ರೇಗಿಕೊಂಡು " ಕುಸುಮಾ ಸುಮ್ಮನೆ ತೊಂದರೆ ಮಾಡಬೇಡ. ನಿನಗೆ ನಿದ್ದೆ ಬಂದರೆ ನೀನು ಮಲಗಿಕೊ " ಎಂದೆ. ಅವಳು ಸ್ವಲ್ಪ ಹೊತ್ತು ಸುಮ್ಮನಿದ್ದು ಹೋಗಿ ಮಲಗಿಕೊಂಡಳು. ನಾನು ಓದುತ್ತಿದ್ದೆ. ಅರ್ಧ ಗಂಟೆಯೊಳಗೆ ನನಗೆ ವಿಪರೀತ ನಿದ್ದೆ ಬಂತು. ತಡೆಯಲಾಗಲಿಲ್ಲ. ಬೆಳಗ್ಗೆ ಬೇಗ ಏಳುವುದೆಂದುಕೊಂಡು ಮಲಗಿದೆ. ಕುಸುಮಾ ತುಂಬಾ ಹೊದ್ದುಕೊಂಡು ಮಂಚದ ಕೊನೆಗೆ ಮಲಗಿದ್ದಳು. ನಿದ್ದೆಯಿರಬಹುದೆಂದು ನಾನು ಮಲಗಿದೆ.

ಬೆಳಗ್ಗೆ ನನಗೆ ಎಚ್ಚರಿಕೆಯಾದಾಗ ಏಳೂವರೆಯಾಗಿತ್ತು. ನಿತ್ಯವೂ ಕುಸುಮಾ ಎಬ್ಬಿಸುತ್ತಿದ್ದಳು. ಇವತ್ತೇನೋ ಮರೆತಿರಬಹುದು ಎಂದುಕೊಂಡು ಮುಖ ತೊಳೆದುಕೊಳ್ಳಲು ಹೋದೆ. ನೀರು ತೋಡಿತ್ತು. ಮುಖ ತೊಳೆದು ಕೊಂಡು ಬರುವ ಹೊತ್ತಿಗೆ ಮೇಜಿನ ಮೇಲೆ ಕಾಫಿಯಿತ್ತು. ಕುಡಿದು ಹಾಗೇ ಓದುತ್ತಿದ್ದೆ. ಅಲಾರಂ ಶಬ್ದವಾಯಿತು. ಇದೇನು ಈಗ ಎಂದು ಕೈಗಡಿಯಾರ ವನ್ನು ನೋಡಿದೆ. ಒಂಬತ್ತೂವರೆಯಾಗಿತ್ತು. ಸ್ನಾನಕ್ಕೆ ಹೋದೆ. ನೀರು ತೋಡಿ ಟವಲು ತಂದಿಟ್ಟಿತ್ತು. ಸ್ನಾನಮಾಡಿ ಬರುವ ಹೊತ್ತಿಗೆ ಮೇಜಿನಮೇಲೆ ಕನ್ನಡಿ ಬಾಚಣಿಗೆ ಬ್ರಷ್ ಇಟ್ಟಿತ್ತು. ನಿತ್ಯ ಇವನ್ನೆಲ್ಲಾ ತೆಗೆದುಕೊಡುವುದು ಕುಸುಮಾನ ಕೆಲಸ. ಇವತ್ತೇನೋ ಕೆಲಸವಿರಬಹುದು ಎಂದು, ಕ್ರಾಪ್ ಬಾಚಿಕೊಂಡು ಊಟಕ್ಕೆ ಹೋದೆ. ಕುಸುಮಾ ನನ್ನ ಜೊತೆಗೆ ಕುಳಿತರೂ ಬೇಗನೆ ಎದ್ದುಬಿಟ್ಟಳು. ಕೈ ತೊಳೆದುಕೊಂಡು ಬರುವ ಹೊತ್ತಿಗೆ ಮೇಜಿನ ಮೇಲೆ ಅಡಿಕೆಲೆ ಸಿದ್ಧವಾಗಿತ್ತು. ಬಟ್ಟೆಹಾಕಿಕೊಂಡು ಆಫೀಸಿಗೆ ಹೋದೆ.

ತಿರುಗಿ ಬಂದಾಗ ಆರುಗಂಟೆ. ಅಮ್ಮ ಪುರಾಣಕ್ಕೆ ಹೋಗಿದ್ದಳು ಕುಸುಮ ನಿತ್ಯದಂತೆ ಬಾಗಿಲು ತೆಗೆದರೂ ರೂಮಿಗೆ ಬರಲಿಲ್ಲ. ನಾನು ಬಟ್ಟೆ ಬಿಚ್ಚಿ ಮುಖ ತೊಳೆದುಕೊಡು ಬರುವ ಹೊತ್ತಿಗೆ ತಿಂಡಿ ಸಿದ್ಧವಾಗಿತ್ತು. ತಟ್ಟೆ ಯನ್ನು ಕೈಗೆ ತೆಗೆದುಕೊಂಡು "ಕುಸುಮಾ" ಎಂದೆ.

ಬಾಗಿಲಲ್ಲೇ ನಿಂತು "ಏನು ?" ಎಂದಳು.

"ಏನೂ ಇಲ್ಲ. ಅದೇನು ಅಲ್ಲೇ ನಿಂತಿದ್ದೀ. ಏನು ಸಮಾಚಾರ ?"

ಕುಸುಮಾ ಅಲ್ಲೇ ನಿಂತು "ಮಾವ ಬಂದಿದ್ದರು. ನಾಳೆ ಬೆಳಗ್ಗೆ ಕಾರು ಕಳಿಸುತ್ತೇನೆ, ಬಾ. ಆಫೀಸಿಗೆ ಹೋಗಿ ಹೇಳುತ್ತೇನೆ" ಎಂದರು.

"ಹೌದು, ಬಂದಿದ್ದರು. ನನಗೂ ಹೇಳಿದರು. ನಾಲ್ಕು ದಿನವಿರಲಿ ಎಂದು. ಅಂದ ಹಾಗೆ ನಾನು ನಾಳೆಯಿಂದ ಮೂರು ದಿನ ರಜ ತೆಗೆದುಕೊಂಡಿ ದ್ದೇನೆ– ಪರೀಕ್ಷೆಗೆ ಓದಬೇಕೆಂದು. ಅಲ್ಲಾ, ನೀನು ಈಗಲೇ ಹೋಗ ಬೇಕೇನು ?"

"ಹೋಗಲೇಬೇಕೆಂದೇನೂ ಇಲ್ಲ. ಹೋದರೆ ಹೋಗುವುದು."

"ಸರಿ. ಕೋಪ ಬಂತೂಂತ ಕಾಣುತ್ತೆ. ಹೋಗಿ ಬಾ. ನನ್ನಡ್ಡಿಯೇನೂ ಇಲ್ಲ. ಆದರೆ ಈಗ ಅಷ್ಟು ದೂರ ನಿಂತು ಮಾತನಾಡಬೇಕೇನು ? ರಾಣಿ

ಯವರು ಇಲ್ಲಿ ದಯಮಾಡಿಸಬೇಕು. ಇಲ್ಲದಿದ್ದರೆ ನನಗೆ ತಿಂಡಿ ಬೇಡವೇ ಬೇಡ. ”

ನಾನು ತಿನ್ನುವುದಿಲ್ಲವೆಂದೋ ಏನೋ ಕುಸುಮ ಒಳಗೆ ಬಂದಳು. ತಿಂಡಿ ಬೇಡ ಎಂದಳು. ಇಬ್ಬರೂ ಕಾಫಿ ಕುಡಿದೆವು.

ಮಾರನೆಯ ದಿನ ಬೆಳಗ್ಗೆ ಆರು ಗಂಟೆಗೆ ಕುಸುಮಾ ಎದ್ದು ಕಾಫಿ ತಿಂಡಿ ಮಾಡಿ, ನನ್ನನ್ನು ಎಬ್ಬಿಸಿದಳು. ಎದ್ದು ಮುಖ ತೊಳೆದುಕೊಂಡು ಕಾಫಿ ತಿಂಡಿ ತಿಂದೆವು. ಎಂಟು ಗಂಟೆಗೆ ಕಾರು ಬಂತು. ಕುಸುಮಾ ಒಳಗೆ ಬಂದು, “ ಕಾರು ಬಂದಿದೆ; ನಾನು ಹೋಗುತ್ತೇನೆ ” ಎಂದಳು.

“ ಮೂರು ದಿನಗಳಿದ್ದು ಬರುತ್ತೀ ತಾನೆ ? ”

“ ಊಂ, ಬರುತ್ತೇನೆ. ಐದಾರು ದಿನಗಳಲ್ಲಿ ಬಂದರಾಗದೇ ? ”

“ ಹಾಗೇ ಮಾಡು. ನಿನ್ನ ಇಷ್ಟ. ನಿನ್ನ ಮನೆ, ಬೇಕಾದಾಗ ಬರಬಹುದು ” ಎಂದೆ.

“ ಆಗಲಿ ” ಎಂದು ಹೊರಟು ಹೋದಳು.

ಕುಸುಮಾ ಇಷ್ಟು ಬೇಗ ಹೊರಟದ್ದು ಆಶ್ಚರ್ಯ. ಬೆಂಗಳೂರಲ್ಲಿ ಅವಳ ಚಿಕ್ಕಪ್ಪ ನಾಲ್ಕು ಸಲ ಬಂದು ಕರೆದರೂ ನೆಪಹೇಳಿ ತಪ್ಪಿಸಿಕೊಳ್ಳುತ್ತಿದ್ದಳು. ತಾನಿಲ್ಲದಿದ್ದರೆ ನನ್ನನ್ನು ಸರಿಯಾಗಿ ನೋಡಿಕೊಳ್ಳುವರಿಲ್ಲವೆಂದು ಅವಳ ಭಾವನೆ. ಅಂಥವಳು ಇವತ್ತೇನೋ ಹೊರಟುಬಿಟ್ಟಳು. ಏನೋ ಮಾವನ ಹೆಣ್ಣುಮಕ್ಕಳು ಬಂದಿದಾರೆ. ಜತೆಯಲ್ಲಿರೋಣವೆಂದು ಹೋಗಿರಬೇಕು ಎಂದು ಸುಮ್ಮನಾದೆ.

* * * * * *

ಮೂರು ದಿನ ರಜ ತೆಗೆದುಕೊಂಡಿದ್ದೆ. ಬೇಕಾದಷ್ಟು ಓದೋಣ ಎಂದು ಕುಳಿತೆ. ಒಂದು ಗಂಟೆಯ ಹೊತ್ತು ಓದಿರಬಹುದು. ಏಕೋ ಬೇಜಾರಾಯಿತು. ಪುಸ್ತಕ ಮುಚ್ಚಿಟ್ಟು ಒಳಗೆ ಹೋದೆ: ‘ ಏನು ಬೇಕು ರಾಮು ? ’ ಎಂದಳು ಅಮ್ಮ. ‘ ನೀರು ಬೇಕಿತ್ತು ’ ಎಂದು ನೀರು ಕುಡಿದು ಓದಲು ಕುಳಿತೆ. ಒಂದೆರಡು ಪೇಜು ಓದುವಷ್ಟರಲ್ಲಿ ಸಾಕಾಯಿತು. ಬೀರುವಿನಲ್ಲಿದ್ದ ಪುಸ್ತಕ ಬೇಕಾಯಿತು. ಕುಸುಮಾನ ಕೂಗೋಣವೆಂದುಕೊಂಡೆ. ಅಷ್ಟರಲ್ಲಿ

ಅವಳು ಮನೆಯಲ್ಲಿಲ್ಲವೆಂದು ಜ್ಞಾಪಕ ಬಂತು. ನಾನೇ ಎದ್ದು ತೆಗೆದುಕೊಂಡೆ. ಊಟವಾದ ಮೇಲೆ ಓದುತ್ತಿದ್ದ ಹಾಗೆಯೇ ನಿದ್ದೆ ಬಂತು. ಎಚ್ಚರವಾದಾಗ ನಾಲ್ಕು ಗಂಟೆ. ಎಷ್ಟು ಹೊತ್ತಾಗಿ ಹೋಯಿತು, ಕುಸುಮ ಇದ್ದರೆ ಎಬ್ಬಿಸುತ್ತಿದ್ದಳು ಎಂದುಕೊಂಡೆ.

ಅಷ್ಟು ಹೊತ್ತಿಗೆ ಅಮ್ಮ ಕಾಫಿ ತಂದು ಕೊಟ್ಟಳು. ರುಚಿ ನೋಡಿದೆ. ಚೆನ್ನಾಗಿರಲಿಲ್ಲ. ಪಾಪ! ಅಮ್ಮ ಪೂರ್ವಕಾಲದವಳು. ಕಾಫಿ ಮಾಡಲು ಅವಳಿಗೆ ಬಾರದು. ಅಮ್ಮ ನನ್ನ ಮುಖ ನೋಡಿ "ಚೆನ್ನಾಗಿಲ್ಲವೇ ರಾಮು? ನನಗೆ ಮಾಡಲು ಬರುವುದಿಲ್ಲ. ನಮ್ಮ ಕಾಲದಲ್ಲಿ ಇದೆಲ್ಲಾ ಇರಲಿಲ್ಲಪ್ಪ" ಎಂದಳು.

"ಚೆನ್ನಾಗಿದೆಯಮ್ಮ" ಎಂದು ಕುಡಿದು ಮುಗಿಸಿದೆ. ಆರು ಗಂಟೆಯವರೆಗೆ ಓದುತ್ತಿದ್ದೆ. ಹೊರಗೆ ಹೋಗಿ ಬರೋಣವೆಂದು ಬಟ್ಟೆ ಹಾಕಿಕೊಳ್ಳಲು ಹೋದರೆ ಬಟ್ಟೆಯೆಲ್ಲ ಪೆಟ್ಟಿಗೆಯಲ್ಲಿತ್ತು. ತೆಗೆಯಲು ಬೇಜಾರು. ಕುಸುಮ ಇದ್ದರೆ ತೆಗೆದುಕೊಡುತ್ತಿದ್ದಳು. ಹಾಗೇ ಟವಲನ್ನು ಭುಜದಮೇಲೆ ಹಾಕಿಕೊಂಡು ಹೊರಟೆ. "ಇದೇನು ರಾಮು ಹೀಗೆ ಹೊರಟೆ? ಬಟ್ಟೆ ಹಾಕಿಕೊಳ್ಳುವುದಿಲ್ಲವೇ?" ಎಂದಳು ಅಮ್ಮ. "ಇಲ್ಲಮ್ಮ, ಈಗ ಬರುತ್ತೇನೆ" ಎಂದು ಸ್ವಲ್ಪ ತಿರುಗಾಡಿಕೊಂಡು ಬೇಗ ಬಂದೆ.

ಹೀಗೆ ಎರಡು ದಿನ ಕಳೆಯುವಷ್ಟರಲ್ಲಿ ನನಗೆ ಬೇಜಾರಾಯಿತು. ಎಲ್ಲಾ ಕೆಲಸಗಳನ್ನೂ ನಾನೇ ಮಾಡಿಕೊಳ್ಳಬೇಕು. ಬಾಚಣಿಗೆ, ಬ್ರಷ್ ಎಲ್ಲ ನಾನೇ ತೆಗೆದುಕೊಂಡು ತಲೆ ಬಾಚಿಕೊಳ್ಳಬೇಕು. ಅವನ್ನೆಲ್ಲ ನಾನೇ ಅದರದರ ಸ್ಥಳದಲ್ಲಿಡಬೇಕು. ನಾನೇ ಬಟ್ಟೆ ತೆಗೆದು ಹಾಕಿಕೊಳ್ಳಬೇಕು. ಕುಸುಮಾಗೆ ಹೇಳಿ ಕಳುಹಿಸೋಣವೆಂದರೆ, ಅವರೆಲ್ಲ ಹಾಸ್ಯ ಮಾಡುತ್ತಾರೆ. ಆದ್ದರಿಂದ ತಲೆ ನೋವೆಂದೂ ಬೇಗ ಬರಬೇಕೆಂದೂ ಕಾಗದ ಬರೆದು ಕಳುಹಿಸಿದೆ.

ಕಾಗದ ಕಳುಹಿಸಿದ ಅರ್ಧ ಗಂಟೆಯೊಳಗೆ ಕುಸುಮ ಕಾರಿನಲ್ಲಿ ಬಂದೇಬಿಟ್ಟಳು. ಕಾರು ನಮ್ಮ ಮನೆಯ ಮುಂದೆ ನಿಂತದ್ದು ಗೊತ್ತಾದ ಕೂಡಲೇ ಹಾಸಿಗೆ ಉರುಳಿಸಿ ಮಲಗಿದೆ. ಕುಸುಮ ಒಳಗೆ ಬಂದದ್ದನ್ನು ನೋಡಿ ಅಮ್ಮ "ಇದೇನು ಇಷ್ಟು ಬೇಗ ಬಂದು ಬಿಟ್ಟೆ?" ಎಂದಳು. ನನಗೆ ಏನು ಹೇಳುವಳೋ ಎಂದು ಕುತೂಹಲ. ಕಾಗದ ಬರೆದಿದ್ದೆನೆಂದರೆ ಏಕೆ ಬರೆದೆ ಎನ್ನುವಳು.

ಅಷ್ಟರಲ್ಲಿ ಕುಸುಮಾ “ ಸುಮ್ಮನೆ ಬಂದೆ. ಅವತ್ತೇನೋ ಆಫೀಸಿನ ಕಾಗದ ಕೊಟ್ಟಿದ್ದರು ಬೇಕೇನೋ ಎಂದು ಮಾವ ಆಫೀಸಿಗೆ ಹೋಗುವಾಗ ಹಾಗೇ ಬಂದೆ ” ಎಂದಳು. ಸದ್ಯ ನನ್ನ ಮರ್ಯಾದೆ ಉಳಿಸಿದಳು ಎಂದುಕೊಂಡೆ. ಅವಳು ಯಾವಾಗಲೂ ಹಾಗೆಯೇ. ನನ್ನ ತಪ್ಪನ್ನು ತನ್ನ ಮೇಲೆ ಹಾಕಿಕೊಳ್ಳುವಳು. ಅಮ್ಮ ಒಳಗೆ ಹೋದಳು. ಕುಸುಮ ರೂಮಿನೊಳಗೆ ಬಂದು ಮಂಚದ ಮೇಲೆ ಕುಳಿತುಕೊಂಡು, ತಲೆಯ ಮೇಲೆ ಕೈಯಿಟ್ಟು, “ ಈಗ ಹೇಗಿದೆ ? ” ಎಂದಳು.

“ ಈಗ ಸ್ವಲ್ಪ ವಾಸಿ. ಬೆಳಿಗ್ಗೆ ತುಂಬಾ ತಲೆ ನೋಯುತ್ತಿತ್ತು ” ಎಂದು ಪಕ್ಕಕ್ಕೆ ತಿರುಗಿಕೊಂಡೆ—ನನ್ನ ಮುಖ ಅವಳಿಗೆ ಕಾಣದಿರಲೆಂದು.

“ ಅಯ್ಯೋ ಪಾಪ. ಬೆಳಗ್ಗೆಯೇ ಹೇಳಿಕಳುಹಿಸಬಾರದಾಗಿತ್ತೆ ? ” ಎಂದು ನನ್ನ ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡಳು,

“ ನೀನು ಇನ್ನೂ ಎರಡು ದಿನ ಇರಬೇಕಾಗಿತ್ತೆ ? ” ಎಂದೆ.

“ ನಾನೇನೂ ಇರಬೇಕಾಗಿರಲಿಲ್ಲ. ಆದರೆ ನೀವು ಓದಲಿ ” ಎಂದು ಹೋದೆ.

ನನಗೆ ಈಗ ಅರ್ಥವಾಯಿತು. ಕುಸುಮ ಅಷ್ಟು ಬೇಗ ಏಕೆ ಹೊರಟು ಹೋದಳೆಂದು. ಪರೀಕ್ಷೆಗೆ ಇನ್ನು ಎರಡು ದಿನ ಮಾತ್ರ ಇತ್ತು. ಸುಮಾರಾಗಿ ಓದಿದೆ. ಪರೀಕ್ಷೆಯೂ ಮುಗಿಯಿತು.

* * * * * *

ಆಫೀಸಿನಲ್ಲಿ ವಿಪರೀತ ಕೆಲಸವಿತ್ತು. ಮೂರುನಾಲ್ಕುದಿನಗಳಿಂದ ಬೆಳಗ್ಗೆಯೂ ಹೋಗಿ ಕೆಲಸ ಮಾಡುತ್ತಿದ್ದೆ. ಮನೆಗೆ ಬರುವುದು ಒಂದು ಗಂಟೆಯಾಗುತ್ತಿತ್ತು. ಅವೊತ್ತು ಭಾನುವಾರ. ಹಿಂದಿನ ದಿನದ ಕೆಲಸವನ್ನು ಪೂರೈಸಿಯೇ ಹೋಗಬೇಕೆಂದು ಕೂತುಬಿಟ್ಟೆ. ಕೆಲಸ ಮುಗಿಸಿ ಎದ್ದಾಗ ಎರಡು ಗಂಟೆ. ಮೋಡವಾಗಿದ್ದುದರಿಂದ ಹೊತ್ತೇ ಗೊತ್ತಾಗಲಿಲ್ಲ ಅವಸರವಾಗಿ ಎದ್ದೆ. ಅಷ್ಟು ಹೊತ್ತಿಗೆ ಜವಾನ ಬಂದು ಕವರನ್ನು ತಂದು ಕೊಟ್ಟ. ಒಡೆದು ನೋಡಿದೆ. ರಿಸಲ್ಟು ಷೀಟು. ಫಸ್ಟ್‌ಕ್ಲಾಸಿನಲ್ಲಿ ಪ್ಯಾಸಾಗಿತ್ತು. ಸೈಕಲ್ ತೆಗೆದುಕೊಂಡು ಬೇಗ ಮನೆಗೆ ಬಂದೆ.

" ಊಟವಾಯಿತೇ ? "

" ಇನ್ನೂ ಇಲ್ಲ. "

" ಇಷ್ಟು ಹೊತ್ತಿನ ತನಕ ಏಕೆ ಉಪವಾಸವಿದ್ದೀ ? ಊಟ ಮಾಡ ಬಾರದಾಗಿತ್ತೇ ? ಹೋಗಲಿ, ಇಲ್ಲಿ ಬಾ. ತಮಾಷೆ ಹೇಳುತ್ತೇನೆ. "

ಕುಸುಮ ಹತ್ತಿರ ಬಂದು ಒರಗಿಕೊಂಡು ' ಏನು ' ಎಂದಳು. ರಿಸಲ್ಟು ಷೀಟನ್ನು ತೆಗೆದು ತೋರಿಸಿದೆ. ಅವಳ ಮುಖವರಳಿತು. ನನ್ನ ಕ್ರಾಪಿನ ಮೇಲೆ ಬೆರಳಾಡಿಸುತ್ತಾ " ಅವತ್ತು ನಾನು ಬಂದದ್ದು ತುಂಬಾ ತೊಂದರೆ ಯಾಯಿತು. ಇಲ್ಲದಿದ್ದರೆ ರ್‍ಯಾಂಕ್ ಬರುತ್ತಿತ್ತು " ಎಂದಳು. " ರ್‍ಯಾಂಕ್ ಬರುತ್ತಿತ್ತೊ ಸೆಕಂಡ್‌ಕ್ಲಾಸ್ ಬರುತ್ತಿತ್ತೋ ! ಈಗೇನು ಊಟಗೀಟ ಉಂಟೋ ಅಥವಾ ಮಾತಿನಲ್ಲೇ ತೃಪ್ತಿಯೋ ? " ಎಂದೆ. ಇಬ್ಬರೂ ಊಟಮಾಡಿ ಕೊಂಡು ಬಂದೆವು. ಕುಸುಮ ಅಡಕೆಲೆ ಮಡಿಸಿಕೊಟ್ಟು ಹೊರಡಲನುವಾದಳು. " ಏನು ಹೊರಟೆ ? " ಎಂದೆ.

" ಓದಿಕೊಳ್ಳಿ....ಆಫೀಸ್‌ವರ್ಕ್ ಏನೂ ಇಲ್ಲವೇ ? "

" ಸಾಕು ಕುಳಿತುಕೊಳ್ಳೇ " ಎಂದು ಸೆರಗುಹಿಡಿದು ಕೂಡಿಸಿದೆ. " ನನ್ನ ಮೇಲೆ ಮಾತಿಲ್ಲ. ನೀವೇ ಇರು ಎಂದಿರಿ. " ಎಂದಳು.

* * * * * *

ಅಂದಿನಿಂದ ಕುಸುಮ ನನ್ನಿಂದಲೇ ಪ್ಯಾಸಾಯಿತು ಎಂತ ಹೇಳು ತ್ತಾಳೆ. ನಾನೂ ಅವಳೆದುರಿಗೆ ಸೋಲನ್ನೊಪ್ಪಿಕೊಳ್ಳಬೇಕಾಗುತ್ತೆ.

ಎಚ್. ಸುಮಿತ್ರಮ್ಮ
ಬೆಂಗಳೂರು

# ಕನಸೋ ನೆನಸೋ?

“ಗೌರಮ್ಮ! ”

“ಯಾರು ? ”

“ನಾನು........ ”

“ಓಹೋ,.... ಬಹಳ ಅಪರೂಪ, .... ಬನ್ನಿ ಒಳಗೆ! ”

“ಬಂದೇ ಇದೀನಲ್ಲ....! ”

“ಬಹಳ ಸಂತೋಷ. ನೀವು ಇಲ್ಲಿಗೆ ಬಂದು ಎಷ್ಟು ದಿನವಾಯಿತು ? ”

“ಮೊನ್ನೆ ಬಂದೆ. ”

“ಎಲ್ಲಿ ಇರುವುದು ? ”

“ಶಂಕರಪುರದಲ್ಲಿ,—ನಮ್ಮ ತಂದೆಯವರ ಮನೆಯಲ್ಲಿ; ನೀವು ಇಲ್ಲಿಗೆ ಬಂದಿರುವುದಾಗಿ ಕೇಳಿದೆ; ನೋಡಿಕೊಂಡು ಹೋಗೋಣವೆಂದು.... ”

“ನೋಡಿ, ಇದಕ್ಕೇ ವಿಶ್ವಾಸ ಎನ್ನುವುದು. ನೀವಾಗಿ ಬರದಿದ್ದರೆ ನನಗೆ ನೀವು ಇಲ್ಲಿಗೆ ಬಂದಿರುವುದೇ ಗೊತ್ತಾಗುತ್ತಿರಲಿಲ್ಲ. ‘ವಿಶ್ವಾಸ’ ಎನ್ನುವುದು ನೋಡಿ, ಬಳ್ಳಿಯಂತೆ; ದಾರವನ್ನೋ ತಂತಿಯನ್ನೋ ಕಟ್ಟಿದರೆ, ಅದರ ಮೇಲೆ ಬೆಳೆದು ಹೂಬಿಡುತ್ತದೆ. ಚಿವುಟಿದರೆ ಅಲ್ಲೇ ಬಾಡಿಹೋಗುತ್ತದೆ. ಅಲ್ಲ? ಹ-ಹ್ಹ-ಹ್ಹ! ಸ್ವಲ್ಪ ಕಾಫಿ ತರಿಸಲೆ ? ”

“ಆಗಬಹುದು ”

.... .... .... .... .... ....

“ಸ್ವಲ್ಪ....ಸಕ್ಕರೆ.... ? ”

“ಬೇಡ, ಸರಿಯಾಗಿದೆ. ಇನ್ನೂ ಕೆಲವು ದಿವಸ ಇಲ್ಲೇ ಇರುತ್ತೀರಾ ? ಇದೇನು ನೆಂಟರ ಮನೆಯೋ ? ”

“ಅಲ್ಲ, ಸ್ನೇಹಿತರದು. ಅವರು ‘ಇನ್ನೆರಡು ದಿವಸ ಇರಿ,’ ಎಂದು ಬಲವಂತ ಮಾಡುತ್ತಿದಾರೆ. ನನಗೂ ಸ್ವಲ್ಪ ಹಾಗೇ! ಬೆಂಗಳೂರಿಗೆ ಬಂದರೆ ಬೇಗ ಹೋಗಲು ಮನಸ್ಸು ಬರುವುದಿಲ್ಲ. ಬಹಳ ಮುದ್ದಾದ ಊರು. ಇಲ್ಲಿರುವವರು ಬಹಳ ಭಾಗ್ಯಶಾಲಿಗಳು, ಅಲ್ಲವೇ ? ”

" ಇರಬಹುದು; ಆದರೆ ಅವರಿಗೆ ಅದು ಗೊತ್ತಿರುವುದಿಲ್ಲ ! "

" ಅದೂ ನಿಜ. "

" ನಾವು ಭೇಟಿಯಾಗಿ ಒಂದು ವರ್ಷವಾಯಿತಲ್ಲವೇ ? "

" ಆಯಿತು. ಹೋದ ವರ್ಷ ಸಾಹಿತ್ಯ ಸಮ್ಮೇಳನ ಕಾಲದಲ್ಲಿ. ಎಲ್ಲೋ ನಾಮ ಮಾತ್ರ ಭೇಟಿ; ಮಾತಿಲ್ಲ, ಕತೆಯಿಲ್ಲ. ಬರಿಯ ವಂದನೆ, ಪ್ರತಿವಂದನೆ– ಅದೂ ಹೊರಡುವ ಅವಸರದಲ್ಲಿ ! "

" ಅದು ಆಗುವ ಹೊತ್ತಿಗೇ ಈಗ ಮಾತುಕತೆಗೆ ಬಂದಿರುವುದು. ಬಾಕಿ ಎಲ್ಲವನ್ನೂ ಬಡ್ಡಿ ಸಮೇತ ತೀರಿಸೋಣವೆಂದು ಉದ್ದೇಶ ! "

" ಅಗತ್ಯವಾಗಿ ಆಗಬಹುದು ! "

.... .... .... .... .... .... ....

" ನಿಮ್ಮ ಕಥಾಸಂಗ್ರಹ ಓದಿದೆ. ಬಹಳ ಚೆನ್ನಾಗಿತ್ತು. ನಮ್ಮ ಸೋದರಿಯೊಬ್ಬರು ಇಷ್ಟರಮಟ್ಟಿಗೆ ಬರೆಯುತ್ತಾರಲ್ಲ ಎಂದು ಸಂತೋಷವಾಯಿತು. ಅದನ್ನು ನಿಮಗೆ ತಿಳಿಸಿ, ನನ್ನ ಮೆಚ್ಚುಗೆಯನ್ನು ಪ್ರದರ್ಶಿಸಬೇಕೆಂಬುದೇ ಈ ಭೇಟಿಯ ತಿರುಳು. ನಿಮ್ಮ ಕತೆಗಳಲ್ಲಿ ಕೆಲವು ನಿಜವಾಗಿಯೂ ಚೆನ್ನಾಗಿವೆ...."

" ನೀವು ಹಾಗೆ ಭಾವಿಸುತ್ತೀರಾ ? "

" ಖಂಡಿತವಾಗಿ ! "

" ನಾನು ಧನ್ಯಳು ! "

" ಏಕೆ ? ನಿಮಗೆ ಇದೇನು ಹೊಸದಲ್ಲ ! ಕರ್ನಾಟಕದ ಅನೇಕ ಭಾಗಗಳಿಂದ ನಿಮಗೆ ಈಗಾಗಲೇ ಮೆಚ್ಚುಗೆಯ ಆದರದ ಸ್ವಾಗತವು ದೊರೆತಿದೆ ! "

" ದೊರೆತಿದೆ, ನಿಜ. ಆದರೆ ಅದೆಲ್ಲವೂ ನಮ್ಮ ಸಹೋದರ ವರ್ಗದಿಂದ. ' ಹೆಣ್ಣುಮಗಳೊಬ್ಬಳು ಒಪ್ಪಿದಾಗ ನನ್ನ ಕತೆಗೆ ಬೆಲೆಯಿದೆ ' ಎಂದು ನಾನು ಅನೇಕ ವೇಳೆ ಅಂದುಕೊಂಡಿದ್ದೆ. ಅದು ಇವತ್ತು ಪೂರ್ಣವಾಯಿತು. ಒಬ್ಬ ಕತೆಗಾರ್ತಿ ಮತ್ತೊಬ್ಬಳನ್ನು ಮೆಚ್ಚುವುದು ಸಾಮಾನ್ಯವಾದ ಮಾತಲ್ಲ– ಒಬ್ಬ ಸಂಗೀತಗಾರ ಮತ್ತೊಬ್ಬ ಸಂಗೀತಗಾರನನ್ನು ಮೆಚ್ಚಿದ ಹಾಗೆ ! "

" ನನ್ನನ್ನು ಈಗಾಗಲೆ ಕತೆಗಾರ್ತಿಯರ ಗುಂಪಿಗೆ ಸೇರಿಸಬೇಡಿ ! "

" ಯಾಕೆ ಸೇರಿಸಬಾರದು ? ನೀವು ಸಂಕೋಚದಿಂದ ತೆರೆಯ ಮರೆಯಲ್ಲಿ ಇರಲು ಅಪೇಕ್ಷಿಸುತ್ತೀರಿ; ಅಷ್ಟೆ ! ಪ್ರತಿಭೆಯ ಬೆಳಕು ಹೆಚ್ಚಿತೆಂದರೆ ಅದು ತೆರೆಯನ್ನು ಲಕ್ಷಿಸುವುದಿಲ್ಲ. ತೆರೆಗೂ ಗೊತ್ತಾಗದಂತೆಯೇ ತನ್ನ ಕಿರಣಗಳನ್ನು ಹೊರಗೆ ತೂರುತ್ತದೆ. ಒಮ್ಮೆ ಅದನ್ನು ನೋಡಿದವರು ತೆರೆಯನ್ನು ಹರಿದು ಹಿಂದಿರುವ ವ್ಯಕ್ತಿತ್ವವನ್ನು ಗುರುತಿಸದೆ ಬಿಡುವುದಿಲ್ಲ ! "

" ನನಗೆ ಗುರುತಿಸುವುದು ಬೇಕಿಲ್ಲವಲ್ಲ ! ಏನೋ ಬರೆಯಬೇಕೆನ್ನಿಸುತ್ತದೆ, ಬರೆಯುತ್ತೇನೆ. ಅದನ್ನು ಓದಿ ನಾಲ್ಕು ಜನ ಸಂತೋಷಪಟ್ಟರೆ ನನಗೂ ಸಂತೋಷ. ಅದಕ್ಕಿಂತ ಹೆಚ್ಚಾಗಿ ನಾನು ಏನೂ ಬಯಸುವುದಿಲ್ಲ. ಹೀಗೆ ಮರೆಯಲ್ಲಿರುವುದೇ ನನಗೆ ಸುಖ. "

" ಅದು ನಿಮ್ಮ ಇಷ್ಟವಾಯಿತು. ಗುರುತಿಸುವುದೂ ಬಿಡುವುದೂ ನಮ್ಮನ್ನು ಸೇರಿದ್ದು. ಆ ಅಧಿಕಾರ ಕಿತ್ತುಕೊಳ್ಳುವದಕ್ಕೆ ನಿಮಗೂ ಅಧಿಕಾರವಿಲ್ಲ ! "

" ನಾನು ಯಾರ ಅಧಿಕಾರವನ್ನೂ ಕಿತ್ತುಕೊಳ್ಳುವುದಿಲ್ಲ ! ನನ್ನ ಅಭಿಪ್ರಾಯವನ್ನು ಹೇಳಿದೆ ಅಷ್ಟೆ. "

" ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯವನ್ನು ಕೇಳುವುದಿಲ್ಲ. ಸರಿಯೋ ? "

" ಆಗಬಹುದು. ನಿಮ್ಮ ಮನಸ್ಸು, ಬುದ್ಧಿ, ನಿಮ್ಮದು. ಹೇಗೆ ಬೇಕಾದರೂ ಯೋಚಿಸಲು ನಿಮಗೆ ಪೂರ್ಣ ಅಧಿಕಾರವಿದೆ ! "

" ಸರಿ ಬಿಡಿ, ಇಲ್ಲಿಗೆ ಜಗಳ ಮುಗಿಯಿತು. ಈಗ ಹೇಳಿ, ನನ್ನ ಕತೆ ಚೆನ್ನಾಗಿದೆ ಅಂದಿರಲ್ಲ. ಅದರಲ್ಲಿ ಯಾವ ಕತೆ ನಿಮ್ಮ ಮನಸ್ಸಿಗೆ ಹೆಚ್ಚಾಗಿ ಒಪ್ಪಿತು ? "

" ಗೌರಮ್ಮ, ನೀವು ಕೇಳಿದ ಪ್ರಶ್ನೆ ಅಷ್ಟು ಸುಲಭವಾದುದಲ್ಲ........"

" ಏಕೆ ? ಅದರಲ್ಲಿ ದಾಕ್ಷಿಣ್ಯವೇನು ? ಚೆನ್ನಾಗಿರುವುದನ್ನು ಚೆನ್ನಾಗಿದೆ ಎನ್ನುವುದು, ಇಲ್ಲದ್ದನ್ನು ' ಇಲ್ಲ ' ಎಂದು ಹೇಳುವುದು. "

"ಇಲ್ಲಿ ಬರುವುದು ದಾಕ್ಷಿಣ್ಯದ ಮಾತಲ್ಲ. ಒಂದೊಂದು ಕತೆ ಒಂದೊಂದು ದೃಷ್ಟಿಯಿಂದ ಬರೆದದ್ದು. ಒಂದು ರೀತಿಯಿಂದ ಒಂದು ಕತೆ ಚೆನ್ನಾಗಿದ್ದರೆ, ಇನ್ನೊಂದು ರೀತಿಯಿಂದ ಮತ್ತೊಂದು ಕತೆ ಅದನ್ನು ಮೀರಿಸುವಂತೆ ಇರುತ್ತದೆ. ಆದರಲ್ಲಿ 'ಇದೇ ಚೆನ್ನಾಗಿದೆ' ಎಂದು ಬೆರಳುಮಾಡಿ ತೋರಿಸುವುದು ಕಷ್ಟ ! ನಿಮಗೆ ಅಷ್ಟು ಆಸೆಯಿದ್ದರೆ, ಇನ್ನೊಂದು ಸಲ ಎಲ್ಲವನ್ನೂ ನಿದಾನವಾಗಿ ನೋಡಿ ನಿಮ್ಮ ಕತೆಗಳ ಮೇಲೆ ಒಂದು ವಿಮರ್ಶೆಯನ್ನು ಬರೆದು ಕಳುಹಿಸುತ್ತೇನೆ !"

"ಕಳುಹಿಸಿದರೆ ಸಾಲದು. ಅದನ್ನು ತೆಗೆದುಕೊಂಡು ನೀವೇ ಬರಬೇಕು. ನಮ್ಮ ಕೊಡಗನ್ನು ನೋಡಬೇಡವೇ ನೀವು ?"

"ನೋಡಬೇಕೆಂದು ನನಗೂ ಆಸೆಯಿದೆ. ಎಲ್ಲೋ ಇದುವರೆಗೂ ಆ ಕಡೆ ಬರುವುದಕ್ಕೇ ಆಗಲಿಲ್ಲ. ಈಗ ನಮ್ಮವರಾಗಿ 'ಬಾ' ಎಂದು ಕರೆಯುವುದಕ್ಕೆ ನೀವಿದ್ದೀರಲ್ಲ. ಇನ್ನೇನು ಕೊಡಗಿನ ಪ್ರಯಾಣ ಸಿದ್ಧವಾಗಿಯೇ ಇದೆ. ಯಾವಾಗ ಅಂದರೆ ಆವಾಗ !"

"ನಿಮ್ಮ ರೀತಿಯನ್ನು ನೋಡಿದರೆ ಎಲ್ಲವನ್ನೂ ಬಾಯಿಮಾತಿನಲ್ಲೇ ಮುಗಿಸಿಬಿಡುತ್ತೀರೋ ಏನೋ ಎಂದು ಅನುಮಾನ."

"ಅನುಮಾನವೇನೂ ಇಲ್ಲ. ಅದನ್ನು ನಿಜವನ್ನಾಗಿ ಮಾಡಬೇಕಾದರೆ,– ಹೇಗಿದ್ದರೂ ಇಲ್ಲಿಯವರೆಗೆ ಬಂದಿದ್ದೀರಿ. ಮೈಸೂರಿಗೆ ಬಂದು ನಾಲ್ಕು ದಿನ ವಿದ್ದು ಅಲ್ಲೆಲ್ಲಾ ಸುತ್ತಾಡಿಕೊಂಡು ಹೋದರೆ, ನಿಮ್ಮ ಜೊತೆಯಲ್ಲೇ ನಾನೂ ಹೊರಟೆ, ಅನ್ನಿ ! 'ಬೃಂದಾವನ' ನೋಡದಿದ್ದ ಮೇಲೆ ಕಣ್ಣಿಲ್ಲ !"

"ನಾನು ನೋಡಿದೇನೆ. ಆದರೆ ಬಹಳ ಹಿಂದೆ; ಕಟ್ಟೆಯನ್ನು ಕಟ್ಟುತ್ತಿದ್ದಾಗ."

"ಹಿಂದಿನ ಮಾತು ಬೇರೆ. ಆಗ ನೋಡಿದವರಿಗೆ ಈಗ ಅಲ್ಲಿಗೆ ಹೋದರೆ ಗುರುತು ಸಿಕ್ಕುವುದಿಲ್ಲ. ಇಂಗ್ಲಿಷಿನಲ್ಲಿ 'ಫೇರಿ ಟೇಲ್ಸ್' ಓದಿದ್ದೀರೋ ಇಲ್ಲವೋ ? ಅಲ್ಲಿ ಬರುವಂತೆ, ಕಣ್ಣುಕಟ್ಟೆ ಯಾರೋ ಇಲ್ಲಿಗೆ ಕರತಂದಿರ ಬಹುದು, ಎನ್ನಿಸುತ್ತದೆ. ಹಿಂದೆ ದಾಸರು, 'ಕಂಗಳೀತಕೋ ಕಾವೇರಿ ರಂಗನ ನೋಡದ' ಎಂದು ಹಾಡಿದಾರೆ. ನನಗೆ ಅಲ್ಲಿಗೆ ಹೋದರೆ, 'ಕಂಗಳೇ

ತಕೋ, ಕಾವೇರಿಯ ಲೀಲಾರಂಗವ ನೋಡದ,' ಎಂದು ಹಾಡಬೇಕು ಎನ್ನಿಸುತ್ತದೆ...."

"ಇಲ್ಲೇ ಹಾಡಿಬಿಡಿ. ಕೇಳಿ ನಾನೂ ಸಂತೋಷಪಡುತ್ತೇನೆ. ಎಷ್ಟಾದರೂ ಕಾವೇರಿ ನಮ್ಮ ಹೆಣ್ಣುಮಗಳು. ಅವಳ ವೈಭವ ಕೇಳಿದರೆ ನಮಗೂ ಹೆಮ್ಮೆ!"

"ಅದನ್ನು ಕೇಳಿ ಪ್ರಯೋಜನವಿಲ್ಲ. ನೋಡಿ ಸಂತೋಷಪಡಬೇಕು."

"ಆಗಬಹುದು. ನಿಮಗೇನು? ಆ ಸಂತೋಷವಂತೂ ಯಾವಾಗಲೂ ನಿಮ್ಮದೇ ಆಗಿದೆ! ನೀವು ಆಗಾಗ ಹೋಗುತ್ತೀರೇನು?"

"ಅದಕ್ಕೇನು? ವಾರವಾರವೂ ಹೋಗಬಹುದು. ಆದರೆ ಈಚೆಗೆ ನಾನು ಅಲ್ಲಿ ಹೋಗಿಲ್ಲ. ನಾವು ಹಿಂದಿನ ಸಲ ಹೋದಾಗ ತೊಂದರೆ ಯಾಯಿತು. ಆದರಿಂದ ಅಲ್ಲಿಗೆ ಹೋಗುವ ಉತ್ಸಾಹ ಇಂಗಿಹೋಗಿದೆ. ಆದರೆ ಅದು ಎಲ್ಲಾ ಕಾಲಕ್ಕೂ ಅನ್ವಯಿಸುವುದಿಲ್ಲ. ಈಗ ನೀವು ಬಂದರೆ ನಿಮ್ಮ ಸಂಗಡ ಬರಬೇಕೆಂದು ಇದೇನೆ."

"ಏನು ಅಲ್ಲಿ ನಡೆದ ವಿಚಾರ? ನಾನು ಕೇಳಲು ಅಡ್ಡಿಯೇನಾದರೂ ಉಂಟೋ!"

"ಅಡ್ಡಿ ಏನೂ ಇಲ್ಲ. ಪ್ರವಾಸಿಗಳು ಯಾರಿಗಾದರೂ ಸಂಭವಿಸಬಹುದಾದ ಒಂದು ಪ್ರಸಂಗ ಅದು. ಅಂಥ ಮಹತ್ತ್ವದ್ದೇನೂ ಅಲ್ಲ."

"ಹಾಗಾದರೆ, ಹೇಳಬಹುದಲ್ಲ. ಮಾತಾಯಿತು, ಕತೆಯೂ ಆಗಲಿ!"

"ನಿಮಗೆ ಕೇಳುವ ಇಷ್ಟವಿದ್ದರೆ ಸಂತೋಷವಾಗಿ ಹೇಳುತ್ತೇನೆ. ಈಗ ಕೆಲವು ದಿವಸಗಳ ಹಿಂದೆ, ಒಂದು ದಿನ 'ಬೃಂದಾವನ'ಕ್ಕೆ ಹೋಗಬೇಕೆಂಬ ಯೋಚನೆ ಬಂತು. ಬಂದದ್ದೇ ತಡ. ಅದು ಕಾರ್ಯರೂಪಕ್ಕೆ ಬರುವುದು ಸಾವಕಾಶವಾಗಲಿಲ್ಲ. ಸಾಯಂಕಾಲ ಆರು ಗಂಟೆ ಹೊತ್ತಿಗೆ ಎಲ್ಲರೂ ಹೊರಟೆವು....."

"ಯಾರು ಯಾರು ಹೋಗಿದ್ದಿರಿ?"

"ನಮ್ಮ ಮನೆಯವರು, ಜೊತೆಗೆ ನಮ್ಮ ಅಣ್ಣ, ಅವರ ಹೆಂಡತಿ ಮತ್ತು ಮಕ್ಕಳು—"

"ನಾವು ಹೊರಟದ್ದೇ ಹೊತ್ತು. ಅಲ್ಲಿಗೆ ಹೋಗುವುದರೊಳಗೆ ಕತ್ತಲಾಗಿತ್ತು. ನಾನು ಇಲ್ಲಿ ಹೇಳುವುದು ಹೋದದ್ದು, ಬಂದದ್ದು,–ಮತ್ತು ಅಲ್ಲಿ ನಡೆದದ್ದು,–ಅಷ್ಟೆ! ನಾವು ಅಲ್ಲಿ ನೋಡಿದ ದೃಶ್ಯ, ಅನುಭವಿಸಿದ ಆನಂದ ಮಾತಿಗೆ ಮೀರಿದ್ದು. ಅದನ್ನು ಹೇಳುವ ಸಾಹಸಕ್ಕೆ ನಾನು ಹೋಗುವುದಿಲ್ಲ.

"ಅಲ್ಲಿ ತಿರುಗಾಡುತ್ತಿದ್ದರೆ ಸುತ್ತಿನ ಅರಿವೇ ಇರುವುದಿಲ್ಲ. ಬಣ್ಣಬಣ್ಣವಾಗಿ ನೀರಿನ ಹನಿಗಳು ಒಂದರೊಡನೊಂದು ಸ್ಪರ್ಧಿಸುತ್ತ ಕುಣಿಯುತ್ತಿರುವಾಗ, ಕಾಲದ ಹನಿಗಳೂ, ಅದರೊಡನೆ ಕುಣಿಯುತ್ತ ಅನಂತ ಕಾಲದಲ್ಲಿ ಲೀನವಾಗುತ್ತಿರುವಾಗ, ಹೊತ್ತು ಕಳೆದುದೇ ಗೊತ್ತಾಗಲಿಲ್ಲ. ಅಲ್ಲಿಗೆ ಬಂದಿದ್ದವರಲ್ಲಿ ಕೆಲವರು ಊಟ ಮಾಡುತ್ತಿರುವುದನ್ನು ನೋಡಿ ನಮಗೆ, ನಾವೂ ಊಟ ತಂದಿದ್ದೇವೆಂದು ಜ್ಞಾಪಕಕ್ಕೆ ಬಂತು. ಹೆಚ್ಚು ಜನರಿಲ್ಲದಿದ್ದ ಒಂದು ಜಾಗವನ್ನು ನೋಡಿ ಊಟಕ್ಕೆ ಕುಳಿತೆವು........"

"ಏನೇನು ಮಾಡಿದ್ದಿರಿ ಊಟಕ್ಕೆ ?"

"ನನಗೆ ಚೆನ್ನಾಗಿ ನೆನಪಿಲ್ಲ,– ಬಿಸೀ ಬೇಳೆ ಹುಳಿಯನ್ನ, ಮೊಸರನ್ನ, ಕೀರು, ಬೋಂಡ, ಉಪ್ಪೇರಿ, ಹಪ್ಪಳ, ಸಂಡಿಗೆ ಅಂತ ಕಾಣುತ್ತೆ....ಊಟವಾಯಿತು. ಹೊರಡುವುದಕ್ಕೆ ಮೊದಲು ಇನ್ನೊಂದು ಸಲ ಎಲ್ಲವನ್ನೂ ಸುತ್ತಿಕೊಂಡು ಬರಬೇಕೆಂದು ಈ ಕೊನೆಯಿಂದ ಆ ಕೊನೆಯವರೆಗೆ ಪುನಃ ಪ್ರದಕ್ಷಿಣೆ ಮಾಡಿದ್ದಾಯಿತು. ಎಷ್ಟು ನೋಡಿದರೂ ತಣಿಯದ ನೋಟವದು. ಮನಸ್ಸಿಲ್ಲದ ಮನಸ್ಸಿನಿಂದ ಮೋಟಾರಿನಲ್ಲಿ ಕುಳಿತೆವು. ಡ್ರೈವರು ಎರಡು ಮೂರು ಸಲ ಕಬ್ಬಿಣದ ಕೋಲು ಹಿಡಿದು 'ಸ್ಟಾರ್ಟು' ಮಾಡಲು ಪ್ರಯತ್ನಪಟ್ಟ. ಆದೇಕೋ ಮೋಟಾರು ಅವನೊಡನೆ ಮುನಿಸುಗೊಂಡಿದ್ದಂತೆ ತೋರಿತು. ಅದು ಶಬ್ದ ಮಾಡಲೇ ಇಲ್ಲ. 'ಇದಕ್ಕೇನು ಬಂತಪ್ಪ ರೋಗ,' ಎಂದುಕೊಂಡು ಎಲ್ಲರು ಕೆಳಗಿಳಿದೆವು. ಡ್ರೈವರು ಆ ಮೊಳೆ ಒತ್ತಿ, ಈ ಮೊಳೆ ಎಳೆದು, ಹತ್ತಿ, ಇಳಿದು, ಬಗ್ಗಿ, ಎದ್ದು ಏನೇನೋ ಮಾಡಿದ. ಏನೂ ಪ್ರಯೋಜನವಾಗಲಿಲ್ಲ. "ಈಗ ತಾನೇ ಗಾಡಿಯನ್ನು ಕೆಳಗಿನಿಂದ ತೆಗೆದುಕೊಂಡು ಬಂದೆ. ಇಲ್ಲಿಯವರೆಗೂ ಸಲೀಸಾಗಿ ಬಂತು. ಈಗೇನಾಯಿತು ಇದಕ್ಕೆ ?' ಎಂದು ನಮ್ಮನ್ನೇ ಕೇಳಿದ !........"

"ಆ ಮೇಲೆ ? ಏನು ಮಾಡಿದಿರಿ ?"

" ಮಾಡುವುದೇನು ? ಸ್ವಲ್ಪ ಹೊತ್ತು ನೋಡಿದೆವು. ಮೋಟಾರು ಸರಿಯಾಗುವ ಸೂಚನೆ ಕಂಡುಬರಲಿಲ್ಲ. ಯಾರ ಕೈಲಾದರೂ ಮನೆಗೆ ಹೇಳಿ ಕಳುಹಿಸೋಣ, ಎಂದು ನೋಡಿದೆವು. ಆ ದಿನ ಭಾನುವಾರವಾದ್ದರಿಂದ ಸುಮಾರು ಮೂವತ್ತು ನಾಲ್ವತ್ತು ಕಾರು ಮೈಸೂರಿನಿಂದ ಬಂದಿದ್ದುವು. ಅವರಲ್ಲಿ ಅನೇಕರು ನಮಗಿಂತ ಬಹಳ ಮುಂಚೆ ಬಂದಿದ್ದವರು. ಅಂತೂ ನಾವು ನೋಡುವ ಹೊತ್ತಿಗೆ ಕಂಡವರು ಯಾರೂ ಇರಲಿಲ್ಲ. ನಮಗೆ ಅಲ್ಲಿ ತೊಂದರೆ ಯೇನೂ ಇರಲಿಲ್ಲ. ಬೆಳಗಾಗುವ ವರೆಗೂ ಇದ್ದು ರೈಲಿನಲ್ಲಿ ಬೇಕಾದರೂ ಬರಬಹುದಾಗಿತ್ತು. ಆದರೆ ಮನೆಯಲ್ಲಿರುವವರ ಗತಿ ? ರಾತ್ರಿ ಒಂಬತ್ತು ಗಂಟೆಯೊಳಗೆ ಬರುತ್ತೇವೆಂದು ಹೇಳಿ ಬರದೇ ಹೋದರೆ ಅವರು ಏನೆಂದು ತಿಳಿದುಕೊಳ್ಳಬೇಕು ? ಅದರಲ್ಲಿ ನಮ್ಮ ತಂದೆಯವರದು ಬಹಳ ಗಾಬರಿ ಸ್ವಭಾವ........ "

" ಹತ್ತು ಗಂಟೆಯಾಯಿತು. ದೀಪಗಳನ್ನೆಲ್ಲಾ ಆರಿಸಿಬಿಟ್ಟರು. ರಂಗು ರಂಗಾದ ದೀಪಗಳಿಂದ ಮೆರೆಯುತ್ತಿದ್ದ ಪ್ರದೇಶವು ಒಮ್ಮೆಗೇ,– ರಾಗಗಳನ್ನು ಕಳೆದುಕೊಂಡ ಯೋಗಿಯಂತೆ ಕಂಗೊಳಿಸಿತು. ಚಳಿ....ಗಾಳಿ....ಮಕ್ಕಳಿಗೆ ನಿದ್ರೆಯೊಂದು ಕಡೆ. ಆದರೆ ನಮಗೆ ನಮ್ಮ ಯೋಚನೆಗಿಂತ ಮನೆಯಲ್ಲಿದ್ದ ಹಿರಿಯರ ಯೋಚನೆ ಹೆಚ್ಚಾಯಿತು. ಮೊದಲು ಏರ್ಪಾಡು ಇದ್ದದ್ದು ಅವರೂ ನಮ್ಮೊಂದಿಗೆ ಬರಬೇಕೆಂದು. ಅಕಸ್ಮಾತ್ ನಮ್ಮ ತಂದೆಯವರಿಗೆ ಸ್ವಲ್ಪ ನೆಗಡಿಯಾದ್ದರಿಂದ ಗಾಳಿಯಲ್ಲಿ ಹೋದರೆ ಹೆಚ್ಚಾಗಬಹುದೆಂದು ಹಿಂದೆ ನಿಂತು ಬಿಟ್ಟರು. ಅವರೂ ಬಂದಿದ್ದರೆ ಈ ಪೇಚಾಟವಿರಲಿಲ್ಲ. ಬಂದ ಕಷ್ಟವನ್ನು ಎಲ್ಲರೂ ಒಟ್ಟಿಗೆ ಅನುಭವಿಸಬಹುಗಿತ್ತು. ಈಗ ಅವರು ಎಷ್ಟು ಕಳವಳಪಡುತ್ತಾರೋ ಎಂದು ಎಲ್ಲರೂ ಒದ್ದಾಡಿದೆವು. ಮಾಡುವುದೇನು ? ಆ ಹೊತ್ತಿನಲ್ಲಿ ಅದು ಹೊರತು ಇನ್ನೇನು ಮಾಡುವುದಕ್ಕೂ ಸಾಧ್ಯವಿರಲಿಲ್ಲ........

" ಶರತ್ಕಾಲದ ಬೆಳದಿಂಗಳ ರಾತ್ರಿ ! ಹೇಳುವುದೇನು ? ಆಗಿನ ಸೊಬಗು ವರ್ಣನಾತೀತವಾಗಿತ್ತು. ದೀಪದ ಎದುರಿನಲ್ಲಿ ಹುಡುಗಿಯಂತೆ ಚೆಲ್ಲಾಟವಾಡುತ್ತ ಕುಣಿಯುತ್ತಿದ್ದ ಪ್ರಕೃತಿ, ವಿಶ್ವವನ್ನೇ ಅಪ್ಪಿದ್ದ ಬೆಳದಿಂಗಳಿನಲ್ಲಿ ಹೆಚ್ಚು ಶಾಂತಳೂ ಗಂಭೀರಳೂ ಆಗಿ, ನವಯೌವನೆಯಂತೆ ತೋರಿದಳು........

" ನಾವು ' ಬೃಂದಾವನ ' ವನ್ನು ದೀಪವಿಲ್ಲದೆ ಬೆಳದಿಂಗಳಿನಲ್ಲಿ ನೋಡಿರಲಿಲ್ಲ. ಎಂದು ಹೋದರೂ, ಸಾಯಂಕಾಲ ಹೋಗುವುದು, ಒಂದೆರಡು ಗಂಟೆ

ಗಳ ಕಾಲ ಇದ್ದು ಬಂದುಬಿಡುವುದು,–ಇದೇ ಪದ್ಧತಿ. ಆ ದಿನವೂ ಹಾಗೇ ಮಾಡಬೇಕೆಂದು ಇದ್ದೆವು. ಆದರೆ ಅಕಸ್ಮಾತ್ ನಿಂತದ್ದರಿಂದ ಆ ಸೊಬಗನ್ನು ನೋಡುವ ಭಾಗ್ಯವು ನಮಗೆ ದೊರಕಿತು.

"ಜನರ ಗಲಾಟೆಯಿಲ್ಲ. ದೀಪಗಳ ಆಡಂಬರವಿಲ್ಲ. ಕೃತಕತೆಯು ಮಾಯವಾಗಿತ್ತು. ನೀರಿನ ಚಿಲುಮೆಗಳೆಲ್ಲವೂ ಒಂದೇಸಲ ಚಂದ್ರನೆಮರಿಗೆ ತಮ್ಮ ನರ್ತನವನ್ನು ಪ್ರದರ್ಶಿಸುತ್ತಿದ್ದುವು. ಹನಿಗಳ ಗುಂಪು ಅವನನ್ನು ಮುಟ್ಟುವ ಸಾಹಸಮಾಡಿ, ಸಾಧ್ಯವಾಗದಿರಲು ಲಜ್ಜೆಯಿಂದ ಕೆಳಗುರುಳು ತ್ತಿದ್ದುವು. ನೋಡಿದರೆ ಅಲ್ಲೂ ಅವನೇ! ಮೇಲೆ ನಗುತ್ತಾನೆ, ಕೆಳಗೆ ನಡು ಗುತ್ತಾನೆ. ಹನಿಗಳಿಗೆ ಭ್ರಾಂತಿ! ಪುನಃ ಹಿಡಿಯಲು ಪ್ರಯತ್ನ. ಪುನಃ ಕೆಳ ಗುರುಳುವುದು. ಅವುಗಳ ಸಾಹಸವನ್ನು ನೋಡಿ ನಗುತ್ತ ಚಂದ್ರನು ತನ್ನ ಕಾಂತಿಯನ್ನು ನೀರಿನ ಮೇಲೆ ಎರಚುತ್ತಿದ್ದನು. ಈ ಆಟಕ್ಕೆ ಕೊನೆಯೆಲ್ಲಿ? ಆ ಲೀಲೆಯನ್ನು ನೋಡುತ್ತ ಮೈಮರೆಯದವರಾರು? ಆದರೆ ಅದನ್ನು ನೋಡಲು ಅಲ್ಲಿ ಯಾರೂ ಇಲ್ಲ. ಮೌನವಾಗಿ ಇಣಿಕಿ ನೋಡುವ ಚುಕ್ಕೆಗಳು. ಮರದ ಸಂದಿನಲ್ಲಿ ನಿದ್ರೆಯ ಜೋಂಪಿನಲ್ಲಿರುವ ಹಕ್ಕಿಗಳು; ಮತ್ತು ನಿರ್ಬಂಧದಿಂದ ನಿಂತಿದ್ದ ನಾವು. ಸುತ್ತಲೂ ಸೌಂದರ್ಯವು ಎರಚಿದಂತಿತ್ತು. ಆದರೆ ನಮ್ಮ ಮನಸ್ಸು ಅದನ್ನು ಅನುಭವಿಸುವ ಸ್ಥಿತಿಯಲ್ಲಿರಲಿಲ್ಲ........"

"ಎಷ್ಟು ಹೊತ್ತು ಹಾಗೆ ಇದ್ದಿರಿ?"

"ಸುಮಾರು ಒಂದು ಗಂಟೆಯಿರಬಹುದು. ನಮ್ಮ ತಂದೆಯವರು ನಾವು ಅಷ್ಟು ಹೊತ್ತಾದರೂ ಬರದೇ ಇದ್ದುದನ್ನು ನೋಡಿ, ತಾವೇ ಆ ಹೊತ್ತಿನಲ್ಲಿ ಸ್ನೇಹಿತರೊಬ್ಬರ ಮನೆಗೆ ಹೋಗಿ ಅವರ ಕಾರನ್ನು 'ನಮ್ಮನ್ನು ಹುಡುಕುವುದಕ್ಕಾಗಿ' ಕಳಿಸಿದರು. ಆ ವೇಳೆಗೆ ನಮ್ಮ ಕಾರೂ ಸರಿಯಾಗಿ ನಾವೂ ಹೊರಟಿದ್ದೆವು....

"ಊರನ್ನೇನೋ ಸುಖವಾಗಿ ತಲಪಿದೆವು. ಆದರೆ ಮನೆಯಲ್ಲಿ ಹಿರಿ ಯರು ಪಟ್ಟ ಸಂಕಟ ದೇವರಿಗೆ ಪ್ರೀತಿ. ಅದನ್ನು ನಾನು ಹೇಳುವಂತಿಲ್ಲ. ಅವರವರ ಸಾಮರ್ಥ್ಯವಿದ್ದಷ್ಟು ಊಹಿಸಿಕೊಳ್ಳಬಹುದು. ಸಾಲದುದಕ್ಕೆ ಮೂರು ದಿನಗಳ ಹಿಂದೆ ಯಾವುದೋ ಕಾರಣಕ್ಕಾಗಿ ಹಿಂದೂ–ಮುಸಲ್ಮಾನ

ದೊಂಬಿಯಾಗಿ ಗಲಾಟೆಯೋ ಗಲಾಟೆ. ರಾತ್ರಿಯಾದ ಮೇಲೆ ಧೈರ್ಯವಾಗಿ ಯಾರೂ ಒಬ್ಬರೇ ಹೊರಗೆ ಬರುತ್ತಿರಲಿಲ್ಲ. ನೋಡಿ, ನಾವು ಹೊರಟ ಸಮಯ ಹಾಗಿತ್ತು. ಮೊದಲೇ ಅಂಜುವವರ ಮೇಲೆ ಕಪ್ಪೆಯಿಟ್ಟ ಹಾಗೆ! ಅವರು ಕಳವಳಪಟ್ಟು ಕಾತರಿಸಿದ ರೀತಿಯನ್ನು ಕೇಳಿ ನಮಗೆ ಅಲ್ಲಿ ಪಟ್ಟ ಆನಂದದಲ್ಲಿ ಬಾಕಿ ಏನಾದರೂ ಉಳಿದಿದ್ದರೆ, ಅದೆಲ್ಲವೂ ಒಂದೇ ಸಲಕ್ಕೆ ಆರಿಹೋಯಿತು. ಆಗಿನಿಂದ ಅದೇಕೋ ನನಗೆ 'ಬೃಂದಾವನ' ಅಂದರೆ ಹೋಗಲು ಅಷ್ಟಷ್ಟೆ. ನೀವು ಬಂದರೆ ಅದೆಲ್ಲವನ್ನೂ ಮರೆತು ಹೊಸ ಮನಸ್ಸಿನಿಂದ ಹೋಗೋಣ, ಎನಿಸುತ್ತದೆ."

"ಬರದೆ ಉಂಟೆ? ನೀವು ಇಷ್ಟು ಹೇಳಿರುವುದನ್ನು ಕೇಳಿದ ಯಾರಿಗಾದರೂ ಒಂದು ಸಲ ಬರಬೇಕು ಅನ್ನಿಸದೆ ಇರುವುದಿಲ್ಲ. ನಿಮ್ಮ ಕತೆ ಕೇಳಿದಾಗಿನಿಂದ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಏಳುತ್ತಿದೆ."

"ಏನು?"

"ಅಲ್ಲಾ, ಕಾರು ಸರಿಯಾಗುವವರೆಗೆ ಒಂದು ಗಂಟೆಕಾಲ ಸುಮ್ಮನೆ ಕೂತಿದ್ದಿರಲ್ಲ, ಈಜಬಾರದಾಗಿತ್ತೆ? ಬೆಳದಿಂಗಳಿನಲ್ಲಿ ಈಜುವುದು ಎಷ್ಟು ಸುಖವಾಗಿರುತ್ತೆ........"

"ನನಗೆ ಈಜು ಬರುವುದಿಲ್ಲ."

"ನೀವು ಈ ಸಲ ಕೊಡಗಿಗೆ ಬನ್ನಿ; ನಾನು ಕಲಿಸಿಕೊಡುತ್ತೇನೆ. ನನಗೆ ಈಜುವುದೆಂದರೆ ಪ್ರಾಣ. ನೀರಿಗೆ ಇಳಿದರೆ ಮೇಲಕ್ಕೆ ಬರುವುದಕ್ಕೆ ಮನಸ್ಸು ಬರುವುದಿಲ್ಲ. ನಾನು 'ಬೃಂದಾವನ'ಕ್ಕೆ ಬಂದರೆ ಮನದಣಿಯೆ ಈಜುತ್ತೇನೆ. ನೀವು ಕಟ್ಟೆಯಮೇಲೆ ಕೂತುಕೊಂಡು ಎಷ್ಟು ಕೂಗಿದರೂ, ನನಗೆ ತೃಪ್ತಿಯಾಗುವವರೆಗೂ ಹೊರಗೆ ಬರುವುದಿಲ್ಲ—"

"ನಿಮ್ಮನ್ನು ನೀರಿಗೆ ಇಳಿಯುವುದಕ್ಕೆ ಬಿಟ್ಟರೆ ತಾನೇ ನೀವು ಈಜುವುದು? ಅಲ್ಲಿ ಇತರ ಕಡೆಗಳಂತಲ್ಲ. ಅಪಾಯ ಹೆಚ್ಚು........"

"ಯಾಕ್ರೀ,—ಹೀಗೆ ಹೆದರುತ್ತೀರಿ? ಇಗೊ—ನೋಡಿ, ನಾನು ಇಳಿದೆ........"

" ಅಯ್ಯೋ, ಬೇಡಿ,—ಬೇಡಿ.... ಗೌರಮ್ಮ.... "

ತಟಕ್ಕನೆ ಎಚ್ಚರವಾಯಿತು. ಕುರ್ಚಿಯ ಮೇಲೆ ನಗುತ್ತ ಕೊರಳು ಕೊಂಕಿಸಿ ಕುಳಿತಿದ್ದ ಗೌರಮ್ಮ ಎಲ್ಲಿ? ಆ ಹೊಳೆ, ದೀಪ, ಬೆಳದಿಂಗಳು? ಒಂದೂ ಇಲ್ಲ. ಇದೇನು? ನಾನಿರುವುದೆಲ್ಲಿ? ಇದು ನನ್ನ ರೂಮು! ಈ ಮಂಚ, ಕುರ್ಚಿ, ಮೇಜು, ಎಲ್ಲ ನನ್ನದೇ ಎಂದು ಕಾಣುತ್ತದೆ. ಮೇಜಿನ ಮೇಲೆ ಬರೆಯದಿದ್ದ ಹಾಳೆಗಳು ಬಿದ್ದಿವೆ. ಮೊದಲುಹಾಳೆಯ ಮೇಲೆ ' ಶ್ರೀ ' ಎಂದು ಬರೆದಿದೆ. ಏನು ವಿಚಿತ್ರ! ಕೈಲಿ ಲೇಖಣಿ ಬೇರೆ!!

ಇದೇನು ಕನಸೋ ನೆನಸೋ?

" ವಾಣಿ "

# ಶಾಲ್ಮಲೆಗೆ

ಶಾಲ್ಮಲೆಯ ದಡದಲ್ಲಿ ಒಂದು ಚಿಕ್ಕ ಹಳ್ಳಿ ನಮ್ಮೂರು; ನಮ್ಮಪ್ಪ ಆ ಊರ ಕುಲಕರ್ಣಿ; ನಮ್ಮೂರಲ್ಲಿ ಬ್ರಾಹ್ಮಣರ ಮನೆಗಳು ಮೂರೇ. ಒಂದು ನಮ್ಮದು, ಮತ್ತೊಂದು ಗೌಡರದು, ಇನ್ನೊಂದು ದೇಸಾಯರದು. ನಮ್ಮೂರ ಎಲ್ಲ ರೈತ ಜನರು ನಮ್ಮನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಊರಲ್ಲಿಯ ಕಲಹಗಳು ಮೇಲಧಿಕಾರಿಗಳವರೆಗೆ ಎಂದೂ ಮುಟ್ಟಿದ್ದಿಲ್ಲ. ಅಲ್ಲದೆ ಮೇಲಧಿಕಾರಿಗಳು ಕೂಡ ನಮ್ಮ ಕೆಲಸದಲ್ಲಿಯ ಚೊಕ್ಕತನ, ಅವರು ಲೆಕ್ಕ ಪತ್ರಗಳನ್ನು ನೋಡಲು ಊರಿಗೆ ಬಂದಾಗ ಮಾಡಿದ ಆದರಾತಿಥ್ಯಗಳನ್ನು ಕಂಡು ನಮಗೆ ಯಾವ ತೊಂದರೆಯನ್ನೂ ಕೊಡುತ್ತಿರಲಿಲ್ಲ.

ಊರಿಂದ ಅರ್ಧ ಮೈಲಿನಲ್ಲಿಯೇ ಶಾಲ್ಮಲಾನದಿ. ನಮ್ಮೂರಿಗೆ ಶಾಲ್ಮಲೆಯ ಆಧಾರವೇ ಆಧಾರ; ಎಂದೂ ನೀರಿನ ಅರಬಾಗಿರಲಿಲ್ಲ. ಜುಳುಜುಳು ಹರಿಯುವ ಸ್ವಚ್ಛವಾದ ಸೀನೀರು, ದಂಡೆಯ ಮೇಲೆ ತರತರದ ಗಿಡಗಳು, ಹೂಗಳು, ಬಗೆಬಗೆಯ ಬಂಣಾದ ಹಕ್ಕಿಗಳು, ನೀರಿನಲ್ಲಿ ನೆಗೆದಾಡುವ ಮೀನಗಳು ಇವೆಲ್ಲವುಗಳನ್ನು ನೋಡಿದವರಿಗೆ ಅಲ್ಲಿಯೇ ಶಾಲ್ಮಲೆಯ ದಂಡೆಯ ಮೇಲೆ ಒಂದು ಗುಡಿಸಲು ಹಾಕಿಕೊಂಡು ಸುಖದಿಂದ ಕಾಲ ಕಳೆಯಬೇಕೆಂದು ಅನ್ನಿಸದೆ ಇರುತ್ತಿರಲಿಲ್ಲ.

ನಮ್ಮ ಮನೆಯ ಜನರೆಂದರೆ ಅವ್ವ, ಅಪ್ಪ, ಅಕ್ಕ ಮತ್ತೆ ನಾನು. ದುರ್ದೈವದಿಂದ ನಮಗೆ ಅಣ್ಣತಮ್ಮಂದಿರಿರಲಿಲ್ಲ. ಆದರೂ ನಮಗೆ ಅಣ್ಣ ತಮ್ಮಂದಿರ ಅಭಾವವಿರಲಿಲ್ಲ. ನಮ್ಮ ಮನೆಯ ಎದುರು ದೇಸಾಯರ ಮನೆ. ಅವರು ನಮಗಿಂತ ಶ್ರೀಮಂತರು; ಕಲಿತವರು; ಸುಧಾರಿಸಿದವರು. ಅವರ ಮಗಳು ಸೂಶಿ ಮತ್ತು ನಾನು ಗೆಳತಿಯರು. ಇಬ್ಬರಿಗೂ ಅಷ್ಟೇ ವಯಸ್ಸು. ಅವರ ಅಣ್ಣ ಮನೂ ನಮ್ಮ ಮೇಲೆ ಬಹಳ ಪ್ರೀತಿ. ನಮಗೆ ಆಟವಾಡಲಿಕ್ಕೆ ಬೇಕಾಗುವ ಸಾಹಿತ್ಯಗಳನ್ನೆಲ್ಲ ಅವ ನಮಗೆ ತಂದು ಕೊಡುತ್ತಿದ್ದ. ನಮ್ಮಪ್ಪ ಹೇಳಿ ಕೇಳಿ ಜೀನ. ವರ್ಷದಲ್ಲಿ ಎರಡುಸೀರೆ ಕುಪ್ಪಸಗಳು ನಮಗೆ ಸಿಗಬೇಕಾದರೆ ಸಾಕುಬೇಕಾಗುತ್ತಿತ್ತು. ಆದರೆ ನಮಗೆ ಉಡುತೊಡಲಿಕ್ಕೆ

ತಾಪತ್ರಯವಿರಲಿಲ್ಲ. ದೇಸಾಯರು ಸೂಶಿಯ ಸಂಗಡ ನಮಗೂ ಬಟ್ಟೆ, ಹೋಲಿ ಸುತ್ತಿದ್ದರು. ಅಷ್ಟೊಂದು ಪ್ರೀತಿ ಅವರು ಮಕ್ಕಳ ಮೇಲೆ!

ಎಂಟು ವರುಷದ ಹಿಂದಿನ ಮಾತು. ಆಗ ನಾನು ಹತ್ತುವರುಷದವಳಿದ್ದೆ. ನಾನು ಮತ್ತು ದೇಸಾಯರ ಸೂಶಿ ಒಂದು ದಿನ ನಮ್ಮ ಮನೆಯ ಕಟ್ಟೆಯ ಮೇಲೆ ಗೊಂಬೆಯಾಟವಾಡುತ್ತ ಕುಳಿತಿದ್ದೆವು. ಮನೂ ಕೂಗಿದ: "ಲಿಲೀ". ಸೂಶಿ ಗೊಂಬೆಗೆ ಸೀರೆ ಉಡಿಸುವದರಲ್ಲಿ ತೊಡಗಿದ್ದಳು.

"ಲಿಲೀ, ಇದು ತಗೊ ಪೇಪರಮೆಂಟು" ಮನೂ ಕೂಗಿದ. ಆಯಿತು ಪೇಪರಮೆಂಟು ಅಂದರೆ ನನ್ನ ಪ್ರಾಣ. ಮನೂ ಕೂಗಿದ್ದೊಂದೇ ತಡ, ಒಂದೇ ಉಸಿರಿಗೆ ಅವನ ಎದುರುಹೋಗಿ ನಿಂತೆ, ಬ್ರಾಹ್ಮಣರು ದಕ್ಷಿಣೆಗೆ ಕೈ ಒಡ್ಡಿದಂತೆ! ಅವನು ನನ್ನ ಕೈಯಲ್ಲಿ ಒಂದು ಚೀಟಿ ಒಂದು ಪೊಟ್ಟಣ ಇಟ್ಟು "ಇವು ಯಾರಿಗೆ ಗೊತ್ತದ ಹೌದಲ್ಲೊ" ಎಂದು ಕೇಳಿದ. ನಾನು ಒಮ್ಮೆಲೇ ಹೇಳಿಬಿಟ್ಟೆ "ಪೊಟ್ಟಣ ನನಗ, ಚೀಟಿ ಅಕ್ಕಗ" ಎಂದು.

ಅಕ್ಕನಿಗೆ ಟಪಾಲು ಮುಟ್ಟಿಸುವ ಕೆಲಸ ನನಗೆ ಕೊಟ್ಟಿದ್ದ ಮನೂ. ನನಗೆ ಟಪಾಲು ಮುಟ್ಟಿಸುವದಕ್ಕಾಗಿ ಯೋಗ್ಯ ಪಗಾರ ಸಿಗುತ್ತಿತ್ತು. ಚೀಟಿಯ ಸಂಗಡ ಪೊಟ್ಟಣ. ಇಲ್ಲದಿದ್ದರೆ ಟಪಾಲು ಡೆಡ್‌ಲೆಟರ್ ಆಫೀಸಿಗೆ ಹೋಗುವದೆಂದು ಮನೂಗೆ ಗೊತ್ತಿತ್ತು.

ನಾನು ಮನೆಗೆ ಹೋದಾಗ ಅಕ್ಕ ಕೋಣೆಯಲ್ಲಿ ಏನೋ ಓದುತ್ತ ಕುಳಿತಿದ್ದಳು. ನಾನು ಅವಳಿಗೆ ಚೀಟಿಕೊಟ್ಟು ಮತ್ತೆ ಸೂಶಿಯ ಸಂಗಡ ಆಡುತ್ತ ಕುಳಿತೆ. ಅಕ್ಕ ಕೊಡ ತೆಗೆದುಕೊಂಡು ನೀರಿಗೆ ಹೊರಟಳು.

"ಅಕ್ಕಾ, ನಾವೂ ನದೀಗೆ ಬರತೇವಿ" ನಾನು ಕೇಳಿದೆ.

"ಈಗ ಬ್ಯಾಡ. ವನಕರ ಬರೋ ಹೊತ್ತು. ಇಲ್ಲೇ ಆಡಿಕೋತ ಕೂಡ್ರಿ" ಎಂದು ಹೇಳಿದವಳೇ ಹೊರಟೇ ಬಿಟ್ಟಳು.

ನಾವು ಆಟವನ್ನು ಮುಗಿಸಿ ಮನೂನ ಸಂಗಡಾದರೂ ಅಡ್ಡಾಡಲಿಕ್ಕೆ ಹೋಗಬೇಕು ಎಂದು ಅವರ ಮನೆಗೆ ಹೋದೆವು. ಮನೂ ಮನೆಯಲ್ಲಿದ್ದರಷ್ಟೇ ಸಿಗುವದು? ನಾನು ಸೂಶಿಗೆ ಹೇಳಿದೆ: "ನಡಿಯೋ! ನಾವೂ ಹೌರಗ ಅಕ್ಕನ ಹಿಂದಿಂದ ನದೀಗೆ ಹೋಗೋಣ. ಆಕಿ ನೀರು ತುಂಬೋಮುಂದ ಒಮ್ಮಿಗಿಲೆ ಹೆದರಿಸಿ ಬಿಡೋಣಂತ."

ಎಲ್ಲರೂ ನೀರು ತುಂಬುವ ಸ್ಥಳಕ್ಕೆ ಅಕ್ಕ ಹೋಗುತ್ತಿದ್ದಿಲ್ಲ. 'ಅಲ್ಯಾಕ ನೀರು ತುಂಬೂದುಲ್ಲ, ಎಲ್ಲಾರೂ ತುಂಬೋ ಅಲ್ಲೆ ?' ಎಂದು ಕೇಳಿದರೆ 'ಅಲ್ಲೆ ಎಲ್ಲಾರೂ ತುಂಬಿ ತುಂಬಿ ನೀರು ರಾಡಿ ಆಗಿರತಾವ, ಅದಕ ಮಡಿವಿನ ಕಡೆ ನೀರು ಚೆಲೋ ಇರತಾವ, ಅಲ್ಲೆ ತುಂಬಿಕೊಂಡು ಬರತೇನಿ' ಎಂದು ಹೇಳುತ್ತಿದ್ದಳು. ಆ ದಿನವಾದರೂ ಅವಳು ಅತ್ತ ಕಡೆಗೇ ಹೊರಟಳು. ಅವಳು ಮುಂದೆ, ನಾವು ಹಿಂದೆ; ಅರ್ಧ ಫರ್ಲಾಂಗಿನಷ್ಟು ಅಂತರ. ಅವಳು ಏನೋ ವಿಚಾರದಲ್ಲಿ ಹೊರಟಿದ್ದಳು. ಅವಳಿಗೆ ಯಾವ ಪರಿವೆಯೂ ಇದ್ದಿಲ್ಲವೆಂದು ತೋರುತ್ತಿತ್ತು. ಅವಳು ಹಿಂದೆ ಹೊರಳಿ ನೋಡದೆ ಇದ್ದುದು ನೆಟ್ಟಗಾಯಿತು. ಇಲ್ಲದಿದ್ದರೆ ನಾವು ಹಾಕಿದ ಹಂಚಿಕೆ ಈಡೇರುತ್ತಿದ್ದಿಲ್ಲ.

ನದಿಯು ದೂರದಲ್ಲಿ ಕಾಣುತ್ತಿತ್ತು. ದಂಡೆಯ ಬಂಡೆಗಲ್ಲಮೇಲೆ ಯಾರೋ ಕುಳಿತಿದ್ದರು. ನಾವು ಸ್ವಲ್ಪ ಮುಂದಕ್ಕೆ ಹೋದಮೇಲೆ ಮನೂ ಎಂದು ಗೊತ್ತಾಯಿತು. ಸೂಶಿ ಒಮ್ಮೆಲೇ 'ಮನೂ' ಎಂದು ಒದರುವವಳು; ನಾನು ಅವಳ ಬಾಯಿಯನ್ನು ಗಟ್ಟಿಯಾಗಿ ಹಿಡಿದೆ. "ಏ–ಒದರ ಬ್ಯಾಡs, ಅವರಿಗೆ ನಾವು ಬಂದದ್ದು ಗೊತ್ತಾಗತದ" ಅಂದೆ. ಮನೂ ನದಿಯ ಪಾತ್ರದ ಕಡೆಗೆ ಮೋರೆ ಮಾಡಿ ಕುಳಿತದರಿಂದ ನಾವು ಬರುವದು ಅವನಿಗೆ ಕಾಣಿಸಲಿಲ್ಲ. ನಾವು ಸನಿಯಕ್ಕೆ ಬಂದಂತೆ ಹಾದಿಯನ್ನು ಬಿಟ್ಟು ಕಂಟಿಗೆ ಮರೆಯಾಗಿ ನಿಂತುಕೊಂಡೆವು. ಅಕ್ಕ ನದಿಯಲ್ಲಿಳಿದು ನೀರು ತುಂಬಿ ದಂಡೆಗೆ ತಂದು ಇಟ್ಟಳು. ಮೊದಲು ಮನೂ ಮಾತೆತ್ತಿದ–

"ಲೀಲಿ ಸೂಶಿ ಅವರನ ತಪ್ಪಿಸಿ ಬಂದಿಲ್ಲೊ ?"

"ಲೀಲಿ ಬರತೇನಿ ಅಂತ ಕೂತಿದ್ದಳು. ಏನೋ ಥಾಪು ಹೊಡದು ತಪ್ಪಿಸಿ ಬಂದು ಬಿಟ್ಟೆ, ಆತು."

ಲೀಲಿ ಸೂಶಿ ಇಲ್ಲಿ ಕಂಟಿಯ ಮರೆಗೆ ಪ್ರತ್ಯಕ್ಷ ಬಂದು ನಿಂತದ್ದು ಅವಳಿಗೇನು ಗೊತ್ತು ಪಾಪ.

"ಈಗ ಯಾಕ ಚೀಟಿ ಬರಿದದ್ದು ?" ಅಕ್ಕ ಕೇಳಿದಳು.

"ನಾಳೆ ನಾ ಮೈಸೂರಿಗೆ ಹೋಗಬೇಕಾಗೇದ, ಅದಕ. ಇವತ್ತ ಕಡೀ ಭೆಟ್ಟಿಯಾಗಿ ಹೋಗಬೇಕಂತ ಬರೆದಿದ್ದೆ" ಮನೂ ಉತ್ತರ ಕೊಟ್ಟ.

" ಅಂದರ ಇನ್ನ ತಿರುಗಿ ಬರೋದುಲ್ಲೋ ಏನು ? " ಅಕ್ಕ ಕುತೂಹಲ ದಿಂದ ಕೇಳಿದಳು.

" ನಾಲ್ಕು ವರ್ಷ ಬರೂದುಲ್ಲ. ನಡುವ ಬಿಡುವು ಇದ್ದಾಗ ಅಂದರ ವರ್ಷದಾಗ ಎರಡಪೆಟ್ಟು ಬರತೇನಿ " ಮನೂ ಕಳಕಳಿಯಿಂದ ಹೇಳಿದ.

" ಈಗ ಅಲ್ಲಿಗ್ಯಾಕ ಹೋಗೋದು ? "

" ಯಾಕಂದರ, ಕಲೀಲಿಕ್ಕೆ; ಅಲ್ಲಿ ಕಾಲೇಜಿನಾಗ ಅಭ್ಯಾಸಮಾಡಲಿಕ್ಕೆ" ಮನೂ ಸರಳವಾಗಿ ಉತ್ತರ ಕೊಟ್ಟ.

" ಹಂಗಾರ ಇತ್ಲಾಗಿನವರದು ಇನ್ನ ನೆನಪಾಗೋದs ಕಠಿಣ. ಅಂಥಾ ದೊಡ್ಡ ಪಟ್ಟಣಕ್ಕ ಹೋದವ್ಯಾಲ ಅಲ್ಲಿ ನಮ್ಮಂಥವರು ಎಷ್ಟು ಮಂದ್ಯೊ ಏನೋ ? "

" ಹಂಗೇನೂ ಮಾಡೂದುಲ್ಲ ಚಲುವೀ, ನಿನ್ನ ನಾನು ಎಂದೂ ಮರ್ಯೋ ಹಂಗಿಲ್ಲ. ನಿನ್ನ ಬಿಟ್ಟು ಯಾರೂ ಇಲ್ಲ ನನಗ ಅಂತ ತಿಳಿದು ಬಿಟ್ಟೇನಿ ನಾನು. ನೀನು ನನ್ನ ಕಣ್ಣಮುಂದ ಇರದಿದ್ದರೂ ಮನಸಿನಾಗ ನಿನ್ನ ಮೂರ್ತಿ ಸ್ಥಿರ ಆಗಿ ಬಿಟ್ಟsದ. ನಿಮ್ಮಪ್ಪನ ಮನಸ್ಸೊಂದು ಇದ್ದರ ಇಷ್ಟೊತ್ತಿಗೆ ಲಗ್ನ ಆಗಿ ಆರ ತಿಂಗಳು ಆಗತಿತ್ತು. ನಿನ್ನೂ ಅಲ್ಲಿಗೆ ಕರಕೊಂಡು ಹೋಗತಿದ್ದೆ. ಆದರ "....ಮನೂನ ಕಂಠ ಬಿಗಿದುಬಂತು. ಅವನ ಬಾಯಿಂದ ಮಾತುಗಳು ಹೊರಡದಾದವು. ಚೆಲುವೆಯ ಕಣ್ಣುಗಳೂ ನೀರಿನಿಂದ ತುಂಬಿದವು.

" ಬೇಕಾದಂಥ ಪ್ರಸಂಗ ಬರಲಿ, ನಾನಂತೂ ಎರಡನೇ ಕಡೇ ಲಗ್ನ ಆಗೂದುಲ್ಲ. ಇದಕ್ಕೂ ಮೀರಿ ಜುಲುಮಿಂದ ಮಾಡಿದರ ನನ್ನ ಜೀವ ನನ್ನ ಕೈಯಾಗ ಅದ. " ಚಲುವಿ ಸ್ಥೈರ್ಯದಿಂದ ಮಾತಾಡಿದಳು.

" ಹುಚ್ಚೀ, ಹಾಂಗ ಮಾಡೀ ಮತ್ತ ! ಆದಷ್ಟು ಪ್ರಯತ್ನ ಮಾಡೋಣ. ಈ ಜನ್ಮದಲ್ಲಿ ನಾವು ಸುಖದಿಂದ ಕಾಲಕಳಿಯೋದು ನಮ್ಮ ದೈವದಾಗಿದ್ದರ ಅದನ್ನ ಯಾರಿಗೂ ತಪ್ಪಿಸಲಿಕ್ಕೆ ಶಕ್ಯ ಇಲ್ಲ. ಒಂದು ವೇಳೆ ಹಾಂಗ ಇರದಿದ್ದರ ನೀನು ಜೀವಮಾತ್ರ ಕೊಡಬೇಡ. ನೀನು ಜೀವದಿಂದ ಇದ್ದರೆ ನಾನು ಹೇಗಾದರೂ ಜೀವ ಹಿಡಿದಿರತೇನಿ. ಒಬ್ಬರನ್ನೊಬ್ಬರು ನೋಡಿಯಾದರೂ ಸಂತೋಷ ಪಡೋಣ. ಈಗ ಹೊತ್ತಾತು, ಮತ್ತ ಯಾರಾದರೂ ನೋಡಿ

ನಿಮ್ಮಪ್ಪನ ಮುಂದೆ ಹೇಳ್ಯಾರು ಹೋಗು! ಸಂಜ್ಯಾತು. ನಾ ಅಂತೂ ಪತ್ರ ಬರ್ಯೊಹಂಗ ಇಲ್ಲ; ಬರೆದರೂ ಅವು ನಿನ್ನ ಕೈಗೆ ಸಿಗೋ ಹಂಗ ಇಲ್ಲ. ಆದರೆ ನೀ ಮಾತ್ರ ಬರೀತಿರು. ಇದು ತಗೊ ನನ್ನ ವಿಳಾಸ. ಡಿಸೆಂಬರ್ ಬಿಡು ವಿನ್ಯಾಗ ಬರತೇನಿ." ಎಂದು ಒಂದು ಕಾಗದದ ಚೂರನ್ನು ಕೊಟ್ಟನು.

ಕಂಟಿಯ ಮರೆಗೆ ಇನ್ನು ನಿಲ್ಲಲು ನಮಗೆ ಆಗಲಿಲ್ಲ. ಅವರು ಮುಂದೆ ಏನು ಮಾತಾಡುವವರೋ! ನಾನು ಒಂದು ಸಣ್ಣ ಹರಳು ತೆಗೆದುಕೊಂಡು ಅವರಿಗೆ ಗುರಿ ಇಟ್ಟು ಹೊಡೆದೆ. ಅದು ನೆಟ್ಟಗೆ ಅಕ್ಕನ ಡುಬ್ಬಕ್ಕೆ ಬಡಿಯಿತು. ಗಾಬರಿಯಾಗಿ ಅತ್ತ ಇತ್ತ ನೋಡುವಷ್ಟರಲ್ಲಿ ನಾವು ಅವರ ಮಧ್ಯದಲ್ಲಿ ಹೋಗಿ ನಿಂತಿದ್ದೆವು. "ಅಕ್ಕಾ, ಅಪ್ಪನ ಮುಂದೆ ಹೇಳತೇನಿ. ಅಕ್ಕ ಮನೂ ಸದೀ ದಂಡೀವ್ಯಾಲ ಮಾತಾಡಿಕೋತ ನಿಂತಿದ್ದರು ಅಂತ. ಅದಕಂ ನನ್ನ ತಪ್ಪಿಸಿ ಬಂದೆಲ್ಲ? ಕಳ್ಳರು ಸಿಕ್ಕರು!" ಎಂದು ನಾನು ಅಂದೆ. ಸೂಶಿ ಸುಮ್ಮನೆ ನಗುತ್ತ ನಿಂತಿದ್ದಳು.

"ಅಪ್ಪನ ಮುಂದ ಹೇಳತೀಯಾ? ಹಂಗಾರ ನಾಳೆ ನಿನ್ನ ಗೊಂಬೆಗೆ ಸೀರಿ ಉಡಿಸಿಕೊಡೂದುಲ್ಲ ನೋಡು."

"ಬಿಡೂs ಮನೂ ಉಡಿಸಿಕೊಡತಾನ" ಎಂದು ಮನೂನ ಕಡೆಗೆ ನೋಡಿದೆ. ಅವನು ಕಿಸೆಯಲ್ಲಿ ಕೈ ಹಾಕಿದ. ನನಗೆ ಗೊತ್ತಾಯಿತು, ಪೇಪರ ಮೆಂಟು ಸಿಗುತ್ತವೆ ಅಂತ. ಅವ ಕಿಸೆಯಿಂದ ಎರಡು ಆಣೆ ತೆಗೆದು ಇಬ್ಬರಿಗೂ ಕೊಟ್ಟು "ಯಾರ ಮುಂದೂ ಹೇಳಬೇಡಿರಿ" ಎಂದು ಹೇಳಿದ.

* * * * * *

ಮನೂ ಊರಿಗೆ ಹೋಗಿ ಎಂಟು ದಿವಸಗಳಾಗಿದ್ದವು. ಅವನ ಸಂಗಡ ನನ್ನ ಪೇಪರಮೆಂಟು ಮಾಯವಾಗಿದ್ದವು. ನಮಗೆ ದಿನಾಲು ಒಂದು ಸಾವಿರ ಪೆಟ್ಟಾದರೂ ನೆನಪಾಗತಿತ್ತು. ಅವನ ನೆನಪಾದಾಗೆಲ್ಲ ಒಂದೊಂದೇ ವಿಷಯು ಗಳು ಕಣ್ಣಮುಂದೆ ಕಟ್ಟಿ ಮನಸ್ಸಿಗೆ ಕೆಟ್ಟೆನಿಸುತ್ತಿತ್ತು. ನಾನು ಅವನನ್ನು ಬಿಟ್ಟು ಬಿಟ್ಟು ಬಹುತರವಾಗಿ ಇರುತ್ತಿದ್ದಿಲ್ಲ. ಅವನು ಆಡ್ಯಾಡಲಿಕ್ಕೆ ಹೋದರೆ ಅವನ ಸಂಗಡ; ಅಂಗಡಿಗೆ ಹೋದರೆ ಅಲ್ಲಿ; ಹೊಲಕ್ಕೆ ಹೋದರೆ ಅಲ್ಲಿ ಸಹ. ನಾವು ಅವನನ್ನು ನಮ್ಮ ಮನೆಯವನೆಂತಲೇ ತಿಳಿದಿದ್ದೆವು. ಅವನಾದರೂ ನಮ್ಮ ಮೇಲೆ ಬಲು ಪ್ರೀತಿ.

ಅಕ್ಕನಂತೂ ಅವನ ಪ್ರೀತಿಗೆಳತಿ. ಸಣ್ಣವರಿದ್ದಾಗಿನಿಂದಲೂ ಅವರು ಒಬ್ಬರನ್ನೊಬ್ಬರು ಬಿಟ್ಟು ಇರುತ್ತಿರಲಿಲ್ಲ. ಕೂಡಿಯೇ ಪಂತಿ ಮಾಡುವದು; ಕೂಡಿಯೇ ನೀರು ತರುವದು–ತಿನ್ನುಣ್ಣುವದೂ ಕೂಡಿಯೇ. ಅವರಿಗೆ ' ಗಂಡಾ ಹೇಣ್ತಿ ' ಎಂದು ಮನೆಯವರೆಲ್ಲರೂ ನಗುಚೇಷ್ಟೆ ಮಾಡುತ್ತಿದ್ದರು. ದೊಡ್ಡವ ರಾದಂತೆ ಅವರು ಕೂಡಿ ಇರುವದು ಕಡಿಮೆಯಾಯಿತು. ಮನೆಯಲ್ಲಿಯೂ ಬಯ್ಯುತ್ತಿದ್ದರು. ಹೊಳೆಯ ವಂಡೆಯೊಂದು ಅವರ ಗುಟ್ಟಿನ ಬೆಟ್ಟಿಗೆ ಇಂಬು ಗೊಟ್ಟಿತ್ತು. ಅಕ್ಕನ ಕೈಗೆ ಹುಣ್ಣು ಆದಾಗ ರಾಧಾಕಕ್ಕಿ (ಮನೂನತಾಯಿ)ಯ ಕಡೆಯಿಂದ ಮನೂ ಮಲಾಮು ಕಳಿಸಿದ್ದು ನನಗೆ ಇನ್ನೂ ನೆನಪಿದೆ. ನೀರಿಗೆ ಹೋದಾಗ ಕಾಲುಜಾರಿ ಅಕ್ಕ ನದಿಯೊಳಗೆ ಬಿದ್ದಾಗ ಮನೂ ಈಸು ಬಿದ್ದು ಆಕೆಯನ್ನು ಕೈಹಿಡಿದು ದಂಡೆಗೆಳದದ್ದು ನನಗೆ ಎಂದೂ ಮರೆಯು ವಂತಿಲ್ಲ. ಊರಲ್ಲಿ ಸರ್ಕಸು ಸಿನೇಮಾ ನಾಟಕ ಬಂದರೆ ರಾಧಾಕಕ್ಕಿಯ ಕಡೆಯಿಂದ ಕರೆಕಳಿಸಿ ನಮ್ಮನ್ನು ಕರಕೊಂಡು ಹೋಗುತ್ತಿದ್ದ. ಹೀಗಾಗಿ ನಮಗೂ ಅವರಿಗೂ ಆಪ್ತತ್ವವು ವಿಶೇಷವಾಗಿ ಬೆಳೆದಿತ್ತು.

* * * * * *

ಮನೂ ಮೈಸೂರಿಗೆ ಹೋಗಿ ಮೂರು ತಿಂಗಳಾಗಿತ್ತು. ಈ ಮೂರು ತಿಂಗಳ ಅವಧಿಯಲ್ಲಿ ವಿಶೇಷ ಬದಲಾವಣೆಗಳಾಗಿದ್ದವು. ಅಕ್ಕನ ಮೋರೆಯ ಮೇಲಂತೂ ಲಕ್ಷಣವೇ ಇದ್ದಿಲ್ಲ. ಅವಳು ಯಾವಾಗಲೂ ವಿಚಾರದಲ್ಲಿಯೇ ಇರುತ್ತಿದ್ದಳು. ಅವ್ವನು ಎಷ್ಟೊಂದು ಸಾರೆ ಕೇಳಿದ್ದಳು. ಅದಕ್ಕೆ ಯಾವ ಯೋಗ್ಯ ಉತ್ತರವೇ ಸಿಕ್ಕಿದ್ದಿಲ್ಲ. ಅವಳು ಹೀಗೇಕೆ ಮೌನವಾಗಿರುವಳೆಂದು ಅವ್ವನಿಗೆ ಗೊತ್ತಿರಲಿಲ್ಲವೆಂತಲ್ಲ. ಆದರೂ ಅವಳ ಬಾಯಿಂದಲೇ ಕಾರಣವನ್ನು ಹೊರಗೆಡವಬೇಕೆಂದು ಮಾಡಿದ್ದಳು.

ಅವ್ವನು ಚೆಲುವೆಯನ್ನು ಮನೂನಿಗೆ ಕೊಟ್ಟು ಲಗ್ನಮಾಡಬೇಕೆಂದು ಅಪ್ಪನಿಗೆ ಮೇಲಿಂದ ಮೇಲೆ ಹೇಳುತ್ತಿದ್ದಳು. ಆದರೆ ಅದಕ್ಕೆ ಅಪ್ಪನು ಒಪ್ಪಿ ದ್ದಿಲ್ಲ. ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟು ಆ ನವ ಸುಧಾರಕ ಮನೂ ನಿಗೆ ಕೊಡುವದು ಆತನ ಮನಸ್ಸಿಗೆ ಬರಲಿಲ್ಲ. ಅವನು ಜೀನ. ತಾನು ವರದಕ್ಷಿಣೆಕೊಡುವ ಬದಲು ಗಂಡಿನವರೇ 'ಕನ್ಯಾ ದಕ್ಷಿಣೆಯನ್ನು ಕೊಟ್ಟು ಲಗ್ನದ ವೆಚ್ಚವನ್ನು ಸಹ ನೋಡಿಕೊಂಡರೆ ನೆಟ್ಟಗಾಗುವದೆಂದು ಅವನು ವಿಚಾ

ರಿಸಿರಬಹುದು. ವರನು ಮುದುಕನಿದ್ದರೂ ಚಿಂತೆ ಇಲ್ಲ. ರೊಕ್ಕವೊಂದು ಬಂದರೆ ತೀರಿತು! ಈ ವಿಷಯವಾಗಿ ಅವ್ವನಿಗೂ ಅಪ್ಪನಿಗೂ ಮೇಲಿಂದ ಮೇಲೆ ಸಣ್ಣ ಸಣ್ಣ ಜಗಳಗಳಾಗುತ್ತಿದ್ದವು.

ಅವ್ವನ ಮಾತನ್ನು ಕೇಳುವವರಾರು? ಇನ್ನು ಚೆಲುವೆಯ ಮಾತಂತೂ ದೂರೇ ಉಳಿಯಿತು. ಕಡೆಗೊಮ್ಮೆ ಅವಳಿಗೆ ವರ ಗೊತ್ತಾಯಿತು. ವರನಿಗೆ ಐವತ್ತು ವರುಷ; ಈಗಾಗಲೇ ಇಬ್ಬರು ಹೆಂಡರು ಅವನ ಕೈಯಲ್ಲಿ ಉರಿದು ಉರಿಗೆ ಈಡಾಗಿದ್ದರು. ಮೂರನೆಯ ಸರತಿ ಚೆಲುವೆಯದಾಗಿತ್ತು. ಇದರಲ್ಲಿ ಯಜ್ಞೇಶ್ವರ ದೀಕ್ಷಿತರೇ ಕಮೀಶನ್ ಏಜೆಂಟರು. ಆ ಮುದಿಮಂಗನಿಗೆ ಮಗಳನ್ನು ಅಪ್ಪನು ಎಷ್ಟು ಬೆಲೆಗೆ ಮಾರಿದನೋ ಏನೋ ಅವನಿಗೇ ಗೊತ್ತು. ನಿಶ್ಚಯವಾಗಿ ಎಂಟೇ ದಿವಸಗಳಲ್ಲಿ ಲಗ್ನಮಾಡುವದನ್ನು ಗೊತ್ತುಮಾಡಿದ್ದರು. ಈ ಮಾತು ಚೆಲುವೆಗೆ ತಿಳಿದಾಗಿನಿಂದ ಅವಳಿಗೆ ನಿದ್ದೆ ಇಲ್ಲ; ನೀರಡಿಕೆ ಇಲ್ಲ; ಊಟವಿಲ್ಲ. ಯಾವಾಗಲೂ ತನ್ನ ಕೋಣೆಯಲ್ಲಿ ಹೋಗಿ ಮಲಗಿ ಕೊಂಡಿರುವಳು. ಅವಳು ಯಾರ ಸಂಗಡಲೂ ವಿಶೇಷವಾಗಿ ಮಾತಾಡುತ್ತಿರಲಿಲ್ಲ ಕೂಡ.

* * * * * *

ಲಗ್ನವಾಗಲಿಕ್ಕೆ ನಾಲ್ಕೇ ದಿನಗಳು ಉಳಿದವು. ನಾನು ಅಕ್ಕನನ್ನು ಚಹಾ ಕುಡಿಯಲಿಕ್ಕೆಂದು ಕರೆಯಲಿಕ್ಕೆ ಹೋದಾಗ ಅವಳು ಏನೋ ಬರೆಯುತ್ತಿದ್ದಳು.

"ಅಕ್ಕಾ ಚಹಾಕ ಬಾ." ಎಂದೆ.

"ಬರತೇನಿ, ಆದರ ನನ್ನದೊಂದು ಕೆಲಸಾ ಮಾಡತೀಯಾ?" ಅಕ್ಕ ಕೇಳಿದಳು.

"ಹೂ"

ಅವಳು ಒಂದು ಕವ್ಹರು ನನ್ನ ಕೈಯಲ್ಲಿ ಕೊಟ್ಟು "ಇದನ್ನ ಟಪಾಲ ಡಬ್ಬಿಯಲ್ಲಿ ಹಾಕಿಬಾ. ಮತ್ತ ಯಾರ ಮುಂದೂ ಹೇಳಬ್ಯಾಡ" ಎಂದಳು.

ನನಗೆ ಗೊತ್ತಾಯಿತು ಅದು ಯಾರಿಗೆ ಎಂಬುದು. "ಈ ಪತ್ರ ಮನೋಗ ಹೌದಲ್ಲೊ" ನಾನು ನಗುತ್ತ ಕೇಳಿದೆ. "ಯಾರಿಗ್ಯಾರ ಯಾಕ ಇರವಲ್ಲ

ದ್ದಾಕ, ಸುಮ್ಮನ ಹಾಕಿ ಬಾ ” ಅವಳು ಸ್ವಲ್ಪ ಸಿಟ್ಟಿನಿಂದ ಹೇಳಿದಳು. ನಾನು ಹೆಚ್ಚಿಗೆ ಮಾತಾಡದೆ ಅದನ್ನು ತೆಗೆದುಕೊಂಡು ಚಾವಡಿಗೆ ಹೋದೆ.

*  *  *  *  *  *

ಇಂದೇ ಲಗ್ನದ ದಿವಸ. ಎಲ್ಲಿ ನೋಡಿದಲ್ಲಿ ಆನಂದ. ಎಲ್ಲರೂ ಲಗ್ನದ ಗಡಿಬಿಡಿಯಲ್ಲಿ ತೊಡಗಿದ್ದರು. ಬಾಗಿಲದಲ್ಲಿ ದೊಡ್ಡ ಹಂದರ. ಬಜಂತ್ರಿಯವರು ನಾಹೆಚ್ಚು ನೀಹೆಚ್ಚು ಎಂದು ಊದುವವರಲ್ಲಿ ತಮ್ಮ ಕೌಶಲ್ಯವನ್ನು ತೋರಿಸುತ್ತಿದ್ದರು. ಹೆಂಗಸರು ಹೊಸ ಹೊಸ ಸೀರೆಕುಪ್ಪಸಗಳನ್ನು ತೊಟ್ಟುಕೊಂಡು ಬಹಳ ಕೆಲಸವಿದ್ದವರಂತೆ ಅತ್ತಿಂದ ಇತ್ತ ಇತ್ತಿಂದ ಅತ್ತ ಅಲೆದಾಡುತ್ತಿದ್ದರು. ಕೆಲವು ತರುಣ ಮಂಡಳಿಯು ಇಸ್ಪೇಟು ಆಡುತ್ತ, ಸಿಗರೇಟು ಸೇದುತ್ತ, ನಗುತ್ತ ಕೆಲೆಯುತ್ತ, ಕುಳಿತಿದ್ದಿತು. ಸಣ್ಣ ಹುಡುಗರು ಕೈಯಲ್ಲಿ ಉಂಡಿ, ಕರಜಿಕಾಯಿ, ಚಕ್ಕಲಿ ಹಿಡಿದುಕೊಂಡು ತಿನ್ನುತ್ತ ಆನಂದದಿಂದ ತಿರುಗಾಡುತ್ತಿದ್ದರು. ವೈದಿಕ ಬ್ರಾಹ್ಮಣರ ಆನಂದಕ್ಕಂತೂ ನೆಲೆಯೇ ಇದ್ದಿಲ್ಲ. ಒಟ್ಟಿನಮೇಲೆ ಎಲ್ಲಿ ನೋಡಿದಲ್ಲಿ ಆನಂದವು ಮಾತ್ರ ತುಂಬಿ ತುಳುಕುತ್ತಿತ್ತು.

ಆದರೆ, ಚೆಲುವೆಯ ಮೋರೆ ಮಾತ್ರ ನಿಸ್ತೇಜವಾಗಿತ್ತು. ಅವಳಿಗೆ ಈ ಎಲ್ಲ ಆನಂದಗಳು ವಿಪರೀತವಾಗಿ ಕಾಣುತ್ತಿದ್ದವು. ಅವಳ ಮೋರೆಯ ಮೇಲೆ ಹುಚ್ಚುಕಳೆ ಸುರಿಯುತ್ತಿತ್ತು. ಕಣ್ಣುಗಳು ನಿದ್ದೆಗೆಟ್ಟವರ ಕಣ್ಣುಗಳಂತೆ ಕಾಣುತ್ತಿದ್ದವು. ಒಟ್ಟಾರೆ ಅವಳನ್ನು ಸೂಕ್ಷ್ಮವಾಗಿ ನೋಡಿದವರಿಗೆ ಅವಳು ಯಾವದೋ ಯಾತನೆಯಲ್ಲಿದ್ದಂತೆ ತೋರುತ್ತಿತ್ತು.

ಅಕ್ಕಿಕಾಳು ಬೀಳಲಿಕ್ಕೆ ಇನ್ನರ್ಧ ಗಂಟೆ ಅವಕಾಶವಿದೆ. ಎಲ್ಲರೂ ಗಡಿಬಿಡಿಯಲ್ಲಿದ್ದಾರೆ. ಮುದಿ ಅಳಿಯದೇವರು ಮಣೆಯಮೇಲೆ ಮಂಡಿಸಿದ್ದರು. ನಾನು ಅವನನ್ನೇ ನೋಡುತ್ತ ನಿಂತಿದ್ದೆ. ಕ್ಷಣಾರ್ಧದಲ್ಲಿ ನನಗೆ ಮನೂನ ನೆನಪಾಯಿತು. ಅವನಿಗೂ ಇವನಿಗೂ ಸರಿಹಚ್ಚಿ ನೋಡುವದಾಯಿತು. ನವ ತಾರುಣ್ಯದ ಅವನ ಎಳೆಕಳೆಯ ಮುಖವೆತ್ತ ! ಮುದಿಕಳೆಯ ಈ ಮುದುಕನ ಮೋರೆ ಎತ್ತ ! ಒಂದರೆನಿಮಿಷ ನನಗೂ ಕೆಡಕೆನಿಸಿತು. ಅದೇಕೊ ನನಗೆ ಗೊತ್ತಿರಲಿಲ್ಲ. ಆಗ ಪುರೋಹಿತರು ಕನ್ಯೆಯನ್ನು ಕರೆತರುವದಕ್ಕಾಗಿ ಕೂಗಿದರು. ನಾನು ಓಡುತ್ತ ಕೋಣೆಯೊಳಗೆ ಹೋದೆ. “ ಅಕ್ಕಾ ” ಎಂದೆ. ಆದರೆ ಅಲ್ಲಿ ಅಕ್ಕ ಇದ್ದರಷ್ಟೇ “ ಓ ” ಎನ್ನುವದು ? ಅಡಿಗೆಯ ಮನೆಯಲ್ಲಿ ಹುಡು

ಕಿದೆ. ಅಲ್ಲಿಯೂ ಇರಲಿಲ್ಲ. ಅಪ್ಪಸಿಗೆ ಹೇಳಿದೆ—ಪುರೋಹಿತರು ಕನ್ಯೆಯನ್ನು ಕರೆತರಲಿಕ್ಕೆ ಹೇಳಿದರೆಂದು. ಅವರೂ ಹುಡುಕಹತ್ತಿದರು. ನಾನು ಹಿತ್ತಲಲ್ಲಿ ಮಲ್ಲಿಗೆಯ ಅಂಟಿನ ಕೆಳಗೆ ನೋಡಿದೆ, ಮನೂನ ಮನೆಯಲ್ಲಿ ವಿಚಾರಿಸಿದೆ. ಎಲ್ಲ ಕಡೆಗೆ ಹುಡುಕುವವಾಯಿತು. ಕ್ಷಣಾರ್ಧದ ಪೂರ್ವದಲ್ಲಿ ಆನಂದದಲ್ಲಿ ತೇಲಾಡುವ ಮನೆ ಈಗ ಚಿಂತೆಯ ಸಾಗರದಲ್ಲಿ ಮುಣುಗಿತು. ಅವ್ವನಂತೂ ಗಾಬರಿಯಾಗಿದ್ದಳು. ಪುರೋಹಿತರು ಗಡಿಬಿಡಿ ನಡೆಸಿದ್ದರು. ನಾನು ಹುಚ್ಚಿಯಂತೆ ದಂಗು ಬಡೆದು ನಿಂತಿದ್ದೆ. ನನಗೆ ಹೊಳೆಯಿತು: ಇನ್ನೊಂದು ಕಡೆಗೆ ಹುಡುಕಬೇಕೆಂದು. ಶಾಲ್ಮಲೆಯ ದಂಡೆಯ ಮೇಲೆ ಹೋಗಿರಬೇಕೆಂದು ನನಗೆ ಎನಿಸಿತು.

ಮುಚ್ಚಂಜೆಯಾಗಿತ್ತು. ದನಕರುಗಳು ಹಿಂಡುಹಿಂಡಾಗಿ ಮನೆಯ ಕಡೆಗೆ ನಡೆದಿದ್ದವು. ನಾನು ಆ ದನಗಳ ಗುಂಪಿನೊಳಗಿಂದ ಓಡುತ್ತ ನಡೆದೆ. ನನಗೆ ಆಗ ಹೆದರಿಕೆ ಇದ್ದಿಲ್ಲ. ನಾನು ಹಾಗೇ ಒಂದೇಸವನೆ ಓಡುತ್ತಿದ್ದೆ. ನದಿಯು ಇನ್ನು ಅರ್ಧ ಫರ್ಲಾಂಗು ಇರಬಹುದು. "ಧಡಂ" ಎಂಬ ಸಪ್ಪಳವು ಕೇಳಿಸಿತು. ನನ್ನ ಕಾಲೇ ಹೋದವು. ಅಲ್ಲಿಯೇ ನಾನು ಕುಳಿತುಬಿಟ್ಟೆ. ಮರುಕ್ಷಣದಲ್ಲಿ ಯಾರೋ "ಚಲುವೀ" ಎಂದು ಆರ್ತಧ್ವನಿಯಿಂದ ಒದರಿಕೊಂಡಂತೆ ಕೇಳಿತು. ಮತ್ತೆರಡು ನಿಮಿಷಗಳಲ್ಲಿ ಮತ್ತೆ "ಧಡಂ" ಎಂಬ ಸಪ್ಪಳವು ಕೇಳಿತು. ನನ್ನ ಕಣ್ಣು ಮುಚ್ಚಿದವು. ಯಾರೋ ನನ್ನನ್ನು "ಲಿಲೀ" ಎಂದು ಕೂಗಿದಂತಾಯಿತು. ನಾನು "ಮನೂ" ಎನ್ನುತ್ತ ಕಣ್ಣು ತೆರೆದೆ. "ಮನೂ ಅಲ್ಲ, ನಾನು" ಅಂದ ಅಪ್ಪ ನದಿಯ ಕಡೆಗೆ ಬಟ್ಟುಮಾಡಿ ತೋರಿಸಿದೆ. ಅವರು ಅತ್ತ ಕಡೆಗೆ ನಡೆದರು. ಎಲ್ಲರೂ ನದಿಯ ದಂಡೆಗೆ ಬಂದೆವು. ನನಗೂ ತುಸು ಬಾಯಿ ಬಂತು. ನೀರು ಅಲ್ಲೋಲಕಲ್ಲೋಲವಾಗಿದ್ದವು.

"ನಾನು ಅಕ್ಕನ್ನ ನೋಡಬೇಕು ಅಂತ ಹೊರಟಿದ್ದೆ. ನದಿ ಇನ್ನೂ ತುಸು ದೂರ ಇತ್ತು. "ಧಡಂ" ಅಂತ ಯಾರೋ ಹಾರಿಕೊಂಡ್ಹಂಗ ಆತು. ನನಗ ಮುಂದ ಹೋಗಲಿಕ್ಕೆ ಆಗಲಿಲ್ಲ; ಅಲ್ಲೇ ಕುಳಿತು ಬಿಟ್ಟೆ. ಯಾರೋ 'ಚಲುವೀ' ಅಂತ ಒದರಿದರು. ಅದು ಯಾರ ಧನಿ ಅಂಬೋದು ನನಗೆ ಗೊತ್ತಾಗಲಿಲ್ಲ. ಅಲ್ಲಿಂದ ಮತ್ತ 'ಧಡಂ' ಅಂತ ಸಪ್ಪಳಾತು. ಮುಂದ ಏನಾತೋ ನನಗೆ ಗೊತ್ತಿಲ್ಲ" ಅಂತ ಹೇಳಿದೆ.

ಎಲ್ಲರೂ ಗಾಬರಿಯಾದರು. "ಸರ್‍ಯೊ ಮರ್‍ಯೊ" ಅಳುವದಕ್ಕೆ ಸುರುವಾಯಿತು. ಊರಲ್ಲಿಯ ಜನರು ಗುಂಪುಗುಂಪಾಗಿ ಕೂಡಿದರು. ಅಪ್ಪ ಈಸು ಬಲ್ಲವರನ್ನು ಕರೆಸಿದ. ಅವರು ಈಸುಬಿದ್ದು ಹುಡುಕಿದರು. ಏನೂ ಸಿಗಲಿಲ್ಲ. ನಾನು ಸುಳ್ಳು ಹೇಳಿರಬೇಕೆಂದು ಎಲ್ಲರ ಕಲ್ಪನೆಯಾಯಿತು. ಆದರೂ ಕಡೆಯ ಪ್ರಯತ್ನವೆಂದು ಈಸುಗಾರರು ಮತ್ತೊಮ್ಮೆ ಈಸುಬಿದ್ದರು. ಈ ಸಾರೆ ಅವರ ಪ್ರಯತ್ನವು ಯಶಸ್ವಿಯಾಯಿತು. ಎರಡು ಹೆಣಗಳನ್ನು ನೀರಿನಿಂದ ಹೊರ ತೆಗೆದು ದಂಡೆಯಮೇಲೆ ಹಾಕಿದರು.

ಒಬ್ಬಳು ಚಲುವೆ; ಇನ್ನೊಬ್ಬ ಮನೂ !

**ಸೌ. ಕುಸುಮ ದೇಶಪಾಂಡೆ**

**ಹುಬ್ಬಳ್ಳಿ**

# ಅಂದು : ಇಂದು

ಶಾಲೆಬಿಡುವ ಸಮಯವಾಯಿತು. ಹುಡುಗಿಯರೆಲ್ಲ ಶಾಲೆಯಿಂದ ಹೊರಬಿದ್ದರು. ಅವರೆಲ್ಲ ಬೇಗಬೇಗನೆ ಹೆಜ್ಜೆ ಹಾಕುತ್ತ ತಮ್ಮ ಮನೆಯ ಹಾದಿಯನ್ನು ಹಿಡಿದರು. ರಸ್ತೆಯ ಒಂದು ಪಕ್ಕದಲ್ಲಿ ನಳಿನಿಯು ಬೇಸರದಿಂದ ನೆಲವನ್ನು ನೋಡುತ್ತಾ ಮೆಲ್ಲನೆ ನಡೆಯುತ್ತಿದ್ದಳು. ನಡೆಯುತ್ತಿದ್ದಂತ ಒಂದು ಸಣ್ಣ ಹೊಡೆತದ ಪೆಟ್ಟು ಅವಳನ್ನು ಎಚ್ಚರಿಸಿತು. ಕತ್ತೆತ್ತಿ ನೋಡಲು ಅವಳ ಪ್ರೀತಿಯ ಗೆಳತಿ ಶಾಲಿನಿಯು ನಗುತ್ತಾ ಅವಳ ಪಕ್ಕದಲ್ಲಿ ನಿಂತಿದ್ದಳು.

"ನಳಿನಿ ಯಾತಕ್ಕಾಗಿ ಇಷ್ಟು ಚಿಂತೆ ಮಾಡುತ್ತಿದ್ದೀಯೆ ? ಅಲ್ಲ, ಇವತ್ತಿನ ಪೇಪರಲ್ಲಿ ಹ್ಯಾಗೆ ಬರೆದಿದ್ದೀ ? ನಳಿನೀ, ನನಗೆ ಬಹಳ ಕಷ್ಟವಾಯಿತು ನೋಡು." ಎಂದು ಶಾಲಿನಿಯು ಅಂದಳು.

"ಪೇಪರೇನು ಅಷ್ಟು ಕಷ್ಟ ಇರಲಿಲ್ಲ. ಸುಲಭವಾಗಿಯೇ ಇತ್ತು. ಆದುದರಿಂದ ನಾನು ಸರಿಯಾಗಿ ಬರೆದಿದ್ದೇನೆ" ಎಂದಳು ನಳಿನಾ.

"ಹಾಗಾದರೆ ಯಾಕಿಷ್ಟು ಬೇಸರ ? ನಾನು ನೆನಸಿದೆ: ಪೇಪರು ಕಷ್ಟವಿದ್ದುದರಿಂದ ಬೇಸರದಲ್ಲಿದ್ದೀ ಎಂದು."

"ಅಲ್ಲ ಶಾಲೂ, ನನಗೆ ಇಲ್ಲಿ ಎಷ್ಟು ಉಲ್ಲಾಸವಿದ್ದರೂ ಮನೆಗೆ ಹೋಯಿತೆಂದರೆ ಸಂತೋಷವೆಲ್ಲಾ ಇಲ್ಲವಾಗುತ್ತೆ. ಶಾಲೂ, ನಿನ್ನ ಮನೆ ಸಮೀಪ ಬಂತು. ನನಗಾದರೆ ದೂರವಿದೆ ಮನೆ."

"ಹೌದು, ನಿನ್ನ ಮನೆಯೇನೋ ಬಹಳ ದೂರವೆಂತ ಕಾಣಿಸುತ್ತದೆ ! ನಾಲ್ಕು ಹೆಜ್ಜೆ ಇಟ್ಟರೆ ಸರಿ." ಎಂದು ಶಾಲಿನಿ ತಾನು ಹೋಗುವೆನೆಂದು ಹೇಳಿ ತನ್ನ ಮನೆಯೊಳಗೆ ಹೋದಳು.

ನಳಿನಿಯು ಮುಂಚಿನಂತೆ ತನ್ನ ಭಾರವಾದ ಹೆಜ್ಜೆಗಳನ್ನು ಹಾಕುತ್ತ ಹೇಗೊ ಮನೆಗೆ ಬಂದು ಮುಟ್ಟಿದಳು. ತನ್ನ ಪುಸ್ತಕಗಳನ್ನೆಲ್ಲ ಮೇಜಿನ ಮೇಲಿಟ್ಟು ನೇರಾಗಿ ಬಚ್ಚಲಮನೆಗೆ ಹೋಗಿ ಕಾಲಿಗೆ ನೀರು ಹಾಕಿಕೊಳ್ಳುತ್ತಿದ್ದಳು.

ಅಡಿಗೆ ಕೋಣೆಯಿಂದ ಅವಳ ಚಿಕ್ಕಮ್ಮ "ಏನೇ, ಇವತ್ತು ಶಾಲೆಗೆ ಹೋಗಬೇಡಾ ಅಂದ್ರೂ ಕೇಳದೆ ಹೋಗಿದ್ದೆಯಲ್ಲವೆ ? ನಿಲ್ಲು, ಅವರು ಬರಲಿ. ನಿನಗೆ ಹಾಗೇ ಹೇಳುತ್ತೇನೆ" ಎನ್ನುತ್ತ ಸಿಟ್ಟಿನ ರಭಸವಲ್ಲಿ ಎದುರಿಗಿದ್ದ ಮಣೆಯನ್ನು ನೋಡದೆ ಎಡವಿದರು. ಉಮಾಬಾಯಿಯವರು ಈಗ ತುಂಬಾ ರೇಗಿ ಹೋದರು.

ನಳಿನಿ "ಅಲ್ಲ ಚಿಕ್ಕಮ್ಮ, ನಮಗೆ ಇವೊತ್ತು ಪರೀಕ್ಷೆ ಇದ್ದುದರಿಂದ ನಾನು ಶಾಲೆಗೆ ಹೋದೆ. ಇಲ್ಲವಾದರೆ ಹೋಗುತ್ತಿರಲಿಲ್ಲ." ಎನ್ನುತ್ತ ಅಡಿಗೆ ಮನೆಗೆ ಬಂದು "ಚಿಕ್ಕಮ್ಮ ಕಾಫಿ ಕೊಡೇ" ಎಂದು ಅಲ್ಲೇ ಇದ್ದ ಮಣೆಯ ಮೇಲೆ ಕುಳಿತಳು.

"ಹೌದೌದು, ಪರೀಕ್ಷೆಯ ನೆವ. ಮನೆಯಲ್ಲಿ ಕೆಲಸ ಮಾಡಲು ಮನಸ್ಸಿಲ್ಲ. ಏನು ಬಿ. ಎ. ಪಾಸಾಗಿ ಕೆಲಸ ಹುಡುಕಿಕೊಂಡು ಹೋಗಲಿಕ್ಕಿದೆಯೊ ?" ಎಂದು ಪಲ್ಯಕ್ಕೆ ಅಲಸಂದಿಯನ್ನು ಹೆಚ್ಚತೊಡಗಿದರು 'ಚಿಕ್ಕಮ್ಮ'.

"ಕಾಫಿ ಕೊಡೇ ಚಿಕ್ಕಮ್ಮ."

"ಅಲ್ಲೇ ಇದೆ ತೆಕೋ, ನಾನೇನು ಕೊಡೋದು. ನಾನು ಹೇಳಿದ್ರೆ ನಿನಗೆ ಕೇಳಿಸುತ್ತದೆಯೇ ? ಎಲ್ಲಾ ನಿನ್ನ ಕುಶಿ. ನನ್ನನ್ನು ಯಾರು ಕೇಳೋರು ?"

ತನ್ನ ಕೆಲಸವನ್ನೇ ಮುಂದುವರಿಸಿದರು ಉಮಾಬಾಯರು. ನಳಿನಿಯು ಅಲ್ಲಿಂದೆದ್ದು ತಲೆ ಕೆಳಗೆ ಹಾಕಿಕೊಂಡು ಅಲ್ಲೇ ಕೆಳಗಿಟ್ಟಿದ ತನ್ನನ್ನೇ ಕಾದಿರುವ ತಣ್ಣಗಾದ ಕಾಫಿಯನ್ನು ಕುಡಿದು ತನ್ನ ರೂಮಿಗೆ ಹೋದಳು. ಅಲ್ಲೂ ಅವಳ ಮನಸ್ಸಿಗೆ ನೆಮ್ಮದಿಯಾಗಲಿಲ್ಲ. ಅಲ್ಲಿ ಮೇಜಿನಮೇಲಿದ್ದ ಒಂದು ಪುಸ್ತಕವನ್ನು ನೆವಕ್ಕಾಗಿ ಹಿಡಿದುಕೊಂಡು ಹೂದೋಟಕ್ಕೆ ಹೋದಳು. ಬೇಲಿಯ ಹತ್ತಿರವಿದ್ದ ಮಾವಿನ ಮರದ ಅಡಿಯಲ್ಲಿ ಕುಳಿತಳು. ಒಂದೊಂದೇ ಹಾಳೆಯನ್ನು ತಿರುವಿಹಾಕತೊಡಗಿದಳು. ಮನಸ್ಸಿಗೆ ಸಮಾಧಾನವೆನಿಸಲಿಲ್ಲ. ಅವಳ ಕಣ್ಣಿಗೆಲ್ಲ ಅವಳ ತಾಯಿಯ ಚಿತ್ರವೇ ಕಾಣುತ್ತಿತ್ತು. ಅದರಂತೆಯೇ ಹಿಂದಿನ ಕೆಲವು ದಿನಗಳು ನೆನಪಿಗೆ ಬಂದವು.

—ಅಂದು ತಾನು ಶಾಲೆಯಲ್ಲಿ ಆಡಿ ಮನೆಗೆ ಮರಳಲು ತುಂಬಾ ಸಮಯವಾಯಿತು. ಮನೆಗೆ ಬರಲು ಮನೆಯವರೆಲ್ಲ ಅಡ್ಡಾಡಲು ಹೊರಟು ತನಗಾಗಿ

ಕಾದಿದ್ದರು. ತಾನು ಹೋಗಿ ' ಅವ್ವಾ ಕಾಫಿ ಕೊಡೆ ' ಎಂದೊಡನೆ ನಗು ಮುಖದಿಂದ ತಾಯಿ ಬಂದು ' ಮಗೂ, ಯಾಕವ್ವಾ ಇಷ್ಟು ಹೊತ್ತು ಮಾಡಿದೆ ? ' ಎಂದು ಬೆನ್ನಮೇಲೆ ಕೈಯಾಡಿಸಿ ಬೆಚ್ಚಗಿದ್ದ ಕಾಫಿಯನ್ನು ಕೊಟ್ಟರು.

ಒಂದು ದಿನ ತಾನು ಶಾಲೆಗೆ ಹೋಗುವುದಿಲ್ಲವೆಂದಾಗ ' ನಳಿನಾ, ನೀನು ಶಾಲೆಗೆ ಹೋಗಬೇಕವ್ವಾ. ಶಾಲೆಗೆ ಹೋಗಿ ಬಿ. ಎ. ಪಾಸಾಗ ಬೇಕು ' ಎಂದರು.

ತಾಯಿಯ ಆ ಮಾತೂ ಇಂದು ಚಿಕ್ಕಮ್ಮನ ಈ ಮಾತೂ ನಳಿನಿಯ ಮನಸ್ಸನ್ನು ತಳಮಳಗೊಳಿಸಿತು. ಕಣ್ಣಿಂದ ಎರಡು ಹನಿ ನೀರು ಕೆಳಕ್ಕೆ ಬಿತ್ತು. ಕತ್ತಲಾಗುತ್ತ ಬಂತು. ಅಪ್ಪ ಬರುವ ಸಮಯವಾಯಿತೆಂದು ನಳಿನಿಯು ಹೂದೋಟವನ್ನು ಬಿಟ್ಟು ಮನೆಯ ಹತ್ತಿರಕ್ಕೆ ಬಂದಳು. ಮೆಟ್ಟಲು ಹತ್ತು ವಾಗ ಅವಳ ತಂದೆಯವರ ಧ್ವನಿಯು ಕೇಳಬಂತು.

" ಅಲ್ಲ ಉಮಾ, ನಿನಗೆ ಆ ಹುಡುಗಿಯನ್ನ ಕಂಡರೆ ಆಗೋದಿಲ್ಲ. ಪಾಪ, ತಾಯಿಯಿಲ್ಲದ ಹುಡುಗಿ. ಇಲ್ಲದ ಕಷ್ಟ ಕೊಡಬಾರದು ನೋಡು. ಅವಳಿಗೆ ಸ್ಕೂಲಿಗೆ ಹೋಗಲು ಮನಸ್ಸಿದೆ; ಹೋಗಲಿ. ಇನ್ನೂ ಒಂದೆರಡು ವರ್ಷಗಳು ಕಳೆದಮೇಲೆ ಮದುವೆ ಮಾಡಿದರಾಯಿತು. ಇಷ್ಟೇಕೆ ಅವಸರ ? "

" ಹೌದು. ನನಗೇನು ಹೊಟ್ಟೆಕಿಚ್ಚು ಅವಳ ಮೇಲೆ ? ಅಲ್ಲ, ಇನ್ನೂ ಸಣ್ಣ ಹುಡುಗಿಯೆಂದು ಕಾಣಿಸುತ್ತದೆ. ಕೈಗೆ ಬಂದ ತುತ್ತು ಬಾಯಿಗೆ ಬರದೆ ಹೋದೀತು ಜೋಕೆ ! ವರ ಸ್ವಲ್ಪ ಬಡವನೆಂದು ಬಿಟ್ಟುಬಿಡೋದೆ ? ಇವ ಳೇನು ಸಣ್ಣ ಹುಡುಗಿಯೋ ? ........ "

ಉಮಾಬಾಯಿಯವರು ತೊಟ್ಟಿಲಲ್ಲಿದ್ದ ತಮ್ಮ ಮಗು ಕೂಗಿದುದರಿಂದ ಅಲ್ಲಿಗೆ ಹೋದರು. ನಳಿನಿಗೆ ಇದೆಲ್ಲವನ್ನು ಕೇಳಿ ಮನಸ್ಸಿಗೆ ಬಹಳ ಬೇಸರ ವೆನಿಸಿತು. ಹಾಗೇ ತನ್ನ ರೂಮಿಗೆ ಹೋದಳು.

ಕೃಷ್ಣರಾಯರು ತಮ್ಮ ಮಗಳನ್ನು ಕಾಣದುದರಿಂದ ' ನಳಿನೀ ' ಎಂದು ಕರೆದರು. ನಳಿನಿಗೆ ಪ್ರೀತಿಯ ಕರೆಯು ಬಂದು ಮುಟ್ಟಿತು. ಹಾಗೆ ಅಡಿಗೆ ಕೋಣೆಯಲ್ಲಿದ್ದ ತಂದೆಯ ಹತ್ತಿರಕ್ಕೆ ಬಂದಳು.

" ಬಾ ಮಗು, ಇಷ್ಟು ಹೊತ್ತು ಎಲ್ಲಿದ್ದೆ ? "

" ಇಲ್ಲೇ ಹೂದೋಟವಲ್ಲೇ ಇದ್ದೆ. ಒಂದು ಕಾದಂಬರಿ ಓದುತ್ತಿದ್ದೆ. "

" ಇವೊತ್ತು ಕಡೆಯ ಪರೀಕ್ಷೆಯಲ್ಲವೇ ? ಹೇಗೆ ಬರೆದಿದ್ದೀ ? " ಎಂದು ಕೃಷ್ಣರಾಯರು ಮಗಳನ್ನು ತಮ್ಮ ಹತ್ತಿರ ಕುಳ್ಳಿರಿಸಿಕೊಂಡರು. ಪ್ರೀತಿಯಿಂದ ತಲೆಯಮೇಲೆ ಕೈಯಾಡಿಸತೊಡಗಿದರು.

" ಪೇಪರು ಸುಲಭವಾಗಿದ್ದುದರಿಂದ ನಾನು ಸರಿಯಾಗಿ ಬರೆದಿದ್ದೇನೆ. ಇನ್ನೂ ನಾಲ್ಕು ಐದು ದಿವಸ ಶಾಲೆಗೆ ಹೋಗಬೇಕಂತೆ. " ಎಂದು ನಳಿನಿ ತನ್ನ ತಂದೆಯ ಮುಖವನ್ನು ನೋಡಿದಳು.

ರಾಯರಿಗೆ ಮಗಳ ಕಣ್ಣಂಚಿನಲ್ಲಿ ನಿಂತಿದ್ದ ನೀರಿನ ಹನಿಯು ಕಂಡು ಬಂತು. ಇದರಿಂದ ಅವರ ಮನಸ್ಸು ಕರಗಿತು.

" ನಳಿನೀ, ...ಹೋಗಿ ಮೋರೆಯನ್ನು ತೊಳೆದುಕೊಂಡು ಊಟಕ್ಕೆ ಬಾ " ಎಂದರು. ಮನಸ್ಸಿನಲ್ಲಿ ಮಗಳಿಗೆ ಬೇಗನೆ ಮದುವೆಮಾಡಿ ಬಿಡಬೇಕೆಂದು ಸಂಕಲ್ಪಿಸಿದರು.

* * * * * *

........ನಳಿನಿಯು ಹೊಳೆಯ ದಂಡೆಯಮೇಲೆ ಅಡ್ಡಾಡುತ್ತಿದ್ದಳು. ಅಲ್ಲಿ ಒಂದು ಮರದ ಕೆಳಗೆ ಒಬ್ಬ ಸನ್ಯಾಸಿ ಕೂತಿದ್ದ. ಅವಳು ಅವನ ಸಮೀಪಕ್ಕೆ ಹೋದಳು. ನಳಿನಿಯು ಸನ್ಯಾಸಿಯನ್ನು ನೋಡುತ್ತ ಇದ್ದಂತೆ ಅವನು ಕಣ್ಣು ತೆರೆದು ಅವಳನ್ನು ನೋಡಿದನು. ಅಲ್ಲಿಂದ ಅವನೆದ್ದು ನಳಿನಿಯನ್ನು ಕಣ್ಣು ಸನ್ನೆಯಿಂದ ಕರೆದನು. ನಳಿನಿಯು ಅವನ ಹಿಂದೆಯೇ ನಡೆಯುತ್ತ ಹೋದಳು. ಎದುರಿಗೊಂದು ಗುಹೆ. ಅದರ ಒಳಗೆ ಕಗ್ಗತ್ತಲು. ಇಬ್ಬರೂ ಒಳಕ್ಕೆ ನಡೆದರು. ಅಲ್ಲಿ ಎದುರಿಗೆ ಒಂದು ಸ್ತ್ರೀ ವ್ಯಕ್ತಿ ಕುಳಿತಿತ್ತು. ನಳಿನಿಗೆ ಎಲ್ಲೋ ನೋಡಿದಂತೆನಿಸಿ ದಿಟ್ಟಿಸಿ ಆ ಸ್ತ್ರೀಯನ್ನು ನೋಡುತ್ತಿದ್ದವಳು ಒಮ್ಮೆಲೆ 'ಅವ್ವಾ' ಎಂದು ಕಿರುಚಿಕೊಂಡಳು.........

ಫಕ್ಕನೆ ಎಚ್ಚತ್ತು ನೋಡಲು ನಳಿನಿ ತನ್ನ ಹಾಸಿಗೆಯ ಮೇಲಿದ್ದಳು. ತನಗಾದ ಕನಸನ್ನು ತಿರುಗಿ ನೆನಸಿಕೊಂಡಳು. ಹೊರಗೆ ಬಹಳ ಕತ್ತಲೆ ಇದ್ದುದರಿಂದ ಹಾಸಿಗೆಯ ಮೇಲೆ ಒರಗಿದಳು. ನಿದ್ದೆ ಹತ್ತಲೊಲ್ಲದು. ಎದ್ದು ಕೂತಳು. ತಿರುಗಿ ಮಲಗಿದಳು. ಹಾಗೆ ಜೊಂಪು ಹತ್ತಿತು, ................

ಬೆಳಗಾಯಿತು. ಹಕ್ಕಿಗಳು ತಮ್ಮ ಚಿಲಿಪಿಲಿ ಗಾನದಿಂದ ನಳಿನಿಯನ್ನು ಎಚ್ಚರಿಸಿದವು. ಅವಳು ತನ್ನ ಕೆಲಸವನ್ನೆಲ್ಲ ಪೂರಯಿಸಿ ಒಂಬತ್ತು ಗಂಟೆಗೆ ಸರಿಯಾಗಿ ಶಾಲೆಗೆ ಹೋಗಲು ಅಣಿಯಾದಳು. ಅಷ್ಟು ಹೊತ್ತಿಗೆ ಉಮಾ ಬಾಯಿಯವರು ಕೋಣೆಯೊಳಗಿಂದ ಬಂದು ಎಂದರು.

"ನಳಿನೀ, ಇವೊತ್ತಿನಿಂದ ನೀನು ಶಾಲೆಗೆ ಹೋಗಬೇಡ."

"ಯಾಕೆ ಚಿಕ್ಕಮ್ಮ?"

"ಅದನ್ನೆಲ್ಲ ಕಟ್ಟಿಕೊಂಡು ನಿನಗೇನು? ಹೇಳಿದ ಹಾಗೆ ಕೇಳುವುದು" ಎಂದು ಉಮಾಬಾಯರು ಸರಸರನೇ ಅಡಿಗೆಯ ಕೋಣೆಯೊಳಗೆ ಹೋದರು.

ನಳಿನಿಯು ತೆಪ್ಪಗೆ ಕಲ್ಲಿನಂತೆ ನಿಂತಿದ್ದಳು.

* * * * * *

ಇಂದು ಕೃಷ್ಣರಾಯರ ಮನೆಯಲ್ಲಿ ಗದ್ದಲವೇ ಗದ್ದಲ. ಒಂದು ಕಡೆ ಯಿಂದ ಮುತ್ತಯ್ದೆಯರ ಗುಂಪೂ ಮತ್ತೊಂದು ಕಡೆಯಿಂದ ಗಂಡಸರ ಗುಂಪೂ ಮಧ್ಯೆ ಮಧ್ಯೆ ಹುಡುಗರೂ ಓಡಾಡುತ್ತಿದ್ದುದರಿಂದ ಮದುವೆಯ ಚಪ್ಪರದಲ್ಲೆಲ್ಲಾ ಜನರು ಕಿಕ್ಕಿರಿದಂತಾಗಿತ್ತು. ನಳಿನಿಗೆ ಒಪ್ಪುವಂಥ ವರನನ್ನೇ ರಾಯರು ನಿಶ್ಚಯ ಮಾಡಿದ್ದಾರೆ. ಈಹೊತ್ತು ರಾಯರು ಮೈಯಲ್ಲಿ ಪರವೆ ಯಿಲ್ಲದೆ ಓಡಾಡುತ್ತಿದ್ದಾರೆ. ರಾಯರ ಮನೆಯ ನೆಂಟಸ್ತಿಕೆಯಿದ್ದ ಮಂದಿ ತುಂಬಾ ಬಂದಿದ್ದಾರೆ.

ಧಾರೆಮಣೆಯಮೇಲೆ ನಳಿನಿಯು ಶೃಂಗಾರಪೂರಿತಳಾಗಿ ಕುಳಿತಿದ್ದಾಳೆ. ಪಕ್ಕದಲ್ಲೇ ಸತೀಶನೂ ಕುಳಿತಿದ್ದಾನೆ. ನಳಿನಿಯ ಕೊರಳಲ್ಲೊಂದು ಸತೀಶನ ಕೊರಳಲ್ಲೊಂದು ಮಾಲೆ ಕುಣಿದಾಡುತ್ತಿವೆ. ನಳಿನಿಯ ಮುಖದಲ್ಲಿ ಅಲ್ಲ ಲ್ಲೊಂದು ಕಿರುನಗೆಯು ಮೂಡುತ್ತಾ ಮಿಂಚಿನಂತೆ ಮರೆಯಾಗುತ್ತಿದೆ. ಇದನ್ನು ನೋಡುತ್ತಿದ್ದ ರಾಯರು ಮನಸ್ಸಿನಲ್ಲೇ ದೇವರಿಗೆ ವಂದಿಸಿದರು.

* * * * * *

ಈಗ ನಳಿನಿಗೆ ಯಾವತರದ ಭಯವೂ ಇಲ್ಲ, ಚಿಂತೆಯೂ ಇಲ್ಲ. ತನ್ನ ಪ್ರಿಯತಮನ ಪ್ರೀತಿಯನ್ನು ಪೂರ್ಣವಾಗಿ ತನ್ನ ಮೇಲಿರಿಸಿಕೊಂಡಿದ್ದಾಳೆ. ಸತೀಶನಿಗೆ ದೊಡ್ಡ ಕೆಲಸವೂ ದೊರೆತಿದೆ. ಒಂದು ದಿನ ಸಾಯಂಕಾಲ

ನಳಿನಿಯು ತನ್ನ ನಲ್ಲನ ಬರವಿಗಾಗಿ ಕಾದಿದ್ದಳು. ಮನೆಯ ಗೇಟಿನ ಹತ್ತಿರ ಯಾರೋ ಬರುತ್ತಿದ್ದಂತೆ ಕಂಡಿತು. ನೋಡುತ್ತಾಳೆ, ತನ್ನ ಪ್ರೀತಿಯ ಶಾಲಿನಿ ಮತ್ತು ಅವಳ ಗಂಡ ಸುರೇಂದ್ರ. ಅರ್ಧ ದಾರಿಯಲ್ಲೇ ನಳಿನಿಯು ಎದುರಿಗೆ ಹೋಗಿ ಇಬ್ಬರನ್ನೂ ಸ್ವಾಗತಿಸಿದಳು. ಎಲ್ಲರೂ ಒಳಗೆ ಬಂದರು. ಮನೆಯೆಲ್ಲ ತೋರಿಸಿ ಆಯಿತು. ಹೋಲಿಗೆ ( Hall ) ಬರುವುದರೊಳಗಾಗಿ ಮೇಜಿನ ಮೇಲೆ ಚಹಾ ತಿಂಡಿಯು ಸಿದ್ಧವಾಗಿತ್ತು. ಮೇಜಿನ ಸುತ್ತ ಮೂವರೂ ಕುಳಿತರು. ಅಷ್ಟರಲ್ಲಿ ಸತೀಶನೂ ಬಂದನು. ಅವನಿಗೆ ನಳಿನಿ, ಶಾಲಿನಿ–ಸುರೇಂದ್ರನ ಪರಿಚಯ ಮಾಡಿಕೊಟ್ಟಳು. ಎಲ್ಲರೂ ಸೇರಿ ಟಿಫೀನು ಮುಗಿಸಿದರು. ತುಂಬಾ ಮಾತುಕತೆಗಳಾದುವು. ಬಹಳ ಸಮಯವಾಯಿತೆಂದು ಹೇಳಿ ಶಾಲಿನಿ–ಸುರೇಂದ್ರರು ಹೊರಟರು. ಅವರನ್ನು ಮುಟ್ಟಿಸಿ ಬರುವುದಕ್ಕಾಗಿ ನಳಿನಿ-ಸತೀಶರೂ ಹೊರಟರು. ಅವರ ಮನೆಯ ಹತ್ತಿರ ಬರಲು ಒಬ್ಬರಿಗೊಬ್ಬರು 'ಗುಡ್‌ನ್ಯಾಟ್' ಮಾಡಿ, ನಳಿನಿ–ಸತೀಶರು ಮರಳುವುದರಲ್ಲಿದ್ದರು. ಶಾಲಿನಿ ನಳಿನಿಯನ್ನು ಕರೆದು "ನಳಿನೀ, ಈಗ ಮನೆಗೆ ಹೋಗುವಾಗ ಬೇಸರವಾಗುವುದಿಲ್ಲವಲ್ಲವೇ ?" ಎಂದು ನಗೆಯಾಡಿ ತನ್ನ ಗಂಡನನ್ನು ಕರೆದುಕೊಂಡು ಮನೆಗೆ ಓಡಿದಳು.

ನಳಿನಿ ಸತೀಶರ ಮುಖವಲ್ಲಿಯೂ ಕಿರುನಗೆ ಮೂಡಿತು.

**ಶ್ರೀಮತಿ ಗೀತಾದೇವಿ ಕುಲಕರ್ಣಿ**
**ಧಾರವಾಡ**

# ಚೆನ್ನಿ

ಮಟಮಟ ಮಧ್ಯಾಹ್ನ. ಚೆನ್ನಿಯ ದನಗಳು ಮೈದಾನದಲ್ಲಿ ಹುಲ್ಲು ಮೇಯುತ್ತಿದ್ದವು. ಚೆನ್ನಿ ಮೈದಾನದ ಅಂಚಿನಲ್ಲಿದ್ದ ಒಂದು ಮರದಕೊಂಬೆಗೆ ತೂಗಿಸಿದ್ದ ಬುತ್ತಿಯನ್ನು ಇಳಿಸಿ "ಉಸ್ಸಪ್ಪ" ಎಂದು ಕೂತಳು ಬುತ್ತಿಯನ್ನು ಬಿಚ್ಚಿ ಅದರಲ್ಲಿದ್ದ ಹಿಟ್ಟಿನ ಮುದ್ದೆಯನ್ನೂ ಗೊಜ್ಜನ್ನೂ ಉಂಡು ತಂದಿದ್ದ ನೀರಿನಲ್ಲಿ ಸ್ವಲ್ಪ ಕುಡಿದು, ಸ್ವಲ್ಪದರಲ್ಲಿ ಕೈ ತೊಳೆದುಕೊಂಡಳು. ಮತ್ತೆ ಬಟ್ಟಲುಗಳನ್ನು ಬಟ್ಟೆಯಲ್ಲಿ ಕಟ್ಟಿ ಮರದಬುಡಕ್ಕೆ ಒರಗಿಕೊಂಡು ಕೂತಳು. ಅವಳಿಗೆ ಏನೇನೋ ಆಲೋಚನೆಗಳು ಒಂದಾದಮೇಲೊಂದು ಬರತೊಡಗಿದವು. ಚಿಕ್ಕತನದಲ್ಲೇ ಸತ್ತ ತಂದೆತಾಯಿಗಳ ಜ್ಞಾಪಕ ಅವಳಿಗೆ ಮಸುಕುಮಸಕಾಗಿ ಇತ್ತು; ಅಷ್ಟೆ. ಜನರು ಮಾತಾಡಿಕೊಳ್ಳುವುದರ ಮೇಲೆ, ಅವಳು ತನ್ನ ತಂದೆತಾಯಿಯರು ಇದ್ದದ್ದರಲ್ಲಿ ಚೆನ್ನಾಗಿಯೇ ಬಾಳಿದವರೆಂದು ಊಹಿಸಿದ್ದಳು. ಅವರಿಗೆ ಇವಳೊಬ್ಬಳೇ ಮಗಳು. ಅಂತೆಯೇ ಅವರು ಇವಳಲ್ಲಿಟ್ಟಿದ್ದ ಪ್ರೀತಿಗೆ ಪಾರವಿರಲಿಲ್ಲ. ಆದರೆ ಕ್ರೂರವಿಧಿಗೆ ಇದು ಸಹಿಸಲಿಲ್ಲ. ಈಗ ಹತ್ತು ವರುಷದ ಕೆಳಗೆ ಒಂದು ಬೇಸಗೆಯಲ್ಲಿ ಸುತ್ತುಮುತ್ತ ಐದಾರು ಹಳ್ಳಿಗಳಲ್ಲಿ ಎಲ್ಲೆಲ್ಲೂ ವಿಷಮಶೀತಜ್ವರದ ಹಾವಳಿಯಿಂದ ನೂರಾರು ಜನರು ಸತ್ತರು. ಅವರ ಲೆಕ್ಕದಲ್ಲಿ ಲಿಂಗ ಅವನ ಹೆಂಡತಿ ತಿಮ್ಮಿ ಇಬ್ಬರೂ ಸೇರಿದರು. ಚೆನ್ನಿಗೆ ಆಗ ಐದೇ ವರ್ಷ. ಆಗಿನಿಂದ ಅವಳ ಪೋಷಣೆಯ ಭಾರ ಲಿಂಗನ ತಂಗಿ ಲಕ್ಷ್ಮಕ್ಕನ ಮೇಲೆ ಬಿತ್ತು. ತಾವು ವಾಸಿಸುತ್ತಿದ್ದ ಗುಡಿಸಲು, ದನ-ಕರು, ಹೊಲ ಇವೆಲ್ಲಾ ಚೆನ್ನಿಯದೇ ಆದರೂ ಲಕ್ಷ್ಮಕ್ಕನಿಗೂ ಅವಳ ಮಗನಿಗೂ ಚೆನ್ನಿಯನ್ನು ಕಂಡರೆ ಆಗುತ್ತಿರಲಿಲ್ಲ. ಅವಳ ಈ ಆಸ್ತಿಯನ್ನೆಲ್ಲಾ ತಮ್ಮ ವಶಪಡಿಸಿಕೊಳ್ಳುವುದಕ್ಕಾಗಿ ತನ್ನ ಮಗ ಈರನಿಗೆ ಚೆನ್ನಿಯನ್ನು ತೆಗೆದುಕೊಂಡು ಲಗ್ನ ಮಾಡಬೇಕೆಂದು ಲಕ್ಷ್ಮಕ್ಕನ ಇಷ್ಟ. ಆದರೆ ಚೆನ್ನಿಗೆ ಈರನನ್ನು ಕಂಡರೆ ಅಸಹ್ಯ. ಕುಳ್ಳಾಗಿ ದಪ್ಪವಾಗಿ ಕಪ್ಪಗೆ ಇರುವ ಅವನ ಆಕಾರವನ್ನು ಎಲ್ಲಾದರೂ ತಾನೊಬ್ಬಳೆ ಇರುವಾಗ ಕಂಡರೆ ಅವಳು ಹೆದರಿ

ಕೊಂಡು ಓಡುತ್ತಿದ್ದಳು. ಈರನು ಅವಳಮೇಲೆ ಇಲ್ಲದ ಚಾಡಿಗಳನ್ನು ಹೇಳಿ ತನ್ನ ತಾಯಿಯ ಕೈಯ್ಯಿಂದ ಹೊಡೆಯಿಸುತ್ತಿದ್ದನು. ಇದರಿಂದ ಚೆನ್ನಿಯು ಅವನ ಬಗ್ಗೆ ಪಡುತ್ತಿದ್ದ ಅಸಹ್ಯವೇನೂ ಕಡಮೆಯಾಗಲಿಲ್ಲ.

ಬೆಳಗಿನಿಂದ ಬಿಸಲಿನಲ್ಲಿ ಓಡಾಡಿ ಆಯಾಸವಾಗಿದ್ದರಿಂದ ಚೆನ್ನಿಗೆ ಹಾಗೇ ಸ್ವಲ್ಪ ನಿದ್ದೆ ಹತ್ತಿತು. ನಿದ್ದೆಯಲ್ಲಿ ತಾನು ಏನೋ ಘೋರವಾದ ತಪ್ಪುಮಾಡಿ ಓಡುತ್ತಿದ್ದಾಳೆ. ಯಾರೋ ತನ್ನನ್ನು ಅಟ್ಟಿಕೊಂಡು ಬರುತ್ತಿದ್ದಾರೆ. ಓಡುತ್ತಾ ಓಡುತ್ತಾ ಒಂದು ದೊಡ್ಡ ಹಳ್ಳ ಅಡ್ಡಬಂತು. "ಇನ್ನೇನು ಸಿಕ್ಕಿಬಿದ್ದೆ" ಎಂದುಕೊಂಡು ಹಿಂತಿರುಗಿ ಭಯವಿಲ್ಲದೆ ನಿಂತಿದ್ದಾಳೆ. ಅಟ್ಟಿಕೊಂಡು ಬಂದವನು ಒಬ್ಬ ಗಂಡಸು. ಹತ್ತಿರ ಬರುತ್ತಾ ಬರುತ್ತಾ ಅವನನ್ನು ಗುರುತಿಸಿದ್ದಾಳೆ. ಅವನು ಮಾದ. ಒಂದು ಕ್ಷಣದಲ್ಲಿ ಮಾದ ಅವಳನ್ನು ಹಿಡಿದುಕೊಂಡು ಹಳ್ಳದಲ್ಲಿ ದಬ್ಬಿಬಿಟ್ಟ. ಚೆನ್ನಿ ಚೀರಿಕೊಂಡು ಎದ್ದಳು. ತಕ್ಷಣ ಅವಳಿಗೆ ತನ್ನ ಕೈಯ್ಯನ್ನು ಯಾರೋ ಹಿಡಿದುಕೊಂಡಿರುವುದು ಗೊತ್ತಾಯಿತು. ಗಾಬರಿಯಲ್ಲಿದ್ದುದರಿಂದಲೂ ನಿದ್ದೆಯ ಮಬ್ಬಿನಲ್ಲಿದ್ದುದರಿಂದಲೂ ಕೈಯ್ಯನ್ನು ಹಿಡಿದವರು ಯಾರೆಂದು ತಟ್ಟನೆ ತಿಳಿಯಲಿಲ್ಲ.

"ಚೆನ್ನಿ ಭಯಪಟ್ಟೆಯಾ? ನಾನು ಈರ, ಕಂಡ್ರ?"

"ಚೀ, ಕೈ ಬಿಡು." ಎಂದು ಹೇಳಿ ಕೋಪದಿಂದಲೂ ಅಸಹ್ಯದಿಂದಲೂ ಕೈ ಬಿಡಿಸಿಕೊಳ್ಳಲು ಯತ್ನಿಸಿದಳು.

ಈರ ಕೈ ಇನ್ನೂ ಭದ್ರವಾಗಿ ಹಿಡಿದುಕೊಂಡ. ಎಷ್ಟೋ ದಿವಸಗಳಿಂದ ಆಸೆಪಟ್ಟುಕೊಂಡಿದ್ದು ಈಗ ಒಬ್ಬಳೇ ಸಿಕ್ಕಿಬಿದ್ದಾಗ ದಯಾ-ದಾಕ್ಷಿಣ್ಯಗಳಿಂದ ಬಿಡುವಷ್ಟು ಮೂರ್ಖನಲ್ಲ. ಈ ಚೋಟುದ್ದ ಹುಡುಗಿಗೆ ಅದೆಷ್ಟು ಗರ್ವ ನೋಡೋಣ. ಇವಳು ತನ್ನ ಕೈಯಿಂದ ಹೇಗೆ ತಪ್ಪಿಸಿಕೊಂಡು ಹೋಗುತ್ತಾಳೋ ಎಂದುಕೊಂಡು,

"ಚೆನ್ನಿ, ನನ್ನ ಕಂಡರೆ ನಿಂಗೆ ಯಾಕೆ ಭಯವಾಗುತ್ತೆ? ನಾವಿಬ್ಬರೂ ಲಗ್ನವಾಗಬೇಕೂಂತ ಅಮ್ಮನಿಗೆ ಇಷ್ಟ. ಆದರಿಂದ ನೀನು ನನ್ನ ಮಾತು ಕೇಳಿದರೆ ಏನೂ ತಪ್ಪಿಲ್ಲ ಕಂಡ್ಯ–" ಎಂದು ಅವಳನ್ನು ಹತ್ತಿರ ಸೆಳೆದುಕೊಳ್ಳುವುದಕ್ಕೆ ಪ್ರಯತ್ನಿಸಿದನು.

ಚೆನ್ನಿ ತನ್ನ ಬಲವನ್ನೆಲ್ಲಾ ಹಾಕಿ ಕೈ ಬಿಡಿಸಿಕೊಂಡು ದೂರನಿಂತು ಈರನನ್ನು ದುರದುರ ನೋಡಿದಳು. ಒಂದು ಗಳಿಗೆ ಆಲೋಚನೆಮಾಡಿ ಕೋಪ ದಿಂದ ಪ್ರಯೋಜನವಿಲ್ಲವೆಂದು ತಿಳಿದು ದೈನ್ಯದಿಂದ ನುಡಿದಳು.

"ಛೀ, ಇದು ನಿನಗೆ ಸರಿಯಲ್ಲ ಈರಣ್ಣ. ನಿನ್ನ ನಡತೆ ಮಂದಿಗೆ ತಿಳಿದರೆ ನಿನ್ನ ಸುಮ್ಮನೆ ಬಿಡೊಲ್ಲ. ನಿಮ್ಮಮ್ಮನಿಗೆ ತಿಳಿದರೆ ಏನಂತಾಳೆ? ನನ್ನ ಸುಮ್ಮಗೆ ಬಿಟ್ಟುಬಿಡು. ನಾನು ಈ ಯಿಚಾರ ಯಾರಿಗೂ ಹೇಳಾಕಿಲ್ಲ."

ಆದರೆ ಬಹಳ ದಿನಗಳಿಂದ ಕಟ್ಟಿಟ್ಟಿದ್ದ ಕಾತರತೆಯಲ್ಲಿ ಈರನಿಗೆ ಈ ನೀತಿಗಳು ಬೇಕಾಗಿರಲಿಲ್ಲ. ಚೆನ್ನಿಯನ್ನು ಹಿಡಿದುಕೊಳ್ಳುವ ಉದ್ದೇಶದಿಂದ ಸರ್‍ರನೆ ಬಳಿಗೆ ಬಂದನು. ಅವಳು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟಳು. ಅವಳ ಸೆರಗಿನ ಕೊನೆಯು ಅವನ ಕೈಗೆ ಸಿಕ್ಕಿತು. ಚೆನ್ನಿ ಸರಕ್ಕನೆ ತಿರುಗಿ ತನ್ನ ಬಲವನ್ನೆಲ್ಲಾ ಕೈಯಲ್ಲಿ ಹಾಕಿ ಅವನ ಕೆನ್ನೆಗೆ ಜೋರಾದ ಪೆಟ್ಟನ್ನು ಕೊಟ್ಟಳು. ಈರನು 'ಹಾ' ಎಂದು ಕೂಗಿ ಸೆರಗನ್ನು ಬಿಟ್ಟು ಆ ಕೈಯಿಂದ ಕೆನ್ನೆಯನ್ನು ಸವರಿಕೊಳ್ಳುತ್ತಾ ಏನೋ ಕೆಟ್ಟ ಮಾತನ್ನು ಗೊಣಗಿದನು. ಚೆನ್ನಿ ಅಲ್ಲಿಂದ ಪರಾರಿಯಾದಳು.

ಮಾದ ಆಗಲೆ ಎತ್ತುಗಳನ್ನು ನೆರಳಿನಲ್ಲಿ ಬಿಟ್ಟು ತಾನೂ ಅಲ್ಲೇ ಹತ್ತಿರ ದಲ್ಲಿ ಕೂತು ಊಟವನ್ನು ಮುಗಿಸಿ ವಿಶ್ರಮಿಸಿಕೊಳ್ಳುವುದರಲ್ಲಿದ್ದನು. ಒಬ್ಬ ಹೆಂಗಸು ಗಾಬರಿಪಟ್ಟು ಓಡಿಬರುತ್ತಿರುವುದನ್ನು ಕಂಡು ಎದ್ದು ಕಾಲುಹಾದಿಯ ಹತ್ತಿರ ಹೋಗಿ ನಿಂತ. ಚೆನ್ನಿ ಹತ್ತಿರ ಬರುತ್ತಲೇ ಅವಳ ಕೈಯನ್ನು ಹಿಡಿದು ನಿಲ್ಲಿಸಿ,

"ಚೆನ್ನವ್ವ, ಏನಾಯಿತು? ಯಾತಕ್ಕೆ ಓಡ್ತಾ ಇದ್ದೀಯಾ?" ಎಂದು ಕೇಳಿದ. ಇದುವರೆಗೂ ತಡೆದಿದ್ದ ದುಃಖವು ಮಾದನು ಮಾತನಾಡಿಸಿದ ಕೂಡಲೆ ಉಕ್ಕಿತು. ಅವಳು ದೊಪ್ಪನೆ ನೆಲದಮೇಲೆ ಕುಸಿದು, ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿ ಸಿದಳು.

ಮಾದನಿಗೆ ಏನು ಮಾಡಲೂ ತೋರಲಿಲ್ಲ. ಅವಳ ಪಕ್ಕದಲ್ಲಿ ಸುಮ್ಮನೆ ಮೊಳಕಾಲೂರಿ ಕೂತ. ಸ್ವಲ್ಪ ಹೊತ್ತಾದ ಮೇಲೆ ಸಂಕೋಚದಿಂದ,

"ಏನಾಯ್ತವ್ವ, ಹೇಳಬಾರ್ದ?" ಎಂದ.

ಚೆನ್ನಿ ದುಃಖವನ್ನು ಸ್ವಲ್ಪ ಮಟ್ಟಿಗೆ ನುಂಗಿಕೊಂಡು ನಿಜವನ್ನು ಹೇಳು ವುದಕ್ಕೆ ಇಷ್ಟವಿಲ್ಲದೆ,

" ಅಲ್ಲಿ........ಆ ಮೈದಾನದಲ್ಲಿ....ಊಃ....ಊಃ ...ದನ ನೋಡ್ಕೋತಾ ಇದ್ದೆ. .... ಯಾರೊ ತುಂಟ ಹುಡುಗರು ನನ್ನ ಮೇಲೆ ನಾಯಿ 'ಛೂ' ಬಿಟ್ಟರು. " ಎಂದು ಹೇಳಿದಳು. ಮಾದನಿಗೆ ಅನುಮಾನ ಬರಲಿಲ್ಲ.

" ಹೋಗಲಿ ಬಿಡು, ಚೆನ್ನವ್ವ. ಇನ್ನು ಮೇಲೆ, ಅಟೊಂದು ದೂರ ಹೋಗ್ಬೇಡ; ಇಲ್ಲೇ ತುಸ ದೂರದಲ್ಲಿರು. ಯಾರಾದರೂ ತಂಟೆ ಮಾಡಿದರೆ ನಾನಿಲ್ಲೇ ಇರ್ತೇನೆ. ನಿಂಗೆ ಭಯವಿಲ್ಲ " ಎಂದು ಸಮಾಧಾನ ಹೇಳಿದ.

ಮಾರನೆಯ ದಿನದಿಂದ ಚೆನ್ನಿ ಮಾದನ ಹೊಲಕ್ಕೆ ಹತ್ತಿರದಲ್ಲೇ ಇರು ತ್ತಿದ್ದಳು. ಎಷ್ಟೋ ದಿನ ಸಾಯಂಕಾಲ ಇಬ್ಬರೂ ಮನೆಗೆ ಬರುತ್ತಾ ಭೇಟಿ ಯಾಗುತ್ತಿದ್ದರು. ಸ್ವಲ್ಪ ಸ್ವಲ್ಪವಾಗಿ ಅವರಿಬ್ಬರಲ್ಲಿ ಸಲಿಗೆಯು ಬೆಳೆಯಿತು.

ಚೆನ್ನಿ ಅಂಥ ಕಪ್ಪೇನೂ ಅಲ್ಲ. ಎತ್ತರವಾದ ಹುಡುಗಿ. ಲಕ್ಷಣವಾದ ಮುಖ. ಯೌವನದಿಂದಲೂ ಆರೋಗ್ಯದಿಂದಲೂ ತುಂಬಿ ತುಳುಕುವ ಅವ ಯವಗಳು. ಮಾದನಿಗೂ ಇಪ್ಪತ್ನಾಲ್ಕು ಇಪ್ಪತ್ತೈದು ವರುಷಕ್ಕಿಂತ ಹೆಚ್ಚಿರ ಲಿಲ್ಲ. ಉದ್ದ ಆಳು. ಕಷ್ಟಜೀವನದಿಂದಲೂ ಸದಾ ಬಯಲಿನಲ್ಲೇ ವಾಸ ಮಾಡುತ್ತಿದ್ದುರಿಂದಲೂ ದೃಢವಾಗಿದ್ದ ದೇಹ. ಕಪ್ಪಾದರೂ ರೂಪದಲ್ಲಿ ಸುಂದರ. ಅಲ್ಲದೆ ಅವನ ಸ್ಥಿತಿಗತಿಗಳೂ ತಕ್ಕ ಮಟ್ಟಿಗೆ ಇದ್ದುವು. ಐದಾರು ಎಕರೆ ಭೂಮಿ, ಎರಡು ಜೊತೆ ಎತ್ತು, ಏಳೆಂಟು ಎಮ್ಮೆಗಳು, ದನಗಳು ಇಷ್ಟೇ ಅವನ ಆಸ್ತಿಯಾದರೂ ಅದು ಅವನಿಗೆ ಯಥೇಷ್ಟವಾಗಿತ್ತು. ಈ ಸಂದರ್ಭದಲ್ಲಿ ಮಾದನಿಗೂ ಚೆನ್ನಿಗೂ ಒಬ್ಬರಲ್ಲಿ ಒಬ್ಬರಿಗೆ ಪ್ರೇಮ ಹುಟ್ಟಿದುದು ಆಶ್ಚರ್ಯ ವೇನೂ ಅಲ್ಲ.

ಒಂದು ಸಾಯಂಕಾಲ ಮಾದ ಹೊಲದಿಂದ ಬಂದು ಎತ್ತುಗಳನ್ನು ಹಟ್ಟಿಯಲ್ಲಿ ಕಟ್ಟಿಹಾಕಿ ಅವುಗಳ ಮುಂದೆ ಒಂದಿಷ್ಟು ಒಣ ಹುಲ್ಲನ್ನೂ ಒಂದು ಗಡಿಗೆಯಲ್ಲಿ ಕಲಗಚ್ಚನ್ನೂ ಇಟ್ಟು ಗುಡಿಸಲಿನ ಒಳಕ್ಕೆ ಬಂದು ಏನೋ ಆಲೋಚನೆ ಮಾಡುತ್ತಾ ಕೈಕಾಲು ತೊಳೆದುಕೊಂಡು ಒಂದು ತಡಿಕೆಯ ಮರೆಯಲ್ಲಿ ಅಡಿಗೆ ಮಾಡುತ್ತಿದ್ದ ತಾಯಿಯ ಹಿಂದೆ ಹೋಗಿ ನಿಂತ. ಅವಳು

ಅವನ ಮುಂದೆ ಒಂದು ತಟ್ಟೆಯನ್ನಿಟ್ಟು ಬಡಿಸುವುದಕ್ಕೆ ಆರಂಭಿಸಿದಳು. ಮಾದ ಹಾಗೇ ಆಲೋಚನೆ ಮಾಡುತ್ತಾ ನಿಂತೇ ಇದ್ದ.

"ಮಾದ, ಇವೊತ್ತು ಏನೋ ಗ್ಯಾನವಾಗಿದ್ದೀಯಲ್ಲಾ, ಯಾಕೆ?" ಎಂದು ತಾಯಿ ಕೇಳಿದಳು.

"ಏನೂ ಇಲ್ಲವ್ವ. ನಿನ್ನ ಯಿಚಾರಾನೇ ಯೋಚನೆ ಮಾಡ್ತಾ ಇದ್ದೆ. ನಿಂಗೆ ಇಷ್ಟು ವಯಸ್ಸಾದರೂ ನೀನೇ ಪಾಪ ಎಲ್ಲ ಕೆಲಸ ಮಾಡಬೇಕಲ್ಲಾ ಅಂತ."

ಮುದುಕಿಗೆ ಮಾದನ ಮಾತುಗಳು ಅರ್ಥವಾಗದೆ ಇರಲಿಲ್ಲ. ಮಾದನಿಗೆ ಚೆನ್ನಿಯ ಮೇಲೆ ಕಣ್ಣಿತ್ತೆಂದು ಅವಳು ಇದುವರೆಗೆ ಊಹಿಸಿದ್ದಳು. ಆದರೂ ಏನೂ ತಿಳಿಯದವಳಂತೆ,

"ಮಾದಣ್ಣ, ನನ್ನ ಯಿಚಾರ ಇರಲಿ. ನಿನ್ನ ಲಗ್ನ ಆಗಲೇಬೇಕು. ನಿಂಗೆ ಎಡ್ತಿ ಬಂದರೆ ನನಗೆ ಅರ್ಧ ಕೆಲಸ ಕಮ್ಮಿಯಾಗ್ತದೆ. ಯಾರೋ ಹುಡುಗಿ ನಿಂಗೆ ಮಾಯಾ ಮಾಡಿದ್ದಾಳೆಂತ ತೋರ್ತದೆ. ಅದು ಯಾರ್ದೀಳು" ಅಂದಳು.

"ಲಿಂಗಣ್ಣನ ಮಗಳು; ಚೆನ್ನಿ."

"ಆಗ್ಬೈದು. ಪಾಪ ಅವಳಮ್ಮ ಅಪ್ಪ ಗಿಳಿಹಾಂಗೆ ಸಾಕಿದರು. ಅವಳು ದೊಡ್ಡೋಳಾಗಿ ಸಂಸಾರ ಮಾಡೋದು ನೋಡೋ ಪುಣ್ಯ ಕೇಳಿಬರಲಿಲ್ಲ." ಅಂತ ಕೈಯಿಂದ ಕಣ್ಣೀರನ್ನು ಒರಸಿಕೊಂಡಳು.

ಇಷ್ಟು ಮಾತಾದ ಮೇಲೆ ಕೆಲವು ದಿನಗಳಲ್ಲಿ ಮದುವೆಯೂ ಆಯಿತು. ಆದರೆ ಇವರ ಮದುವೆಯಾದದ್ದು ಇಬ್ಬರ ಮನಸ್ಸಿನಲ್ಲಿ ಮಾತ್ರ ಮುಳ್ಳು ಚುಚ್ಚಿದಂತೆ ಬಾಧಿಸುತ್ತಿತ್ತು. ಲಕ್ಷ್ಮಕ್ಕನೂ ಅವಳ ಮಗ ಈರನೂ ಎಷ್ಟೋ ಅಡ್ಡಿಗಳನ್ನು ತಂದರೂ ಅವರಿಗೆ ಮದುವೆಯನ್ನು ನಿಲ್ಲಿಸಲಾಗಲಿಲ್ಲ. ಮಾದ ಲಕ್ಷ್ಮಕ್ಕನಿಗೆ ಕೊಟ್ಟ ನೂರೈವತ್ತು ರೂಪಾಯಿ ತೆರ (ಕನ್ಯಾಶುಲ್ಕ) ಅವಳ ಕೋಪವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿತು.

* * * * * *

ಮಾದ ಚೆನ್ನಿಯರದು ಹಳ್ಳಿಗೆಲ್ಲಾ ಮಾದರಿಯ ಸಂಸಾರವಾಗಿತ್ತು. ಯಾರಾದರೂ ಗಂಡಹೆಂಡಿರು ಜಗಳವಾಡಿದರೆ ಮುದುಕರು ಸುಮ್ಮನಿರಲಾರದೆ

"ನಾಚಿಕಿಲ್ಲವೆ ನಿಮ್ಗೆ ? ನೋಡಿ, ಆ ಮಾದ ಚೆನ್ನೀನ ಹ್ಯಾಗೆ ಎರಡು ಪಕ್ಷಿಗಳ ಹಾಂಗೆ ಸಂಸಾರಾ ಮಾಡಿಕೊಂಡಿದ್ದಾರೆ" ಅಂತ ಬಯ್ಯುತ್ತಿದ್ದರು. ಪ್ರಪಂಚ ದೃಷ್ಟಿಯಲ್ಲಿ ಅವರು ಭಾಗ್ಯವಂತರಲ್ಲದಿದ್ದರೂ ಅವರ ಮನಸ್ಸಿನಲ್ಲೂ ಹೃದಯದಲ್ಲೂ ಬಡತನವಿರಲಿಲ್ಲ.

ತುಸು ದಿನಗಳಲ್ಲಿ ಮಾವನತಾಯಿ ಸತ್ತಳು. ಇದು ಕೆಲವು ದಿನ ಅವರ ಸಂಸಾರದ ಮೇಲೆ ನೆರಳನ್ನು ಬೀಸಿದ್ದರೂ ಅದು ಶೀಘ್ರವಲ್ಲಿಯೇ ಮಾಯ ವಾಯಿತು. ಮುಂದೆ ಎರಡು ವರುಷಗಳು ಎರಡು ತಿಂಗಳಂತೆ ಕಳೆದವು.

ಮಾದನಿಗೆ ಮಕ್ಕಳೆಂದರೆ ಬಹು ಪ್ರೀತಿ. ಮದುವೆಯಾದ ಹೊಸತರಲ್ಲಿ ಅವನು ಎಷ್ಟೋ ಸಲ ತಮಗೆ ಹುಟ್ಟುವ ಮಕ್ಕಳ ವಿಚಾರ ಮಾತಾಡುತ್ತಿದ್ದ. ಚೆನ್ನಿಗೆ ನಾಚಿಕೆ. ಮದುವೆಯಾಗಿ ಎರಡು ವರುಷಗಳಾದರೂ ಮಕ್ಕಳಾಗದೆ ಇದ್ದುದು ಮಾದನ ಮನಸ್ಸಿಗೆ ಆಗಾಗ ನಿರುತ್ಸಾಹವನ್ನುಂಟುಮಾಡುತ್ತಿತ್ತು. ಅವನ್ನು ಚೆನ್ನಿಯೆದುರು ಹೊರಪಡಿಸದೆ ಹೇಗೋ ಬಚ್ಚಿಟ್ಟು ಕೊಂಡಿದ್ದ. ಆದರೆ ಬರಬರುತ್ತಾ ಚೆನ್ನಿಯ ತೀಕ್ಷ್ಣದೃಷ್ಟಿಗೆ ಗಂಡನಿಗೆ ಯಾವುದೋ ವ್ಯಥೆ ಇದೆಯೆಂದು ತಿಳಿಯದೆ ಹೋಗಲಿಲ್ಲ. ಅದು ಏನು ಎಂದು ಎಷ್ಟು ಬಗೆ ಯಿಂದ ಯೋಚನೆ ಮಾಡಿದರೂ ಅವಳಿಗೆ ಹೊಳೆಯಲಿಲ್ಲ.

ಒಂದು ದಿನ ಸಾಯಂಕಾಲ ಮಾದ ಸ್ವಲ್ಪ ಹೊತ್ತಾಗಿ ಬಂದು ಕೈಕಾಲು ತೊಳೆದುಕೊಂಡು ಮೂಲೆಯಲ್ಲಿದ್ದ ಹಳೆಯ ಚಾಪೆಯ ಮೇಲೆ ಮಲಗಿಕೊಂಡು ಬಿಟ್ಟ.

ಚೆನ್ನಿ ಅವನ ಊಟಕ್ಕೆ ಸಿದ್ಧಮಾಡುತ್ತಿದ್ದವಳು "ಇದೇನು ಮೈ ಹುಷಾರಿಲ್ಲೇನು ?" ಎಂದು ಗಾಬರಿಯಿಂದ ಹತ್ತಿರ ಬಂದು ಕೂತು ಅವನ ಹಣೆಯಮೇಲೆ ಕೈಯಿಟ್ಟಳು. ಮಾದ ಮಾತಾಡಲಿಲ್ಲ. ತಲೆ ನೋಯ್ತಾ ಇದೆ ಯೇನು ? ಏಳಬಾರ್ದಾ ? ಎದ್ದು ಉಣಬಾರ್ದಾ" ಎಂದು ಮೆಲ್ಲಗೆ ಪ್ರೀತಿ ಯಿಂದ ಕೇಳಿದಳು.

ಮಾದ ಬೇಸರಿಕೆಯಿಂದ ಅವಳ ಕೈಯನ್ನು ಕಿತ್ತೆಸೆದು "ನಾನು ಉಣ್ಣಾಕಿಲ್ಲ. ನಂಗೆ ಹಸಿವಿಲ್ಲ. ನೀನು ಉಂಡು ಮಲಕ್ಕೋಹೋಗು" ಎಂದು ಸ್ವಲ್ಪ ಕಠಿನವಾಗಿ ಹೇಳಿದ.

ಚೆನ್ನಿಗೆ ಕಣ್ಣಿನಲ್ಲಿ ನೀರು ಬಂತು. ಮೆಲ್ಲಗೆ ಸೆರಗಿನ ಕೊನೆಯಿಂದ ಒರಸಿಕೊಳ್ಳುತ್ತಾ "ನಾನೇನು ತಪ್ಪು ಮಾಡಿದೆನೆಂದು ಹೀಂಗಾಡ್ತೀರಾ ? ಈಗೀಗ ಯಾವಾಗಲೂ ನನ್ಮೇಲೆ ಬೇಸರಿಸಿಕೊಳ್ತೀರಾ. ನನ್ನ ತಪ್ಪಾದರೂ ಏನು ಹೇಳಬಾರ್ದಾ." ಎಂದಳು.

ಮಾದ ಚಟಮ್ಮನೆ ಎದ್ದು ಕೂತು "ನಿನ್ತಪ್ಪೇನೂ ಅಂತ ಕೇಳ್ತೀಯಾ ? ನಾನ್ಹೇಳಬೇಕಾ ? ಚೆನ್ನಿ, ನಾನು ನಿನ್ನ ಮದುವೆಮಾಡಿಕೊಂಡಾಗ ಎಷ್ಟು ಆಶೆಪಟ್ಕೊಂಡಿದ್ದೆ ನಿಂಗೆ ತಿಳಿಯೋದಾ ? ಎಲ್ಲರ ಹಾಗೆ ನಮ್ಗೂ ಪುಟ್ಟ ಮಕ್ಕಳು ಆಗ್ತವೆ; ಮಕ್ಕಳ ಆಟಪಾಟಗಳಿಂದ ಮನೆ ಯಾವಾಗ್ಲೂ ಸೂನೆ ಗಲಾಟೆಯಾಗಿರತ್ತೆ ಅಂತ. ನಮ್ಗೆ ಯಾಕಾಗಲಿಲ್ಲ ಮಕ್ಕಳು ? "

ಚೆನ್ನಿ ಇದಕ್ಕೇನು ಉತ್ತರಕೊಡಬಲ್ಲಳು ? ಅವಳಿಗೂ ಮಕ್ಕಳು ಅಂದರೆ ಆಶೆ. ತನ್ನ ಸ್ನೇಹಿತೆಯರು ಮಕ್ಕಳಾಡಿಸುವುದನ್ನು ನೋಡಿದಾಗಲೆಲ್ಲ 'ತನಗೂ ಅಂತಹ ಪುಟ್ಟ ಪಾಪ ಇರಕೂಡದಾ ?' ಎನ್ನಿಸುತ್ತಿತ್ತು ಅವಳಿಗೆ. ಆದರೆ ಗಂಡನು ಅದನ್ನೇ ಒಂದು ದೊಡ್ಡ ಕೊರತೆಯಾಗಿ ತಿಳಿದಿದ್ದಾನೆಂದು ಅವಳಿಗೆ ಇದುವರೆಗೂ ಹೊಳೆದಿರಲಿಲ್ಲ.

ಬರಬರುತ್ತಾ ಮಾದನ ಕೊರಗು ಅವರ ಅಂದವಾದ ಸಂಸಾರದಮೇಲೆ ಒಂದು ಕಾರ್ಮೋಡವನ್ನು ಕವಿಚಿತು. ಈ ಮಧ್ಯೆ ಮಾದ ಎಷ್ಟೋ ವೇಳೆ ಸಾಯಂಕಾಲ ಹೊತ್ತಾಗಿ ಬಂದು ಊಟಮಾಡದೆ ಮಲಗಿಬಿಡುತ್ತಿದ್ದ. ಚೆನ್ನಿ ಎಷ್ಟೋ ಉಪಚಾರಮಾಡಿ ಕರೆದರೆ ಯಾವುದಾದರೂ ಬಿರುಸಾದ ಮಾತನ್ನಾಡಿ ಅವಳನ್ನು ಅಲ್ಲಿಂದ ಅಟ್ಟಿಬಿಡುತ್ತಿದ್ದ. ಅಲ್ಲದೆ ಹೆಂಡ ಕುಡಿಯುವ ದುರಭ್ಯಾಸ ವನ್ನು ಕಲಿತ. ಹೆಂಡಕುಡಿದು ಮೈಮೇಲೆ ಪ್ರಜ್ಞೆಯಿಲ್ಲದೆ ಗುಡಿಸಲಿಗೆ ಬಂದು ಹೆಂಡತಿಯಮೇಲೆ ಇಲ್ಲದ ಆರೋಪಣೆಗಳನ್ನುಮಾಡಿ ಹೊಡೆಯುವುದು ವಾಡಿಕೆಯಾಯಿತು. ಚೆನ್ನಿ ಅವನು ಏನು ಮಾಡಿದರೂ ಮಾಡಿಸಿಕೊಂಡು ಅವನಿಗೆ ಎದುರು ಮಾತಾಡದೆ ತಡೆದುಕೊಂಡಿದ್ದಳು.

ಒಂದು ರಾತ್ರಿ ಎಂದಿನಂತೆ ಮಾದ ಚೆನ್ನಾಗಿ ಕುಡಿದುಬಂದು ಹೆಂಡತಿ ಯನ್ನು ಹೊಡೆದು ಬೈದು, ಹೊರಕ್ಕೆ ನೂಕಿ ಬಾಗಿಲು ಹಾಕಿಬಿಟ್ಟ. ಚೆನ್ನಿ ನೆಲದಮೇಲೆ ಬಿದ್ದವಳು ಸ್ವಲ್ಪ ಹೊತ್ತಾದ ಮೇಲೆ ಎದ್ದು ಕೂತು ಎರಡು ಕೈಗಳಿಂದಲೂ ತನ್ನ ಮುಖವನ್ನು ಮುಚ್ಚಿಕೊಂಡು, ಮೊಣಕಾಲುಗಳಮೇಲೆ

ತಲೆಯನ್ನಿಟ್ಟು ಬಿಕ್ಕಿ ಬಿಕ್ಕಿ ಅತ್ತಳು. ಅವಳು ಹೀಗೆ ಎಂದೂ ಅತ್ತಿರಲಿಲ್ಲ. ಬಹಳ ಹೊತ್ತು ಅತ್ತಮೇಲೆ ಅವಳ ದುಃಖವು ಸ್ವಲ್ಪ ಶಮನವಾಯಿತು. ದುಃಖವು ಕಡಿಮೆಯಾಗುತ್ತಾ ಬಂದ ಹಾಗೆಲ್ಲಾ ಯೋಚಿಸತೊಡಗಿದಳು. ಅವಳಿಗೆ ಬಾಳು ದುಸ್ಸಹವಾಗಿತ್ತು. ತನಗೆ ಮಕ್ಕಳಿಲ್ಲದುದು ತನ್ನ ತಪ್ಪೆ? ತಾನು ಬಂಜೆಯೇ? ಅಥವಾ ಮಾದನಲ್ಲೆ....ತಪ್ಪಿರಬಾರದೇಕೆ? ಆದರೇನು? ಪ್ರಪಂಚ ದೃಷ್ಟಿಯಲ್ಲಿ ತಾನು ಬಂಜೆ. ಅದರಿಂದ ತನಗೆ ಸಹಿಸಲಾರದಷ್ಟು ಕಷ್ಟ. ಈ ತನ್ನ ದುರವಸ್ಥೆಯು ಪರಿಹಾರವಾಗುವ ಮಾರ್ಗವು ಅವಳಿಗೆ ಕಾಣಬರಲಿಲ್ಲ. ತನಗೆ ಹೇಗಾದರೂ ಮಕ್ಕಳಾಗಬೇಕು. ಅದೊಂದೇ ಯೋಚನೆ ಅವಳಲ್ಲಿ ನಟ್ಟಿತು. ಬಹಳ ಹೊತ್ತು ಯೋಚನೆ ಮಾಡಿದಳು. ಅವಳಿಗೆ ಒಂದು ಮಾರ್ಗವು ಹೊಳೆಯಿತು. ತಕ್ಷಣ ಶರೀರದಲ್ಲೆಲ್ಲಾ ವಿದ್ಯುತ್‌ಶಕ್ತಿ ಹರಿದಂತೆ ಮೈ ನಿಮಿರಿತು. ಆ ಯೋಚನೆಯೇ ಮತ್ತೆ ಮತ್ತೆ ಬರತೊಡಗಿತು. ಕಡೆಗೆ ಮನಸ್ಸು ದೃಢಮಾಡಿಕೊಂಡು ಎದ್ದಳು. ಪುನಃ ನಡುಗಿದಳು. ಒಂದು ಕ್ಷಣ ಅನುಮಾನಿಸಿದಳು. ಕಡೆಗೆ ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡು ತಲೆಯ ಮೇಲೆ ಸೆರಗನ್ನು ಹಾಕಿಕೊಂಡು, ಮುಖ ಕಾಣಿಸದಂತೆ ಮುಸುಕನ್ನು ಚೆನ್ನಾಗಿ ಎಳೆದುಕೊಂಡು ಹೊರಟಳು.

* * * * * *

ರಾತ್ರಿ ಹನ್ನೊಂದು ಗಂಟೆಯಾದರೂ ಈರನಿಗೆ ನಿದ್ರೆಯ ಸಮಯವಾಗಿರಲಿಲ್ಲ. ಕಾರಣ ಅವನ ತಾಯಿ ಊರಲ್ಲಿರಲಿಲ್ಲ. ತನ್ನ ಗಂಡನ ಬಳಗದಲ್ಲಿ ಯಾರೋ ಖಾಯಿಲೆಯಾಗಿದ್ದಾರೆಂಬ ವರ್ತಮಾನ ತಿಳಿದು ಅವತ್ತೇ ಐದು ಮೈಲಿ ದೂರದಲ್ಲಿದ್ದ ಸಂಕೇನಹಳ್ಳಿಗೆ ಹೋಗಿದ್ದಳು. ಇದೇ ಸಮಯ ಅಂದುಕೊಂಡು ಈರನು ಕೆಲವು ಸ್ನೇಹಿತರನ್ನು ಸೇರಿಸಿಕೊಂಡಿದ್ದ. ಎಲ್ಲರೂ ಹರಟೆಹೊಡೆಯುತ್ತಾ ಅಸಹ್ಯವಾದ ಮಾತುಗಳನ್ನಾಡುತ್ತಾ ಗಟ್ಟಿಯಾಗಿ ಕೇಕೆ ಹಾಕಿಕೊಂಡು ನಗುತ್ತಾ ಗಲಾಟೆ ಮಾಡುತ್ತಾ ಇದ್ದರು. ಇಷ್ಟು ಗಲಾಟೆಯಿಂದ ಒಬ್ಬರಿಗಾದರೂ ಮೈಮೇಲೆ ಸರಿಯಾದ ಪ್ರಜ್ಞೆ ಇರಲಿಲ್ಲ. ಈರನೇ ಎಲ್ಲರಿಗೂ ಚೆನ್ನಾಗಿ ಹೆಂಡವನ್ನು ಕುಡಿಸಿ ತಾನೂ ಕುಡಿದಿದ್ದ. ರಾತ್ರಿ ಹನ್ನೊಂದು ಗಂಟೆಯ ಮೇಲೆ ಒಬ್ಬೊಬ್ಬರಾಗಿ ಸ್ನೇಹಿತರೆಲ್ಲರೂ ಹೋಗುವುದಕ್ಕೆ ಪ್ರಾರಂಭಿಸಿದರು. ಎಲ್ಲರೂ ಹೊರಟುಹೋದಮೇಲೆ ಬಾಗಿಲನ್ನು

ಹಾಕಿಕೊಂಡು ಮಲಗಿಕೊಳ್ಳುವ ಉದ್ದೇಶದಿಂದ ಈರ ಬಾಗಿಲಕ್ಕೆ ಬಂದು ಸುಮ್ಮನೆ ಹೊರಗೆ ತಲೆ ಇಣಿಕಿಹಾಕಿದ. ಮನೆಯ ಮುಂದೆ ಒಂದು ಪಕ್ಕಕ್ಕೆ ಒಂದು ದೊಡ್ಡ ಹುಣಸೆಮರ. ಬೆಳದಿಂಗಳಲ್ಲಿ ಅದರ ನೆರಳಿನಲ್ಲಿ ಯಾವುದೋ ವ್ಯಕ್ತಿ ನಿಂತಿದ್ದುದು ಅವನಿಗೆ ಕಾಣಿಸಿತು. ಒಂದು ಕ್ಷಣ ಭೂತ ದೆವ್ವಗಳ ಮೇಲೆ ಅವನ ಯೋಚನೆ ಹೋದರೂ ಮರುಕ್ಷಣದಲ್ಲೇ ಅವನು ಆ ವ್ಯಕ್ತಿಯ ಹತ್ತಿರ ಹೋಗಿ " ನೀನು ಯಾರು ? " ಎಂದು ಕೇಳಿದ. ಚೆನ್ನಿ ಮುಖದ ಮೇಲೆ ಎಳೆದಿದ್ದ ಮುಸುಕನ್ನು ತೆಗೆದುನಿಂತಳು. ಈರನಿಗೆ ಆಶ್ಚರ್ಯವಾಯಿತು.

* * * * * *

ಮಾದನ ಆನಂದಕ್ಕೆ ಮಿತಿಯಿಲ್ಲ. ಮದುವೆಯಾದ ಹೊಸದರಲ್ಲಿ ಚೆನ್ನಿಯನ್ನು ಯಾವ ಯಾವ ಮುದ್ದು ಹೆಸರುಗಳಿಂದ ಕರೆಯುತ್ತಿದ್ದನೋ ಅವುಗಳನ್ನೆಲ್ಲ ಮತ್ತೆ ಜ್ಞಾಪಿಸಿಕೊಂಡು ಕರೆಯಲಾರಂಭಿಸಿದ. ಹೆಂಡ ಕುಡಿಯುವುದನ್ನು ಬಿಟ್ಟುಬಿಟ್ಟ. ಆದರೇನು ? ಚೆನ್ನಿ ಅವನ ಸಂತೋಷಗಳಲ್ಲಿ ಭಾಗಿಯಾಗಿರಲಿಲ್ಲ. ಈ ಮಧ್ಯೆ ಅವಳು ಯಾರ ಹತ್ತಿರಲೂ ಹೆಚ್ಚು ಮಾತಾಡುತ್ತಿರಲಿಲ್ಲ. ಪ್ರಶ್ನೆಗೆ ಉತ್ತರಕೊಡುತ್ತಿದ್ದಳು; ಅಷ್ಟೆ. ಮನೆ ಕೆಲಸವೆಲ್ಲಾ ಆದಮೇಲೆ ಯಾವಾಗಲೂ ಒಂದು ಮೂಲೆಯಲ್ಲಿ ಕೂತು ಯೋಚಿಸುತ್ತ ಇರುವಳು. ಮಾದನ ಬಲವಂತಕ್ಕೆ ಇಷ್ಟು ಆಹಾರವನ್ನು ತೆಗೆದುಕೊಳ್ಳುವಳು. ಅವನಿಲ್ಲದಿದ್ದರೆ ಆವಿನ ಉಪವಾಸ. ಇವೆಲ್ಲ ಸ್ವಲ್ಪ ಮಟ್ಟಿಗೆ ಅವಳಿಗೆ ಮೈ ಸ್ವಸ್ಥವಿಲ್ಲದುದರಿಂದ ಅಂತ ಮಾದ ಎಂದುಕೊಂಡಿದ್ದ. ಒಂದು ದಿನ ಅವಳ ಪಕ್ಕದಲ್ಲಿ ಕೂತು ಅವಳ ಮುಖವನ್ನು ಹತ್ತಿರಕ್ಕೆಳೆದುಕೊಂಡು " ಚೆನ್ನಿ, ನೀನು ಯಾವಾಗಲೂ ಏನು ಯೋಚನೆ ಮಾಡ್ತಾ ಇರ್ತೀಯಾ ? ನಿನ್ನ ಕಂಡರೆ ನಂಗೆ ಪ್ರೇಮ ಇಲ್ಲಾ ಅಂದುಕೊಂಡಿದ್ದೀಯಾ ! ನಾನು ನಿಂಗೆ ಕೊಟ್ಟ ಕಷ್ಟ ಎಲ್ಲಾ ಮರ್ತುಬಿಡು. ಅದೆಲ್ಲಾ ಮನಸ್ಸಿಗೆ ಬಂದರೆ ನನಗೆ ಎಷ್ಟು ಯತಾ ಆಗ್ತದೆ ನಿಂಗೊತ್ತೆ ? ನಾನೊಂದು ಮಗನ ಹಾಂಗೆ ಇದ್ದೆ. ನಮ್ಗೆ ಮಗ ಹುಟ್ಟುತ್ತೆ ಅಂತ ನಂಗೆ ಎಷ್ಟು ಸಂತೋಸ ಆಗ್ತದೆ. ನಿನಗಿಲ್ವ ಸಂತೋಸ? " ಎಂದು ಹೇಳಿ ಅವಳನ್ನು ಇನ್ನೂ ಹತ್ತಿರ ಸೆಳೆದು ಅವಳ ಕೂದಲನ್ನು ನೇವರಿಸುತ್ತ ಇದ್ದ. ಚೆನ್ನಿ ಮಾತಾಡಲಿಲ್ಲ. ಅವಳು ಮೆಲ್ಲಗೆ ಅಳುತ್ತಿದ್ದಳು.

ಕೆಲವು ತಿಂಗಳಲ್ಲಿ ಚೆನ್ನಿ ಒಂದು ಗಂಡು ಮಗುವನ್ನು ಹಡೆದಳು. ಮಾದನ ಸಂಭ್ರಮವೇ ಸಂಭ್ರಮ. ಮಗುವನ್ನು ಒಂದು ನಿಮಿಷವಾದರೂ ಕೆಳಗೆ ಬಿಡದೆ ಎತ್ತಿಕೊಂಡಿರುತ್ತಿದ್ದ. ಚೆನ್ನಿಗೆ ಹಡೆದ ದಿನದಿಂದ ನಿತ್ಯ ಜ್ವರ ಬರುತ್ತಿದ್ದದರಿಂದ ಅವನು ಹೊಲಕ್ಕೆ ಹೋಗದೆ ಅವಳನ್ನೂ ಮಗುವನ್ನೂ ನೋಡಿಕೊಳ್ಳುತ್ತಿದ್ದ. ಚೆನ್ನಿ ಕೆಲವು ತಿಂಗಳಿಂದ ಸರಿಯಾಗಿ ಆಹಾರವನ್ನು ತೆಗೆದುಕೊಳ್ಳದೆ ಇದ್ದುದರಿಂದಲೂ ಮನೋವ್ಯಥೆಯಿಂದಲೂ ಬಹಳ ಬಡವಾಗಿದ್ದಳು. ಹೆತ್ತ ಮೇಲೆ ಪೂರ್ತಿ ಹಾಸಿಗೆಯನ್ನು ಬಿಟ್ಟೇಳಲಾರದಹಾಗಾದಳು. ಮಗುವು ಕೂಡ ಸರಿಯಾಗಿ ಬೆಳೆಯದೆ ಈಗಲೋ ಆಗಲೋ ಸಾಯುವ ಹಾಗಿತ್ತು. ಹಡೆದ ಏಳೇ ದಿವಸಗಳಲ್ಲಿ ಚೆನ್ನಿ ಬದುಕಲಾರಳೆಂದು ಮಾದನಿಗೆ ಚೆನ್ನಾಗಿ ತಿಳಿಯಿತು.

ಬೆಳಗಿನಿಂದ ಚೆನ್ನಿ ಸ್ಮರಣೆಯಿಲ್ಲದೆ ಒಂದು ಗುಟುಕು ನೀರನ್ನೂ ಕುಡಿಯದೆ ಹಾಸಿಗೆಯ ಮೇಲೆ ಬಿದ್ದಿದ್ದಳು. ರಾತ್ರಿ ಹತ್ತು ಗಂಟೆಯ ಸಮಯ. ಮಾದ ಅವಳ ಹಾಸಿಗೆಯ ಪಕ್ಕದಲ್ಲೇ ಬೆಳಗಿನಿಂದ ಕೂತಿದ್ದ. ತೊಡೆಯ ಮೇಲೆ ಮಗುವನ್ನು ಮಲಗಿಸಿಕೊಂಡಿದ್ದ. ಏಳೆಂಟು ದಿನಗಳಿಂದ ಹಗಲು ರಾತ್ರಿ ನಿದ್ರೆಯಿಲ್ಲದುದರಿಂದ ಅವನಿಗೆ ಸ್ವಲ್ಪ ತೂಕಡಿಗೆ ಹತ್ತಿತ್ತು. ಚೆನ್ನಿ ಸ್ವಲ್ಪ ಕದಲಿದಳು. ತಕ್ಷಣ ಮಾದ ಎಚ್ಚತ್ತು ಅವಳ ಕಡೆಗೆ ನೋಡಿದ; ಚೆನ್ನಿ ಕಣ್ಣು ತೆಗೆದಳು. ಮಾದ ಅವಳ ಮುಖದ ಹತ್ತಿರ ಬಗ್ಗಿ "ಚೆನ್ನಿ, ಇಷ್ಟು ಹಾಲು ಕುಡೀತೀಯಾ ?" ಎಂದು ಆಸೆಯಿಂದ ಕೇಳಿದ.

ಚೆನ್ನಿ ತಲೆಯನ್ನಲ್ಲಾಡಿಸಿ ಕೃಶವಾದ ತನ್ನ ಕೈಗಳಿಂದ ಅವನ ತಲೆಯನ್ನು ಇನ್ನೂ ಬಗ್ಗಿಸಿಕೊಂಡು ಬಹಳ ಕ್ಷೀಣಸ್ವರದಿಂದ

"ನಾನು ಹೋಗುವದೇ ಒಳ್ಳೇದು. ನಿನಗೋಸ್ಕರ ತಪ್ಪು ಮಾಡಿದೆ, ಕ್ಷಮಿಸು." ಮಗುವಿನ ಕಡೆ ಒಂದುಸಲ ನೋಡಿ "ಈ ಜೀವ ನಿನಗೊಪ್ಪಿಸಿದ್ದೀನಿ. ಅವನ್ನ ಚೆನ್ನಾಗಿ ನೋಡ್ಕೊ."

ಚೆನ್ನಿ ಮತ್ತೆ ಕಣ್ಣು ಮುಚ್ಚಿದಳು. ಪುನಃ ಈ ಲೋಕದಲ್ಲಿ ಅವುಗಳನ್ನು ತೆರೆಯಲಿಲ್ಲ. ಅವಳ ಮಗುವು ಎರಡೇ ದಿನಗಳಲ್ಲಿ ಅವಳನ್ನು ಸೇರಿತು.

ಶ್ರೀಮತಿ ಆರ್. ರತ್ನಾಬಾಯಿ ಎಂ. ಎ.
ಚಿತ್ತೂರು

# ಹುಚ್ಚಿ ಯಾರು ?

ಒಂದು ಸಾಯಂಕಾಲ. ತಣ್ಣಗೆ ಮನೋಹರವಾಗಿ ಗಾಳಿಯು ಬೀಸುತ್ತಿದ್ದಿತು. ಕೆಲವು ಜನರು ವಿಹಾರಾರ್ಥವಾಗಿ ಸಂಚರಿಸುತ್ತಿದ್ದರು. ಕೆಲವರು ತಮ್ಮ ಪತ್ನಿಯರೊಡನೆ ಸಿನೀಮಾ ನೋಡಲು ಹೋಗುತ್ತಿದ್ದರು. ಇನ್ನೂ ಕೆಲವರು ಇತರ ಜನರ ಮನವನ್ನು ಆಕರ್ಷಿಸಬೇಕೆಂದು ವಿವಿಧ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಅತ್ತಿಂದಿತ್ತ ತಿರುಗುತ್ತಿದ್ದರು. ಈ ಸಮಯದಲ್ಲಿ ಗೆಳೆಯರಾದ ರಾಮಚಂದ್ರ ಮತ್ತು ಶಿವರಾಂ ಸ್ಟೇಷನ್ ರೋಡಿನಲ್ಲಿ–ಅಂದೇ ಮಧ್ಯಾಹ್ನ ಫೈನಲ್ ಎಕ್ಸಾಮಿನೇಷನ್ ಪೂರೈಸಿದ್ದರಿಂದ–ನಿರಾತಂಕವಾಗಿ ತಮ್ಮ ಖಾಸಾ ಶಾಂತಿನಿಕೇತನದ ಕಡೆ ಸಾಗಿದ್ದರು. ಸುಬ್ಬರಾಯಶೆಟ್ಟಿ ಛತ್ರದ ಹತ್ತಿರಕ್ಕೆ ಬರುವ ಹೊತ್ತಿಗೆ, ರಾಮಚಂದ್ರನ ದೃಷ್ಟಿಯು ಒಂದು ಜನಸಮೂಹದ ಮೇಲೆ ಬಿತ್ತು. ಕೂಡಲೇ ಶಿವರಾಮನ ಕಡೆ ನೋಡಿ, “ಶಿವರಾಂ, ಅಲ್ಲೇಕೋ ಬಹಳ ಮಂದಿ ನೆರೆದಿರುವರು. ಹೇಗಿದ್ದರೂ ಇವತ್ತು ಓದುವ ಆತಂಕವಿಲ್ಲ, ನಾವೂ ಹೋಗಿ ನೋಡೋಣ ಬಾರೋ” ಎಂದ. ಶಿವರಾಮನಿಗೆ ಹೋಗಲು ಇಷ್ಟವಿಲ್ಲದಿದ್ದರೂ ರಾಮಚಂದ್ರನ ಬಲಾತ್ಕಾರದಿಂವ ಹೋಗಲೇಬೇಕಾಯಿತು.

ಆ ಜನಸಂದಣಿಯ ಮಧ್ಯೆ ಒಬ್ಬ ಸ್ತ್ರೀ ಕುಳಿತಿದ್ದಳು. ನೋಡುವುದಕ್ಕೆ ಒಬ್ಬ ಹುಚ್ಚಿಯಂತೆ ಕಾಣುತ್ತಿದ್ದಳು. ಬಹಳ ಆತುರದ ಮನುಷ್ಯನಾದ ಶಿವರಾಮನು “ಅಲ್ಲೋ ರಾಮಚಂದ್ರ, ಹುಚ್ಚೀನೆಲ್ಲೂ ನೋಡಿಲ್ವೇನೋ ? ವಾಕ್ ಹೋಗೋಣಾಂತ ಹೇಳಿ ಈ ಜನಮಧ್ಯ ನಿಂತ್ಬಿಟ್ಯಲ್ಲಾ. ಬೇಕಾದರೆ ಒಂದಿವ್ಸ ಮೆಂಟಲ್ ಹಾಸ್ಪಿಟಲ್ ವಿಜಿಟ್ ಮಾಡೂವಂತೆ, ನಡಿಯೋ ಹೋಹೋಣ” ಎಂದ. ಅದಕ್ಕೆ ರಾಮಚಂದ್ರನು “ತಡಿಯೋ, ಸ್ವಲ್ಪ ನಿಧಾನಿಸ್ಕೊ. ಕೆಲವು ಮಂದಿ ಹುಚ್ಚರ ಕಥೆ ಬಹಳ ಸ್ವಾರಸ್ಯವಾಗಿರತ್ತೆ. ಏನೆಂದು ಕೇಳೋಣ” ಎಂದ. ಶಿವರಾಂ ವಿಧಿಯಿಲ್ಲವೆ ನಿಲ್ಲಬೇಕಾಯಿತು.

ಹುಚ್ಚಿಗೆ ಸುಮಾರು ೨೮–೩೦ ವರುಷಮೋಳಗಿರಬೇಕು. ಬೆನ್ನಿನಮೇಲೆ ಉದ್ದವಾದ ಕೇಶರಾಶಿ, ಬಹಳ ದಿವಸಗಳಿಂದ ನೀರುಕಾಣದೆ ಜಟೆಕಟ್ಟಿಕೊಂಡು ಬೂದಿಯಲ್ಲಿ ಹೊರಳಾಡಿದಂತಿತ್ತು. ಗುಂಡಾದ ಮುಖಕ್ಕೆ ಸಂಪಿಗೆ ಹೂವಿನಂತಹ ನಾಸಿಕ, ವಿಶಾಲವಾದ ಕಣ್ಣುಗಳು. ಒಟ್ಟಿನಲ್ಲಿ ಯಾರಾದರೂ ಎರಡು ಸಾರಿ ತಿರುಗಿ ನೋಡುವಂತಹ ರೂಪು. ಬಿದ್ದೂ, ಎದ್ದೂ ಮುಖವೆಲ್ಲ ತರೆದು ಕೊಂಡ ಘಾಯಗಳು, ಬೀದಿಯಲ್ಲಿ ಬಿದ್ದಿದ್ದ ಬಟ್ಟೆಚೂರುಗಳನ್ನೆಲ್ಲಾ ಕೂಡಿಸಿ ಹೊಲಿದುಕೊಂಡ ಒಂದು 'ಸೀರೆ' ಯನ್ನುಟ್ಟಿದ್ದಳು. ಹತ್ತಿರ ಹರಕು ಬಟ್ಟೆಗಳ ಒಂದು ಗಂಟು. ಪಕ್ಕದಲ್ಲಿ ಚಿಕ್ಕದೊಂದು ಕನ್ನಡಿಯನ್ನಿಟ್ಟುಕೊಂಡಿದ್ದಳು. ಒಂದೊಂದು ಸಲ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುವಳು; ನಗುವಳು. ಕೆಲವು ಸಾರಿ ಅಳುತ್ತಾ "ಈ ರೂಪು ಯಾರಿಗ್ನೋಸ್ಕರ?" ಎನ್ನುವಳು. ಬೀದಿ ಬೀದಿಗಳಲ್ಲಿ ತಿರುಗುತ್ತಾ ಎಲ್ಲಾ ಮರದ ಸೊಪ್ಪುಗಳನ್ನೂ ಹೂವುಗಳನ್ನೂ ಆರಿಸಿಕೊಂಡು ಬಂದು ತನ್ನ ಸ್ಥಳದಲ್ಲಿ ಕುಳಿತುಕೊಂಡು ಸಿಂಗರಿಸಿಕೊಳ್ಳುವಳು. ಒಂದು ಮರದ ಕೆಳಗೇ ಅವಳ ಬೀಡು. ಎಲ್ಲಿ ಹೋದರೂ ತನ್ನ ಸ್ಥಳಕ್ಕೆ ಹಿಂದಿರುಗಿ ಬಂದುಬಿಡುತ್ತಿದ್ದಳು. ಯಾರಾದರೂ ತನ್ನನ್ನು ನೋಡುತ್ತಾ ನಿಂತಿದ್ದರೆ, ಅವರನ್ನು ಕುಳಿತುಕೊಳ್ಳುವಂತೆ ಹೇಳಿ, ಬಹಳ ಪರಿಚಯಸ್ಥೆಯಂತೆ ಮಾತನಾಡತೊಡಗುವಳು. ಇದೆಲ್ಲವನ್ನೂ ನೋಡಿ ರಾಮಚಂದ್ರನಿಗೆ ಕುತೂಹಲ ಹೆಚ್ಚಿತು. ಪಕ್ಕದಲ್ಲಿದ್ದ ಒಬ್ಬನನ್ನು "ಏನಯ್ಯಾ ಸಮಾಚಾರ? ಆಕೆಗೆ ಹುಚ್ಚೇಕೆ ಹಿಡಿಯಿತೆಂದು ನಿನಗೆ ಗೊತ್ತೇ?" ಎಂದು ಕೇಳಿದ. "ಅಯ್ಯೋ ಸ್ವಾಮಿ, ಆಕೆ ಹಣೇಬರ ಏನಂತ್ಹೇಳ್ಲೀ. ಆಕೆ ಹಂಗೆ ಬದಕ್ಬೋರೇ ಇಲ್ಲ. ಯಾರ ಹಣೇಬರ ಯಾರ್ಕಂಡಿದಾರೆ" ಎಂದು ಉದ್ಗಾರ ತೆಗೆದ. ಮತ್ತೆ ತಾನೇ ರಾಮಚಂದ್ರನ ಕುತೂಹಲವನ್ನು ನೋಡಿ "ಮುನ್ಸಿಫ್ ರಾಮರಾಯರ ಹೆಸರನ್ನು ನೀವು ಕೇಳಿರಬಹುದು. ಆತನೂ ನಾನೂ ಏಕವಚನದ ಸ್ನೇಹಿತರು. ಆತ ಬಹಳ ಒಳ್ಳೆಯ ಮನುಷ್ಯ. ಆತನ ಹೆಂಡತಿಯೇ ಈಕೆ ಸ್ವಾಮಿ. ರಾಮರಾಯರಿಗೆ ನೂರೈವತ್ತು ರೂಪಾಯಿ ಸಂಬಳ ಬರುತ್ತಿತ್ತು. ಚಿಕ್ಕ ವಯಸ್ಸಿನಲ್ಲಿಯೇ ಇಬ್ಬರಿಗೂ ಮದುವೆಯಾಯಿತು. ಬಹಳ ಅನ್ಯೋನ್ಯವಾಗಿದ್ದರು. ಯಾವ ವಿಚಾರದಲ್ಲಿಯೇ ಆಗಲಿ ಒಬ್ಬರಿಗೊಬ್ಬರು ವಿರೋಧಿಸುತ್ತಿರಲಿಲ್ಲ. ಈಕೆಯಂತೂ ಕಲಿಯುಗದ ಅರುಂಧತಿ

ಯೆನ್ನುವಂತಿದ್ದಳು. ಇಬ್ಬರಿಗೂ ಕೋಪವೆಂಬ:ವರ ಸುಳಿವೂ ಇರಲಿಲ್ಲ. ಯಾರು ನೋಡಿದರೂ 'ಎಂತಹ ಆದರ್ಶದಾಂಪತ್ಯವಪ್ಪಾ' ಎಂದು ತಲೆ ದೂಗುತ್ತಿದ್ದರು.

"ರಾಮರಾಯರಿಗೆ ಶ್ರೀನಿವಾಸರಾಯರೆಂಬೊಬ್ಬ ಸ್ನೇಹಿತರಿದ್ದರು. ಆತನಿಗೆ ಯಾವಾಗಲೂ ಸೀತಮ್ಮ (ಹುಡುಗಿಯ ಹೆಸರು) ಮತ್ತು ರಾಮರಾಯರ ಮೇಲೆ ಕಣ್ಣು. ಇವರಿಬ್ಬರ ಅನ್ಯೋನ್ಯತೆಯನ್ನು ನೋಡಿದರೆ ಆತನ ಹೊಟ್ಟೆಯಲ್ಲಿ ಬೆಂಕಿಸುರುವಿದಂತಾಗುತ್ತಿತ್ತು.

"ಒಂದು ದಿನ ಶ್ರೀನಿವಾಸರಾಯರ ಮನೆಯಲ್ಲಿ ಗೆಳೆಯರೆಲ್ಲರಿಗೂ "ಟೀ ಪಾರ್ಟಿ" ಏರ್ಪಾಟಾಯಿತು. ರಾಮರಾಯರೂ ಹೋಗಿದ್ದರು. ಗಾಯನ, ಉಪಹಾರ ಎಲ್ಲ ಮುಗಿದನಂತರ ಗೆಳೆಯರೆಲ್ಲ ಒಬ್ಬೊಬ್ಬರಾಗಿ ಹೊರಟರು. ರಾಮರಾಯರೂ ಹೊರಡಲನುನಾದರು. ಇದನ್ನು ಕಂಡು ಶ್ರೀನಿವಾಸರಾಯರು ಸ್ವಲ್ಪ ಕುಳಿತುಕೊಳ್ಳುವಂತೆ ಹೇಳಿದರು. ಮನೆಯಲ್ಲಿ ಹೆಂಡತಿ ಕಾದಿರುವಳೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ರಾತ್ರಿ ಒಂಬತ್ತೂವರೆಯಾಯಿತು. ಎಲ್ಲರೂ ಹೊರಟು ಹೋದನಂತರ ಶ್ರೀನಿವಾಸರಾಯರು 'ಈಗ ಬರುವೆ'ನೆಂದು ಹೇಳಿ ಒಳಗೆ ಹೋದರು. ಬಳಿಕ ಒಬ್ಬ ಸುಂದರಿಯಾದ ಹೆಂಗುಸು ರಾಮರಾಯರಿದ್ದೆಡೆಗೆ ಬಂದಳು. ಹೊರಗಿನಿಂದ ಬಾಗಿಲನ್ನು ಹಾಕಿದಂತಾಯಿತು. ರಾಮರಾಯರಿಗೆ ಆಶ್ಚರ್ಯವಾಯಿತು. ಎತ್ತಲೂ ತೋಚದಾಯಿತು. ಹೊರಗೆ ಹೋಗಲು ನೋಡಿದರೆ ಎಲ್ಲಾ ಬಾಗಿಲುಗಳಿಗೂ ಬೀಗ. ಸುಂದರಳು (ಬಂದವಳ ಹೆಸರು) ರಾಯರು ಎತ್ತ ಹೋದರೂ ಬಿಡದೆ, ಎಲೆ ಅಡಿಕೆ ಕೊಡಲು ಹೋಗುವಳು, ಇಲ್ಲದ ನೆಪವನ್ನು ತೆಗೆದು ಮಾತನಾಡಿಸುವಳು. ಏನು ಮಾಡಿದರೂ ರಾಯರು ಜಗ್ಗಲಿಲ್ಲ. ಕೊನೆಗೆ ಮೆಲ್ಲನೆ ಹಾಡತೊಡಗಿದಳು. ಸೊಗಸಾದ ಶಾರೀರ. ಜೊತೆಗೆ ವಿದ್ವತ್ತಿನ ಪ್ರತಿಭೆ. ಸಂಗೀತ ಲೋಲುಪರಾದ ರಾಯರಿಗೆ ಮೈಮರೆಯುತ್ತಾ ಬಂದಿತು. ಸುಂದರಳು ಹಾಡುತ್ತಾ, ಹಾಡುತ್ತಾ, ರಾಯರು ಆಕೆಯ ಸಂಗೀತದಲ್ಲಿ........ಕೊನೆಗೆ ಆಕೆಯಲ್ಲೇ ತಲ್ಲೀನರಾದರು!

"ಶ್ರೀನಿವಾಸರಾಯರು ರಾಮರಾಯರನ್ನು ಈ ಪಾಡುಮಾಡಿ, ತಾನು ರಾಯರ ಮನೆಗೆ ಹೋದರು. ರಾತ್ರಿ ಹನ್ನೊಂದು ಗಂಟೆಯ ಸಮಯ.

ಸೀತಮ್ಮನು ಬಾಗಿಲ ಸದ್ದನ್ನು ಕೇಳಿ ತನ್ನ ಹೃದಯೇಶ್ವರನು ಬಂದನೆಂಬ ಸಂತೋಷದಿಂದ, ಯಾರೆಂದು ಕೂಡಾ ವಿಚಾರಿಸದೆ ಬಾಗಿಲನ್ನು ತೆಗೆದು ಬಿಟ್ಟಳು. ಶ್ರೀನಿವಾಸರಾಯರು ಒಳಗೆ ನುಗ್ಗಿ ಬಾಗಿಲನ್ನು ಮುಚ್ಚಿಬಿಟ್ಟರು. ಸೀತಮ್ಮನಿಗೆ ಗಾಬರಿಯೊಂದುಕಡೆ, ಕೋಪವೊಂದುಕಡೆ. ಸೀತಮ್ಮನು ಸುಮ್ಮನೆ ನಿಂತಿದ್ದುದನ್ನು ಕಂಡು "ಚಿನ್ನಾ" ಎಂದು ಕೈಹಿಡಿಯಲು ಹೋಗು ವರು. ಸೀತಮ್ಮನು ಕೈಯ್ಯನ್ನು ಕಿತ್ತೊಗೆಯುವಳು. ಶ್ರೀನಿವಾಸರಾಯರು ಉನ್ಮತ್ತನಂತೆ ಮಾತನಾಡುವರು. "ನಿನ್ನ ಗಂಡನು ಸೂಳೆಯರ ಮನೆ ಯಲ್ಲಿ ಬಿದ್ದಿರುವನು. ಇನ್ನು ನಿನ್ನ ಕೈಗೆ ಸಿಕ್ಕುವುದಿಲ್ಲ. ನನ್ನನ್ನು ಪ್ರೀತಿಸು ಅಂದರೆ ನೀನು ಸುಖವಾಗಿರುವೆ." ಎಂದು ಎಷ್ಟೋ ವಿಧವಾಗಿ ಹೇಳಿದರು. ಸೀತಮ್ಮನು ತನ್ನ ಗಂಡನ ಸುದ್ದಿಯನ್ನು ನಂಬಲಿಲ್ಲ. ಶ್ರೀನಿವಾಸರಾಯರು ಈ ಮಾತನ್ನು ಆಡುತ್ತಿದ್ದಾಗ ಸೀತಮ್ಮನು ಮೆಲ್ಲನೆ ಬೀದಿಯ ಬಾಗಿಲನ್ನು ತೆರೆದಳು, ರಾಯರು ಹಿಡಿದುಕೊಳ್ಳಲು ಹತ್ತಿರ ಬಂದ ಕೂಡಲೆ ಬೀದಿಗೆ ತಳ್ಳಿಬಿಟ್ಟು ಬಾಗಿಲನ್ನು ಮುಚ್ಚಿಬಿಟ್ಟಳು.

"ರಾತ್ರಿ ಎರಡೂವರೆ ಗಂಟೆಗೆ ರಾಮರಾಯರು ಮನೆಗೆ ಬಂದರು. ರಾತ್ರಿ ಏನೋ ಕೆಲಸಮಾಡಿ ಆಯಾಸಪಟ್ಟಿರಬಹುದೆಂದು ಸೀತಮ್ಮನು ಏನೂ ಕೇಳದೆ ಮತ್ತು ಹೇಳದೆ ಸುಮ್ಮನಿದ್ದುಬಿಟ್ಟಳು.

ಮಾರನೆಯ ದಿವಸ ರಾತ್ರಿ ನಡೆದದ್ದನ್ನೆಲ್ಲಾ ಹೇಳಿದರೂ ರಾಮರಾಯರು ಸುಮ್ಮನಿದ್ದುಬಿಟ್ಟರು. ಸೀತಮ್ಮನು ಮೈಯ್ಯಲ್ಲಿ ಸರಿಯಿಲ್ಲವೇನೋ ಎಂದು ಕೊಂಡಳು.

"ಆ ದಿವಸದಿಂದ ರಾಮರಾಯರ ನಡತೆಯೇ ಬದಲಾಯಿಸಿಹೋಯಿತು. ಸೀತಮ್ಮನು ಮಾತನಾಡಿದರೆ ರೇಗುವರು. 'ಬೇಡದ ಗಂಡನಿಗೆ ಮೊಸರನ್ನ ದಲ್ಲಿ ಕಲ್ಲು' ಎನ್ನುವ ಹಾಗೆ, ಏನನ್ನು ಮಾಡಿದರೂ ತಪ್ಪೆ. ಸೀತಮ್ಮನು ಎದುರಿಗೆ ಬಂದರೆ ಒಲೆಯಲ್ಲಿ ಉಪ್ಪು ಹಾಕಿದಂತಾಗುತ್ತಿತ್ತು. ಅವರು ರಾತ್ರಿ ಹನ್ನೆರಡು, ಒಂದು ಗಂಟೆಗೆ ಬರುವುದು. ಸೀತಮ್ಮನು ಏನನ್ನುವರೋ ಎಂಬ ಭಯದಿಂದ, ಮೆಲ್ಲನೆ "ಇವತ್ತು ಮನೆಗೆ ಬರುವುದು ಏಕೆ ಹೊತ್ತಾಯಿತು? ಏನಾದರೂ ಕೆಲಸವಿತ್ತೇ ?" ಎಂದು ಕೇಳಿದರೆ "ನಾನು ಎಷ್ಟು ಹೊತ್ತಿಗಾದರೂ ಬರುತ್ತೇನೆ, ನಿನಗೇನು ?" ಎಂದು ಗರ್ಜಿಸುವರು. ಕೆಲವು ದಿನಗಳ ನಂತ

ಕ್ರಮೇಣ ಬಯ್ಯುವುದರ ಜೊತೆ ಹೊಡೆಯುವುದಕ್ಕೆ ಪ್ರಾರಂಭವಾಯಿತು. ಮನೆಯಲ್ಲಿದ್ದ ಬೆಳ್ಳಿ ಬಂಗಾರದ ಸಾಮಾನೆಲ್ಲಾ ಒಂದೊಂದಾಗಿ ಮಾಯವಾಗ ತೊಡಗಿದವು.

"ಒಂದು ದಿನ ಸಾಯಂಕಾಲ ಸುಮಾರು ಏಳು ಗಂಟೆಯ ಸಮಯ. ಸೀತಮ್ಮನು ಅವತ್ತು ಬೇಗ ಬಂದರಲ್ಲಾ ಎಂಬ ಸಂತೋಷದಿಂದ ನಗು ನಗುತ್ತಾ ಮಾತನಾಡಿಸಲು, ರಾಮರಾಯರು ಎಂದಿನಂತೆ ಗದರಿಸಿಕೊಂಡು, ಕೈಯ್ಯಲ್ಲಿರುವ ಬಂಗಾರದ ಬಳೆಯನ್ನು ಕೊಡೆಂದು ಕೇಳಿದರು. ಸೀತಮ್ಮನು ಅವತ್ತು ಗ್ರಹಚಾರ ಕಡಿಮೆಯಾಗಿ "ಮನೆಯಲ್ಲಿದ್ದ ಎಲ್ಲಾ ಸಾಮಾನುಗಳೂ ಹೋದುವು. ಇದೊಂದಾದರೂ ಇರಲಿ. ಇದೂ ಬೇಕಾಗಿದ್ದರೆ ನಾಳೆ ಬೆಳಿಗ್ಗೆ ತೆಗೆದುಕೊಡುತ್ತೇನೆ. ಸಂಜೆಯ ಹೊತ್ತಿನಲ್ಲಿ ಬಳೆಯನ್ನು ತೆಗೆಯಬಾರದು. ಇನ್ನೊಂದು ಮಾತು. ಶ್ರೀನಿವಾಸರಾಯರು ನಿಮ್ಮ ನಡತೆಯ ವಿಚಾರವಾಗಿ ಏನೋ ಹೇಳಿದರು. ನಿಜವೇ?............" ಎನ್ನುತ್ತಿದ್ದಂತೆಯೇ ರಾಯರಿಗೆ ಕೋಪವು ನೆತ್ತಿಗೇರಿ ಸೀತಮ್ಮನ ಕೈಯ್ಯಲ್ಲಿದ್ದ ಬಳೆಗಳನ್ನು ಎಳೆದುಕೊಂಡು ಚೆನ್ನಾಗಿ ಹೊಡೆದು ಹೊರಟುಹೋದರು. ಸೀತಮ್ಮನಿಗೆ ಪ್ರಜ್ಞೆ ತಪ್ಪಿತು. ಎಷ್ಟೋ ಹೊತ್ತಿನ ಮೇಲೆ ಗಟ್ಟಿಯಾಗಿ ನಗುತ್ತಾ, ಚೀರುತ್ತಾ ಎಚ್ಚೆತ್ತಳು. ಅಂದಿನಿಂದ ಒಂದೇ ಮಾತು: 'ನನ್ನನ್ನು ಬಿಟ್ಟು ಹೋಗಬೇಡಿ. ನಿಮಗೆ ಇಷ್ಟ ಬಂದಂತೆ ನೀವಿರಿ.' ಅಂದಿನಿಂದ ಹುಚ್ಚು ಹಿಡಿಯಿತು. ತನ್ನ ಗಂಡನ ಇರವನ್ನು ಹಕ್ಕಿ ಪಕ್ಕಿಗಳನ್ನು ಕೇಳುವಳು. ಗಿಡಮರಗಳನ್ನು ಕೇಳುವಳು. ಭೂಮಿಯಲ್ಲಿ ಎಲ್ಲಿ ಬಿರುಕು ಬಿಟ್ಟಿದ್ದರೂ ಅಲ್ಲಿ ಹುಡುಕುವಳು. ಅವೊತ್ತು ಹೋದವನು ಇಂದಿಗೂ ಪತ್ತೆಯೇ ಇಲ್ಲ ಆಸಾಮಿ." ಎಂದು ಹೇಳಿ ಮುಗಿಸಿದನು.

ಇಷ್ಟು ಹೇಳುವುದರೊಳಗೆ ಗುಂಪಿನಲ್ಲಿ ದೊಡ್ಡ ಗೊಂದಲವೆದ್ದಿತು. ರಾಮಚಂದ್ರನು ಓಡಿಬಂದು ನೋಡಲು, ಹುಚ್ಚಿಯು ನೆಲದಮೇಲೆ ಬಿದ್ದಿರುವಳು. ಪಕ್ಕದಲ್ಲಿ ಒಬ್ಬ ವ್ಯಕ್ತಿಯು ಕುಳಿತುಕೊಂಡು ಗೋಳಿಡುತ್ತಿರುವನು. ರಾಮಚಂದ್ರನಿಗೆ ಕಥೆ ಹೇಳಿದ ವೆಂಕಟೇಶನು ಓಡಿಹೋಗಿ "ಯಾವಾಗ್ಬಂದೆ ರಾಮು? ಇದೇನು ನಿನ್ನ ಅವಸ್ಥೆ?" ಎಂದು ಕೇಳಿದ. ಆತನು ತಲೆಯನ್ನು ತಗ್ಗಿಸಿಕೊಂಡೇ "ನನ್ನ ಕಥೆಯನ್ನು ಏನೆಂದು ಹೇಳಲಪ್ಪಾ, ಪಡಬಾರದ ಪಾಡನ್ನು ಪಟ್ಟು ಬಂದೆ. ಇಲ್ಲಿಂದ ಬೊಂಬಾಯಿಗೆ ಹೋದೆ. ಅಲ್ಲಿ ವ್ಹಿಸ್ಕಿ,

ಪರೆಲಾ, ಜೂಜು ಎಲ್ಲಾ ತರಹದ ಚಾಳಿಗಳೂ ಒಂದರಹಿಂದೊಂದು ಗಂಟು ಬಿದ್ದವು. ಹತ್ತಿರಿದ್ದ ಕಾಸೆಲ್ಲಾ ಖರ್ಚಾಯಿತು. ಕದಿಯಲು ಪ್ರಾರಂಭಿಸಿದೆ. ಕದ್ದು ತಂದ ಹಣವೆಲ್ಲ ಪೂರೈಸಿತು. ಪೋಲೀಸಿನವರೆಲ್ಲರ ಕಣ್ಣೂ ನನ್ನ ಮೇಲೆ ಇತ್ತು. ಕೈ ಬರಿಯದಾದಮೇಲೆ ಎಲ್ಲರೂ ನನ್ನ ಕೈಬಿಟ್ಟರು. ಮನೆಯವನು ಮನೆಬಿಟ್ಟು ಓಡಿಸಿದ. ಬೀದಿಯಲ್ಲಿಯ ಎಂಜಲನ್ನು ತಿಂದು ಬದುಕಿರಲು ಪ್ರಯತ್ನಪಟ್ಟೆ. ಒಂದು ದಿವಸ ಇದ್ದಕ್ಕಿದ್ದಂತೆ ನನ್ನ ಸೀತನ ಜ್ಞಾಪಕ ಬಂದಿತು. ಹತ್ತಿರ ಕಾಸಿಲ್ಲ. ಕೊನೆಯಸಾರಿ ನನ್ನ ಸೀತನಿಗೋಸ್ಕರವೆಂದು ಬೀದಿಯಲ್ಲಿ ಆಡುತ್ತಿದ್ದ ಒಂದು ಮಗುವಿನ ಕತ್ತಿನ ಸರವನ್ನು ಕದ್ದು ಮಾರಿ ಈ ಊರು ಮುಟ್ಟಿದೆ. ಮನೆಗೆ ಹೋಗಿ ನೋಡಿದರೆ, ಅಲ್ಲಿ ವಾಸಿಸುತ್ತಿದ್ದ ಯಾರೋ ಒಬ್ಬರು ನನ್ನನ್ನು ತಿರುಕನೆಂದು ತಿಳಿದು ಬೈದು ಓಡಿಸಿದರು. ಅಲ್ಲಿಂದ ಯಾರಾದರೂ ಪರಿಚಯಸ್ಥರನ್ನು ವಿಚಾರಿಸಲು ಹೊರಟು, ಈ ಗುಂಪನ್ನು ಕಂಡು ಇಲ್ಲಿ ನಿಂತೆ. ನನಗೆ ಬೇಗ ಸೀತನ ಗುರುತು ಸಿಕ್ಕಲಿಲ್ಲ; ಸೀತನು ಮಾತ್ರ ನನ್ನನ್ನು ತಟ್ಟನೆ ಗುರುತಿಸಿದಳು. ಆದರೆ ಅಯ್ಯೋ ನಾನು ಕ್ಷಮಾಪಣೆ ಕೇಳುವುದರೊಳಗೆ....................... "

" ಕಾಲವು ಮಿಂಚಿಹೋಯಿತು. ಆದರೇನು? ನೀನು ಕೇಳುವುದರೊಳಗೆ ನಿನ್ನಲ್ಲೊಂದಾದಳು. "

ಇದೆಲ್ಲವನ್ನೂ ನೋಡಿ ಶಿವರಾಮನ ಕಣ್ಣುಗಳಲ್ಲಿ ನೀರೂರಿತು. ಅದನ್ನು ಕಂಡು ರಾಮಚಂದ್ರನು " ಇಲ್ಲಿ ನಿಲ್ಲುವುದು ಬೇಡ ಎಂದೆಯಲ್ಲ ನೋಡಿ ದೆಯಾ ? " ಎಂದ. ಶಿವರಾಮನು " ನೀನು ಹೇಳಿದ್ದು ನಿಜ ಕಣೋ. ಕಣ್ಣು ಬಿಟ್ಟುಕೊಂಡು ಹೋದರೆ ಲೋಕದಲ್ಲಿ ಕಲಿಯತಕ್ಕದ್ದು ಬಹಳವಿದೆ ಎಂಬುದು ಗೊತ್ತಾಗುತ್ತದೆ " ಎಂದನು.

ಶ್ರೀಮತಿ ವಸಂತಾದೇವಿ
ಬೆಂಗಳೂರು

# ಮಾತೃಹೃದಯ

ಕಿಟ್ಟನ ಜೀವಮಾನದಲ್ಲಿ ಆಶ್ಚರ್ಯದ ಪ್ರಥಮ ಅನುಭವವಾದುದು ರಾಜಿಯು ಅವನನ್ನು ಎಂದೂ ಇಲ್ಲದ ಪ್ರೀತಿಯಿಂದ ಇದಿರುಗೊಂಡಂದು. ಅವಳು ನಗುನಗುತ್ತ ಮೃದುನುಡಿಗಳಿಂದ 'ನಿನ್ನನ್ನೇ ಕಾಯುತ್ತಿದ್ದೆನೆಂದರೆ! ಯಾಕೆ, ಬಹಳ ಬಾಡಿ ಹೋಗಿರುವೆ?' ಎಂದು ಕೇಳಿದಾಗ, ಅವನಿಗೆ ಪ್ರಪಂಚವು ಪಂಚವರ್ಣದ ಒಂದು ಮಧುರ ದೃಶ್ಯದಂತಾಯಿತು. ದಿನವೂ ಅವನು ಮನೆಗೆ ಹಿಂತಿರುಗುವಾಗ ಅದೇ ಅವಸ್ಥೆಯಲ್ಲಿರುತ್ತಿದ್ದರೂ, ಅಂದಾದರೂ ರಾಜಿಗೆ ತನ್ನ ಸ್ಥಿತಿಯ ಅರಿವುಂಟಾಯಿತಲ್ಲ ಎಂಬ ಸಂತೋಷ ಅವನಿಗೆ. ಅವನು ತನ್ನ ಸಮಸ್ತ ವೇದನೆಗಳನ್ನು ಮರೆತು ಹಲ್ಲುಕಿರಿದನು. ಆದರೆ ಪ್ರತಿಯಾಗಿ ಏನು ಹೇಳಲೂ ಅವನಿಗೆ ತೋಚಲಿಲ್ಲ. ಧೈರ್ಯವೂ ಸಾಲದಿತ್ತೆಂದರೆ ತಪ್ಪಾಗದು. ರಾಜಿಯು ಮತ್ತೂ ನಗುತ್ತಲೇ ಹೇಳಿದಳು:

'ಹೋಗು, ಮುಖಕ್ಕೆ ನೀರು ಹಾಕಿಕೋ. ಬಿಸಿ ಗಂಜಿ ಮಾಡಿದ್ದೇನೆ. ಮೊದಲು ಉಣ್ಣುವೆಯಂತೆ.' ಕಿಟ್ಟನಿಗೆ ಸ್ವರ್ಗವು ಎರಡು ಬೆರಳ ಅಂತರದಲ್ಲಿ ಕಾಣಿಸಿತಾದರೂ ಮಾತಾಡದೆ ಬಚ್ಚಲಿಗೆ ಹೋಗಿ ಕೈಕಾಲು ತೊಳೆದುಕೊಂಡು ಬಂದನು. ಅಷ್ಟರಲ್ಲಿ ರಾಜಿಯು ಮಣೆಯಿಟ್ಟು, ಗಂಜಿಯನ್ನು ಬಟ್ಟಲಲ್ಲಿ ಆರ ಹಾಕಿದ್ದಳು. ಅವನು ನೇರವಾಗಿ ಮಣೆಯಲ್ಲಿ ಕುಳಿತನು. ಬಿಸಿ ಗಂಜಿಯನ್ನು ನೋಡದೆ ಎಷ್ಟು ದಿನಗಳಾಗಿದ್ದವೊ!

'ಉಪ್ಪಿನಕಾಯಿ ನೋಡಿದೆಯ? ಮೆಂತೆ ಕಾಯಿಯದು' ಎಂದಳು ರಾಜಿ. ಕಿಟ್ಟನು ಸ್ವಲ್ಪ ಧೈರ್ಯತಂದು, 'ಇದೆಲ್ಲ ಹೇಗಾಯಿತು ರಾಜಿ?' ಎಂದು ಕೇಳಿದಾಗ ರಾಜಿಯು ಬದಿಯಲ್ಲಿ ಮಲಗಿಸಿಟ್ಟಿದ್ದ ಕೈಗೂಸನ್ನು ನೋಡಿ 'ಎಲ್ಲ ಅವನ ಭಾಗ್ಯ. ಮತ್ತೆಲ್ಲ ಹೇಳುತ್ತೇನೆ. ಹೊಟ್ಟೆತುಂಬ ಉಣ್ಣು' ಎಂದಳು. ಕಿಟ್ಟನಿಗೆ ಮತ್ತೆ ಏನನ್ನೋ ಕೇಳಬೇಕೆಂದಿದ್ದರೂ ಆ ಆಸೆಯನ್ನು ಬಿಗಿಹಿಡಿದು, ಎಡಗೈಯಿಂದ ತಲೆಯನ್ನು ಒತ್ತಿಕೊಂಡಂತೆ, ಊಟದ ಶಾಸ್ತ್ರ ಮುಗಿಸಿದನು.

ರಾಜಿಯು ಕಿಟ್ಟನ ಹೆಂಡತಿ. ಸ್ವಭಾವತಃ ರಾಜಿ ಒಳ್ಳೆಯವ ಳಾದರೂ ಬಡತನವು ಅವಳನ್ನು ಸ್ವಲ್ಪ ಸಿಡುಕುಗಾತಿಯನ್ನಾಗಿ ಮಾಡಿತ್ತು. ಇನ್ನೂ ಎಳೆಪ್ರಾಯ. ಸುಖದಿಂದಿರಬೇಕೆಂಬ ಬಯಕೆ. ತನ್ನ ಜತೆಗಾತಿಯ ರಾಗಿದ್ದವರೆಲ್ಲ ಹೊಟ್ಟೆತುಂಬ ಅನ್ನ, ಮೈತುಂಬ ವಸ್ತ್ರದಿಂದಿರುವಾಗ ತನ್ನ ಸ್ಥಿತಿಯು ಇದ್ದೂ ಇದ್ದೂ ಹೀಗಿರಬೇಕೆ?–ಎಂದು ಚಿಂತಿಸಿದಾಗಲೆಲ್ಲ ಅವಳಿಗೆ ಕಿಟ್ಟನ ಮೇಲೆಯೇ ರೇಗುತ್ತಿತ್ತು. ಅವನೇನೋ ದುಡಿಯುತ್ತಾನೆ ಆವರದು ಮೂರುಹೊತ್ತಿನ ತುತ್ತಿಗೆ ಮುಗಿದು ಹೋಗುತಿತ್ತು. ಮದುವೆಯ ಕಾಲದಲ್ಲಿ ತೆಗೆದ ಎರಡು ಸೀರೆಗಳ ಹೊರತು, ಬೇರೆ ಹೊಸ ಚಿಂದಿಯೊಂದನ್ನು ಕೂಡ ಆವಳು ಕಂಡವಳಲ್ಲ. ಅವಳ ಮದುವೆಯಾಗಿ ವರ್ಷಗಳೆರಡು ಸಂದಿದ್ದವು. ಈ ಅವಧಿಯಲ್ಲಿ ಹೊಸತೆಂದು ಒಂದು ವಸ್ತುವನ್ನವಳು ಕಂಡುದೆಂದರೆ ಅದೇ ಒಂದು.—ಅವಳ ಕೂಸು ! ಅದು ಹುಟ್ಟಿದ ಮೇಲಂತೂ ಅವಳು ತೀರ ಉರಿ ಮಾರಿಯಾಗಿ ಬಿಟ್ಟಳು. ಬೇರೆಯವರ ಗಂಡಂದಿರು ಹೇಗೆ ಹಣ ಸಂಪಾದಿ ಸುತ್ತಾರೆಂಬುದು ಆವಳಿಗೊಂದು ಸಮಸ್ಯೆಯಾಗಿತ್ತು.

ಕಿಟ್ಟನೊಬ್ಬ ಸಾಧು ಪ್ರಾಣಿ. ಹತ್ತಾರು ವಿಧಗಳಿಂದ ಹಣ ಗಳಿಸಿ ಹೆಂಡತಿಯ ಮನವೊಲಿಸಲು ಸಾಧ್ಯವಿಲ್ಲದಿತ್ತು ಅವನಲ್ಲಿ. ಇದ್ದರೂ, ಅಕ್ರಮದ ಕೆಲಸಗಳಿಗೆ ಕೈಹಾಕಲೂ ಅವನಿಗೆ ಒಗ್ಗುತ್ತಿರಲಿಲ್ಲ. ಹಿಂದೆ ಅವನು ಕೆಲಸ ಮಾಡುತ್ತಿದ್ದಲ್ಲಿಯ ಒಡೆಯರೊಮ್ಮೆ ನೂರಾರು ರೂಪಾಯಿಗಳ ಆಸೆ ತೋರಿ ಸಿದ್ದರು. ಮರುದಿನದಿಂದಲೇ ಯಾಕೋ ಅವನು ಅವರ ಮನೆಯ ಮೆಟ್ಟಲನ್ನೇ ಹತ್ತಿರಲಿಲ್ಲ. ಮೈಮುರಿದು ಸತ್ಯಕ್ಕೆ ಕಟ್ಟುಬಿದ್ದು ಪಡೆಯುವ ಅಲ್ಪ ಪುರಸ್ಕಾರ ದಿಂದ, ಅತೃಪ್ತಿಗೊಂಡ ರಾಜಿಯೊಡನೆ ಹೇಗೂ ಬಾಳುವೆ ಮಾಡುತಿದ್ದನು. ರಾಜಿಯು ಅವನನ್ನು ನಿತ್ಯವೂ ತೆಗಳುತಿದ್ದಳು. ' ನೋಡು, ಆ ಸುಬ್ಬ, ಹೆಂಡತಿಗೆ ಒಂದು ಜತೆ ಬುಗುಡಿ ಹೇಗೆ ಮಾಡಿಸಿ ಹಾಕಿದ್ದಾನೆ ? ಆ ಸೀನ, ಮೊನ್ನೆ ಆರು ರೂಪಾಯಿಯ ಹೊಸಸೀರೆ ರಾಮುಗೆ ತೆಗೆಸಿ ಕೊಟ್ಟಿದ್ದಾನೆ. ನಿನ್ನನ್ನು ಕಟ್ಟಿಕೊಂಡು, ನಾನು ಸಾಯಬಾರದಿತ್ತೆ ? ಎಂದಾಗ ರಾಜಿಯನ್ನು ಕಣ್ಣುತುಂಬ ನೋಡಿ ಅವನು ಆತ್ಮದಲ್ಲಿ ಸಂತೋಷ ಹೊಂದುತ್ತಿದ್ದನು. ಆ ಸ್ತ್ರೀಯರಿಗೆ ಆ ವಸ್ತುಗಳು ಸಿಕ್ಕ ಬಗೆ ಕಿಟ್ಟನಿಗೆ ತಿಳಿದಿದ್ದುದರಿಂದಲೇ ಅಂತಹ ವಸ್ತುಗಳು ರಾಜಿಗಿಲ್ಲದಿದ್ದುದರಿಂದವನು ಆಕೆಯ ಬಿರುನುಡಿಗಳಿಗೆ

ಮೌನದಿಂದಿದ್ದು ಆತ್ಮಶಾಂತಿಯನ್ನನುಭವಿಸುತಿದ್ದನು. ಆದರೆ, ಆ ಸ್ತ್ರೀಯರ ವಿಷಯ ಆಕೆಗೆ ತಿಳಿಸಲು ಅವನಿಗೆ ಭಯ. ಅತೀತಳಲ್ಲದಿದ್ದರೂ ರಾಜಿಯು ಸುಂದರಿಯೇ ಆಗಿದ್ದಳು. ರಾಜಿಯ ಮೇಲೆ ಅವನಿಗೆ ಎಲ್ಲೆ ಇಲ್ಲದ ಪ್ರೀತಿ. ಸಿಡಕುಸ್ವಭಾವವೊಂದು ಬಿಟ್ಟರೆ ಅವಳು ನಿರ್ಮಲ ಜಲವಂತಿದ್ದಳು ಆ ಸ್ವಭಾವಕ್ಕಾದರೂ ತನ್ನ ದುರದೃಷ್ಟವೇ ಕಾರಣವೆಂದವನು ಸುಮ್ಮಗಿದ್ದನು. 'ಆ ಸೀನ, ಸುಬ್ಬ ಮೊದಲಾದವರಂತೆ ನನ್ನ ಮನಸ್ಸೂ ಇರಬಾರದಿತ್ತೆ ? ಎಂದವನು ಚಿಂತಿಸಿ, ಅವರ ಸ್ಥಿತಿಯನ್ನು ಅಂತಃಪಟದಲ್ಲಿ ಚಿತ್ರಿಸಿದಾಗ, ಗಾಬರಿಬಿದ್ದು, ' ಬೇಡಪ್ಪಾ, ಅದಕ್ಕಿಂತ ರಾಜಿಯ ಉರಿಮಾತುಗಳೇ ಪಥ್ಯ ಎಂದು ಸಮಾಧಾನಗೊಳ್ಳುವನು.

ಅಂದು ಊಟ ಮುಗಿಯುತ್ತಲೆ ಅವನು ಜಗಲಿಯಲ್ಲಿ ಕುಳಿತು ಒಣಗು ವೀಳೆಯದೆಲೆಯ ಚೂರಿಗೆ ಸುಣ್ಣಹಚ್ಚುತ್ತಿರುವಾಗ, ರಾಜಿಯು, ಇದೋ, ಇಲ್ಲಿದೆ ಹೊಸ ವೀಳೆಯದೆಲೆಯ ಸೂಡಿ, ಎಂದು ಕಟ್ಟು ವೀಳೆಯದೆಲೆಯನ್ನು ಅವನಿಗೆ ಕೊಟ್ಟು ಬಳಿಯಲ್ಲೇ ಕುಳಿತಾಗ ಕಿಟ್ಟನ ಆಶ್ಚರ್ಯಕ್ಕೆ ಅಂತ್ಯವಿಲ್ಲ ದಾಯಿತು. ಆದರೆ, ಅವನು ಹೊಸ ಎಲೆಯನ್ನು ತೆಗೆಯದೆ ಆ ಒಣಗಿದ ಚೂರನ್ನು ಬಾಯಿಗೆ ಹಾಕಿಕೊಂಡನು. ರಾಜಿ ಸಿಟ್ಟನಿಂದ ಅಂಗಳಕ್ಕೆ ಉಗುಳಿ, ನಿನ್ನ ಹಣೆಯಬರೆಹವೇ ಅಷ್ಟು, ಎಂದು ಹಳಿದಳು.

ಕಿಟ್ಟನು ಸಂಶಯ ದೃಷ್ಟಿಯಿಂದ ಅವಳನ್ನು ನೋಡುತ್ತಾ ನಿಟ್ಟುಸಿರು ಗರೆದು, ' ರಾಜಿ, ಸಿಟ್ಟುಮಾಡಬೇಡ. ನನ್ನ ಯಾವ ರೀತಿಗಳೂ ನಿನಗೆ ಆಗುತಿಲ್ಲವಾದರೆ ಹಾಗಾದರೂ ಹೇಳಿ ಬಿಡಪ್ಪಾ. ನಾನು ಕಣ್ಣುಕಾಣದ ದೇಶಕ್ಕೆ ಎಲ್ಲಾದರೂ ಓಡಿ ಹೋಗುತ್ತೇನೆ. ಯಾವಾಗ ನೋಡಿದರೂ ನಿನಗೆ ನನ್ನಲ್ಲಿ ಸಿಟ್ಟೇಸಿಟ್ಟು. ' ಎಂದನು. ರಾಜಿ ಸ್ವಲ್ಪ ಹೊತ್ತು ಸುಮ್ಮಗಿದ್ದಳು. ಅವಳ ಮನಸ್ಸು ಬಿಸಿ ತಾಗಿದ ಬೆಣ್ಣೆಯಂತಾಯಿತು. ಅದೇಕೋ ಕಣ್ಣುಗಳು ಹನಿದವು. ' ಹಾಗಲ್ಲ, ಕಿಟ್ಟ. ಎಲ್ಲರಂತೆ ನಾವೂ ಎರಡು ದಿನ — ನಮ್ಮ ಪ್ರಾಯಕಾಲದಲ್ಲಾದರೂ ಯಾಕೆ ಸುಖದಿಂದಿರಬಾರದು ? ಹುಚ್ಚುಗಟ್ಟಿ ಎಲ್ಲಾದರೂ ಓಡಿಗೀಡಿ ಹೋದಿಯ ! ಮತ್ತೆ ನನಗಾರು ಗತಿ ? ನಾನು ಪ್ರಾಣ ಗಳನ್ನಿಟ್ಟುಕೊಂಡು ಬದುಕಿಯೇನೆಂದು ನೀನು ನಂಬುತ್ತೀಯಾ ? ಇದೆಲ್ಲ ನನಗೊಬ್ಬಳಿಗಾಗಿ ಅಲ್ಲ ಕಿಟ್ಟ. ನಾವಿಬ್ಬರೂ ಆದಷ್ಟುಮಟ್ಟಿಗೆ ಉಂಡು ತಿಂದು

ನಾಲ್ಕು ದಿನ ಸೌಖ್ಯದಲ್ಲಿರುವುದಕ್ಕೆ ನಿನ್ನ ಅಡ್ಡಿಯೇನು ? ತೀರ ಆಲೋಚನೆ ಮಾಡು. ಬಿಸಿಗಂಜಿ ! ಎಷ್ಟು ರುಚಿ ಊಟಕ್ಕೆ ! ಬೆಚ್ಚಗಿನ ಹಾಸುಗೆ — ಎಷ್ಟು ಸುಖ ಮಲಗಲಿಕ್ಕೆ ! ಮೈತುಂಬ ಬಟ್ಟೆಗಳು – ಆನಂದ, ಆನಂದ ! ನೋಡು ಕಿಟ್ಟ, ಇದೆಲ್ಲ ನಿನ್ನ ಸಮ್ಮತಿದೊರಕಿದರೆ ಮಾತ್ರ........ರಾಜಿ ರಾಗ ವೆಳೆದು ಮಾತನ್ನು ನಿಲ್ಲಿಸಿದಳು. ಕಿಟ್ಟನಿಗೆ ಸಹಸ್ರಾರು ಈಟಿಗಳಿಂದ ಎದೆಗೆ ಚುಚ್ಚಿದಂತಾಯಿತು. 'ಕೊನೆಗೆ ನನ್ನ ರಾಜಿಗೂ ಆ ಬುದ್ಧಿ ಬರಬೇಕೆ ? ಅಹ, ಬಡತನವೆ ! ಆಸೆಯ ಆವೇಗವೆ !' ಎಂದಂದುಕೊಂಡನವನು ಮನಸ್ಸಿನಲ್ಲಿ. ತಲೆತಗ್ಗಿಸಿ ಕುಳಿತನಲ್ಲದೆ ಮಾತೆತ್ತಲಿಲ್ಲ.

"ಏನು ಯೋಚಿಸುತ್ತಿರುವೆ ? 'ಆಯಿತು' ಎಂದು ಹೇಳು. ವಿಷಯ ಹೇಳುತ್ತೇನೆ. ಅದರಿಂದ ಒಂದೆರಡು ಪ್ರಯೋಜನವಿದೆಯೆಂದು ನಾನು ಹೇಳಲಾರೆ. ನೀನೇ ಯೋಚಿಸಿ ಆ ಮೇಲೆ ಹೇಳುವಿಯಂತೆ." ರಾಜಿಯೇ ಮಾತಾಡಿದಳು. ಕಿಟ್ಟನ ಮೆದುಳು ಒತ್ತಡವನ್ನು ಬಿಡುತ್ತಿರುವ ಸ್ಪ್ರಿಂಗಿನಂತಾಯಿತು. "ನಿನ್ನ ಮನಸ್ಸು " ಅವನೆಂದನು.

"ಇಸ್ಸೀ, ನೀನೊಬ್ಬ ಮನುಷ್ಯನೇ ಅಲ್ಲ. ವಿಷಯವೇನೆಂದು ಕೇಳಿದೆಯ ನೀನು ?" ಬೇಸರದಿಂದ ಕೇಳಿದಳು ರಾಜಿ.

"ನನಗೆಲ್ಲ ಗೊತ್ತಾಯಿತು ರಾಜಿ. ನಿನ್ನ ಬಾಯಿಂದದನ್ನು ಕೇಳಲೇಕೆ?" ದುಃಖದಿಂದವನು ನುಡಿದನು.

"ನನ್ನ ಬುದ್ಧಿಗೆ ಕೊಡಬೇಕು ಯಾತರಿಂದ ಗೊತ್ತೆ ? ಏನೋ, ಗುರಿಕಾರನೆಂದು ನಿನ್ನಲ್ಲಿ ಹೇಳಿದರೆ ಬಿಗುಮಾಡುತ್ತಿದ್ದೀಯ. ಗೊತ್ತಾಯಿತಂತೆ ಅಮಟೆಕಾಯಿ" ಹೇಸಿದ ಮನದಿಂದ ರಾಜಿ ನುಡಿದಳು.

ಕಿಟ್ಟ ನಿಟ್ಟುಸುರಿದನು. "ನಾನು ಹೇಳಿದ ಹಾಗೆಯೇ ನೀನು ಕೇಳುತ್ತೀಯೆಂದು ನಿನ್ನ ಮನಸ್ಸಿನಲ್ಲಿದ್ದರೆ, ನನ್ನಲ್ಲಿ ಕೇಳಿಯೇ ಬಿಸಿ ಗಂಜಿ ಬೇಯಿಸುತಿದ್ದೆ. ವೀಳೆಯದೆಲಿಯನ್ನು ತೆಗೆದುಕೊಳ್ಳುತಿದ್ದೆ. ಎಲ್ಲಾ ತಹವಾದ ಮೇಲೆ ನನ್ನಲ್ಲಿ ಯಾಕದನ್ನು ಹೇಳಬೇಕು ?" ಅವನೆಂದನು. ರಾಜಿಗೆ ಸಿಟ್ಟು ನೆತ್ತಿಗೇರಿತು. ಅವಳೆಂದಳು: "ಯಾರಾದರೂ ಧರ್ಮಾತ್ಮರು ಬಡವರೆಂದ್ಕ ಅನುಗ್ರಹಮಾಡಿದರೆ ಅದನ್ನು ಪಡೆದುಕೊಳ್ಳಲಿಕ್ಕೆ ನಿನ್ನ ಅಪ್ಪಣೆಯೆ ? ಬಿಸಿ

ಗಂಜಿ ಹಾಕುವ ಯೋಗ್ಯತೆಯಿಲ್ಲದ ನಿನಗೆ ನಾನು ಬೇಯಿಸಿ ಹಾಕಿದರೂ ಸಹನೆ ಯಿಲ್ಲ, ಅಲ್ಲವೆ ? "

" ಅದೇನಪ್ಪಾ," ತುಸು ಯೋಚಿಸಿ ಕಿಟ್ಟನೊಂದು ತೀರ್ಮಾನಕ್ಕೆ ಬಂದನು. " ಅದೇನಪ್ಪಾ ಹೇಳು. ಆ ವಿಷಯವಾದರೂ ಏನು ? ನಿನ್ನ ಆತ್ಮ ಸಂತೋಷಕ್ಕೆ ನಾನೇಕೆ ಅಡ್ಡಿ ಬಂದು ಪಾಪ ಕಟ್ಟಿಕೊಳ್ಳಲಿ ? " ಎಂದನವನು ಕದಡಿದ ಮನದಿಂದ.

" ಹಾಗೆ ಬಾ—ದಾರಿಗೆ " ರಾಜಿಯು ನುಡಿದಳು. ಅನಂತರ ಸಮಾಧಾನ ತಂದುಕೊಳ್ಳುತ್ತ, " ನೋಡು, ನಿನ್ನೆಯ ತಂಗಳು ಬೆಳಿಗ್ಗೆಗೇ ಮುಗಿದಿತ್ತು. ನೀನು ಬರುವುದು ಸಾಯಂಕಾಲವಾಗುತ್ತದಲ್ಲ—ನಾನು ನಿಶ್ಚಯಿಸಿದಂತೆ ಬರೇ ಕೈಯಲ್ಲೇ ಬಂದಿರುವೆ.—ರಾತ್ರಿಯೂಟಕ್ಕೆ ಏನು ಮಾಡುವುದು ಎಂದು ಯೋಚಿಸುತ್ತಲೇ ಇದ್ದೆ. ಕೊನೆಗೆ, ಹಸಿವೆಯ ಮುಂದೆ ಮರ್ಯಾದೆಯೇ, ಎಂದು ಮಗುವನ್ನು ಹಿಡಕೊಂಡು ಆ ಹೊಸ ಮನೆಗೆ ಹೋದೆ. ಆ ಅಮ್ಮ ಒಳ್ಳೆಯವರೆಂದು ಕೇಳಿದ್ದೆ. ನಿಜವಾಗಿಯೂ ಒಳ್ಳೆಯವರೆ ! ನಮ್ಮ ಮಗುವಿನ ಮೇಲೆ ಏನು ಖುಶಿ ಬಿಟ್ಟರು ಎನ್ನುತ್ತೀ....ಏನು ಮಾತು ಅವರದು ! ಜಾತಿ ಯಾವುದಾದರೇನು ? ಗುಣ ಮುಖ್ಯ. ಆಹಾ, ಎಂಥಾ ದಯಾರ್ದ್ರ ಹೃದಯ ! ಅವರ ದಯೆಯಿಂದ ನೀನೀಗ ಬಿಸಿ ಗಂಜಿ ಉಂಡೆ. ನಮ್ಮ ಕಷ್ಟ ಸುಖ ಕೇಳಿ, ಸೇರು ಅಕ್ಕಿ, ಸ್ವಲ್ಪ ಉಪ್ಪಿನಕಾಯಿ, ಮಗುವಿಗೆ ಹಾಲಿಗೆಂದು ನಾಲ್ಕಾಣೆ ಕಾಸು ಕೈಗಿಟ್ಟರು ನೋಡು. ಬರುತ್ತಾ ನಿನಗೆಂದು ಎಲೆಕಟ್ಟು ತಂದರೆ, ನೀನು ಮುಟ್ಟಲೇ ಇಲ್ಲ. ನನಗೆ ನಿನ್ನಲ್ಲಿ ಪ್ರೀತಿಯಿಲ್ಲವೆಂದಿರುವೆಯಾ ? "

ಕೇಳುತ್ತಿದ್ದಂತೆ ಕಿಟ್ಟನಿಗೆ ಗಂಟಲು ಬಿಗಿದು ಬಂತು. ಯಾವುದೋ ಅನರ್ಥ ಕಲ್ಪನೆಗಳನ್ನು ಚಿತ್ರಿಸಿಕೊಂಡಿದ್ದನವನು ಮನಸ್ಸಿನಲ್ಲಿ. ಆದರೆ, ಹಾಗೇನೂ ಇರದೆ, ತಾನು ಪರರಲ್ಲಿ ಬೇಡಿ ತಂದುದಕ್ಕಾಗಿ ಅವಳು ಪೀಠಿಕೆ ಹಾಕಿದುದೆಂದು ತಿಳಿದಾಗ, ಯಾವ ಪತಿಗೆ ದುಃಖವೆನಿಸಲಿಕ್ಕಿಲ್ಲ ? ಅದೂ ಕೂಡ, ಕೇವಲ ತಾನು ಹಸಿದು ಬರುವಾಗ ಒಂದು ತುತ್ತುಗಂಜಿ ಹಾಕಲಿಕ್ಕಾಗಿ, ಪರರೆದುರಿಗೆ ಅಂಗಲಾಚಿದವಳ ಮೇಲೆ ಎಂತಹ ಭಯಂಕರ ಪಾಪವನ್ನು ಕಲ್ಪಿಸಿದ್ದನವನು ! ಆದರೂ ಒಂದು ಸಂದೇಹವಾಯಿತವನಿಗೆ. ಸುಖವು ತಮ್ಮನ್ನು ಕಾದಿದೆಯೆಂದೇನೇನೆಲ್ಲ ಹೇಳಿ ತನ್ನ ಸಮ್ಮತಿಯನ್ನು ಕೇಳಿದಳಲ್ಲ.

ಅದೇಕಿರಬಹುದು ? ಅವನು ರಾಜಿಯ ಕೈಯನ್ನು ತನ್ನ ಕೈಗೆ ಸೇರಿಸಿ ಬಲವಾಗಿ ಅದುಮಿ ಹಿಡಿದನು. ಮದುವೆಯ ನಂತರ ಎರಡನೆಯ ಬಾರಿಯಾಗಿ ಆ ಧೈರ್ಯವು ಅವನಿಗಿಂದು ಬಂದಿತ್ತು. "ನನ್ನ ಕೈಹಿಡಿದು ನೀನು ಸುಖಪಡಲಿಲ್ಲ ರಾಜಿ. ಅದು ನನಗೆ ಗೊತ್ತು. ಆದರೆ ನಾನೇನು ಮಾಡಲಿ ? ಎಲ್ಲರೂ ಭಾಗ್ಯವಂತರಾಗುವುದು ಸಾಧ್ಯವೆ ? 'ಯಾರ ಮನೆಗಾದರೂ ಯಾಕೆ ಕೆಲಸಕ್ಕೆ ನಿಲ್ಲುವುದಿಲ್ಲ' ವೆಂದು ನೀನು ನನಗೆ ಕೇಳಬಹುದು. ಅದಕ್ಕೆ ಕಾರಣವಿಲ್ಲದಿಲ್ಲ ರಾಜಿ. ಎಂಥಾ ಹಂಗಿನ ಬಾಳುವೆಯದು ! ಹಿಂದೊಬ್ಬರಲ್ಲಿದ್ದು, ನನಗೆ ಸಾಕಾಗಿ ಹೋಯಿತು. ಉಪವಾಸ ಬಿದ್ದರೂ ಚಿಂತಿಲ್ಲ—ದಿನಕೂಲಿ ಮೇಲೆಂದು ಒದ್ದಾಡುತಿದ್ದೇನೆ. ಕಾಲ ಒಂದೇ ರೀತಿ ಇರದು ರಾಜಿ. ದೇವರು ಒಳ್ಳೇ ದಾರಿ ತೋರಿಸಿಯಾನು. ಜನರಲ್ಲಲ್ಲದಿದ್ದರೂ ದೇವರ ಮುಂದೆ ನೀನು ಪುಣ್ಯವಂತೆ. ನಿನ್ನ ಗುಣ ಬಲು ಪವಿತ್ರ. ಇನ್ನು ಚಿಕ್ಕಪ್ರಾಯವಾದ್ದರಿಂದ ಕಷ್ಟಕ್ಕೆ ಮನಸ್ಸು ಒಗ್ಗುವುದಿಲ್ಲ. ಅದು ನನಗೆ ಗೊತ್ತು. ಅಂತೆಯೇ ನಿನ್ನ ಮಾತಿಗೆ ನಾನು ಏನೂ ಆಡದಿರುವುದು. ಮುಂದೆಯೂ ನೀನು ಹೀಗೆಯೇ ಇರಬೇಕೆಂದೇ ನನ್ನ ಬಯಕೆ. ರಾಜಿ, ನೀನು ನಡತೆಯಲ್ಲಿ ಬೇರೆಯಾಗಬಾರದು ಕಂಡೆಯಾ ?" ಕಿಟ್ಟನಿಂದ ಮುಂದೆ ಮಾತಾಡಲಾಗಲಿಲ್ಲ. ಹಿಡಿದಿದ್ದ ಅವಳ ಕೈಯನ್ನು ಎದೆಗೆ ಆನಿಸಿ ಒತ್ತಿದನು. ಬಿಸಿಯಾದೆರಡು ಜಲಬಿಂದುಗಳು ರಾಜಿಯ ಕೈಮೇಲೆ ಬೀಳಲು ಅವಳು ಗಾಬರಿಗೊಂಡು, "ಕಿಟ್ಟ, ಅಂಥಾದ್ದು ನಾನೇನು ಮಾಡಿದ್ದೇನೆ ? ನೀನೇಕೆ ದುಃಖಪಡಬೇಕು ! ನಾನು ನಿನಗೆ ಕೆಟ್ಟುದನ್ನು ಸ್ವಪ್ನದಲ್ಲಿ ಎಣಿಸಿಲ್ಲವಲ್ಲಪ್ಪ !" ಎಂದಳು.

ಕಿಟ್ಟನು ಕಣ್ಣೀರೊರಸುತ್ತ ನುಡಿದನು: "ಮತ್ತೆ ನೀನೇತಕ್ಕೋ ನನ್ನ ಅನುಮತಿ ಬೇಕೆಂದೆಯಲ್ಲ— ಅದು ಯಾಕೆ ?"

"ನಿನಗದರಿಂದ ಕಷ್ಟವಾಗುವುದಾದರೆ ಸಾಯಲಿ ಬಿಡು. ನಾನು ಹುಟ್ಟುವಾಗ ಬೇಡಿಕೊಂಡು ಬಂದದ್ದು. ನನಗೇನು ಹೇಳು. ನಮ್ಮೊಟ್ಟಿಗಿದ್ದು ಅದು ಏನು ಸುಖ ಕಾಣುತ್ತಾ ಇದೆ—ಗೊತ್ತೇಯಿದೆ. ಒಂದು ದಿನ, ಪೋಷಣೆ ಸಾಲದೆ ಕಣ್ಣು ಮುಚ್ಚುತ್ತದೆ." ರಾಜಿಯು ಅಲ್ಲಿಂದೆದ್ದಳು.

"ಪದ, ಅರ್ಥ, ತಾಳ—ಎಲ್ಲ ನಿನ್ನೊಳಗಾದರೆ ನಾನೇನೆನ್ನಲಿ ? ನಿಜವಾಗಿಯೂ ನಿನ್ನ ಮಾತಿನ ಅರ್ಥವೇನೆಂದು ನನಗೆ ಗೊತ್ತಾಗಲಿಲ್ಲ ರಾಜಿ. ಸ್ವಲ್ಪ ಬಿಡಿಸಿ ಹೇಳು." ಅವಳ ಹಿಂದೆಯೇ ಎದ್ದು ಅಂಗಲಾಚುತ್ತ ನಡೆದನವನು.

" ನೋಡು ಕಿಟ್ಟ." ರಾಜಿ ತಟ್ಟನೆ ತಿರುಗಿ ನಿಂತಳು. " ನಿನ್ನ ಮಗು, ಹಾಲಿನಲ್ಲೇ ಬೆಳೆದು, ಒಳ್ಳೊಳ್ಳೆ ಬಟ್ಟೆಗಳನ್ನು ಹಾಕಿಕೊಂಡು, ಹಿತ್ತಾಳೆ ತೊಟ್ಟಿಲಲ್ಲಿ ಬೆಚ್ಚಗೆ ಮಲಗುತ್ತಾ ರಾಜಕುಮಾರನಂತೆ ಸುಖಪಟ್ಟರೆ ನೀನು ಆಕ್ಷೇಪಿಸುವೆಯಾ ? "

ಸ್ವಲ್ಪ ಆಲೋಚಿಸಿ ಕಿಟ್ಟನೆಂದನು : " ಆದರೆ, ಅದೆಲ್ಲ ಆಗುವ ಬಗೆ ಹೇಗೆ ರಾಜಿ— ಮತ್ತು ಮತ್ತು ಒಗಟೆಗಳನ್ನೇ ಹಾಕುತ್ತಿರುವೆ. ನಿನಗಿಂದು ಆಗಿದೆಯಾದರೂ ಏನು ಹೇಳು ? "

ರಾಜಿಯು ನಿಧಾನಸ್ವರದಿಂದ ಹೇಳಿದಳು. " ಆ ಅಮ್ಮನವರೇ ಆ ಪ್ರಸ್ತಾಪವನ್ನು ಎತ್ತಿದರು. 'ಬಡತನದಲ್ಲಿ ಮಕ್ಕಳಿದ್ದರೆ ಕಷ್ಟ. ನೀನಿನ್ನೂ ಚಿಕ್ಕವಳು. ಇನ್ನೂ ಎಷ್ಟೋ ಮಕ್ಕಳನ್ನು ಹೆರತಕ್ಕವಳು. ನಿನ್ನ ಮಗುವನ್ನು ನನಗೆ ಕೊಟ್ಟುಬಿಡು; ಬದಲಿಗೆ ನಿನಗೆ ಕೈತುಂಬ ರೂಪಾಯಿಗಳನ್ನೂ ಎರಡು ಒಳ್ಳೇ ಸೀರೆಗಳನ್ನೂ ಮತ್ತು ತಪ್ಪದೆ ವರ್ಷಕ್ಕೆರಡು ಸೀರೆಗಳನ್ನೂ ಕೊಡುತ್ತೇನೆ' ಎಂದು ಹೇಳಿರುವರು. ರೂಪಾಯಿಗಳೇನೂ ಸ್ವಲ್ಪವಲ್ಲ ಕಿಟ್ಟ–ಇನ್ನೂರು ರೂಪಾಯಿಗಳು ! ನಮ್ಮ ಮಗು ಎಲ್ಲಾದರೂ ಬೆಳೆದರೆ ಸರಿ. ಅದಕ್ಕೂ ಸುಖ, ನಮಗೂ ಸುಖ, ಕಿಟ್ಟ ನೀನೇನು ಹೇಳುತ್ತಿ ? "

ಕಿಟ್ಟನಿಗೆ ಕಾಲಡಿಯ ಭೂಮಿ ಕುಸಿದು ಬಿದ್ದಂತಾಯಿತು. " ರಾಜಿ, ರಾಜಿ ! ಏನು ಹೇಳಿದೆ ? ಮಗನನ್ನು ಮಾರುವೆಯಾ ? " ಎನ್ನುತ್ತ ಒಳಗೋಡಿ ನಿದ್ರಿಸುತಿದ್ದ ಮಗುವನ್ನು ಎತ್ತಿಕೊಂಡು ಮುದ್ದಿಕ್ಕಿದನು. ರಾಜಿಯು ಉರಿದು ಬಿದ್ದಳು.

" ಮಗನ ಮೇಲಿನ ಪ್ರೀತಿ ನಿನಗೊಬ್ಬನಿಗೇ ಮಾರಿ ಹೋಗಿದೆಯೆ ? ಕೂಲಂಕಷ ವಿಚಾರವೇ ನಿನ್ನಲ್ಲಿಲ್ಲ. ಬರೇ ಯಾವುದರಂತೋ ಇರುವೆ. ನಾನು ಅವರಿಗೆ ಇವನನ್ನು ಕೊಟ್ಟುಬಿಡುವುದೇ ಸರಿ. ಹೊಟ್ಟೆಗಿಲ್ಲದೆ ಸಾಯುವುದಕ್ಕಿಂತ ಎಲ್ಲಾದರೂ ಜೀವದಲ್ಲಿರಬಿಟ್ಟರೆ ಪುಣ್ಯವಲ್ಲದೆ ಪಾಪವೇನೂ ನನಗೆ ಕಾಣುವುದಿಲ್ಲ. ನಾನವರಿಗೆ ಮಾರುತ್ತಿಲ್ಲ. ಸಂಪತ್ತು ಚೆಲ್ಲಾಡುತ್ತಿದೆ ಅವರಲ್ಲಿ. ಮಕ್ಕಳಿಲ್ಲ. ಆ ಕೊರತೆಯನ್ನು ನಾನು ತೀರಿಸಿದಾಗ, ನಮ್ಮ ಬಡತನದಲ್ಲಿ ಅವರು ಸಹಾಯ ಮಾಡಿದರೆ ಅದು ವ್ಯಾಪಾರವಾಗದು. ಇದನ್ನೆಲ್ಲ ನಿನಗೆ

ಯಾಕೆ ಹೇಳಿದೆನೆಂದರೆ, ನಮ್ಮಿಬ್ಬರ ಸಮ್ಮತಿಯಿಲ್ಲದೆ ಅವರಿಗೆ ಧೈರ್ಯವಿಲ್ಲ ವಂತೆ. ನೀನು ಅಲ್ಲಿಗೆ ಬರಲೇಬೇಕು." ಅಧಿಕಾರವಾಣಿಯಿಂದ ಹೇಳಿದಳವಳು. ಕಿಟ್ಟನು ತಲೆತಗ್ಗಿಸಿದನು. ಸಮ್ಮತಿಯೆಂದದರ ಅರ್ಥ.

ಒಂದು ದಿನ ಸಾಯಂಕಾಲ ರಾಜಿಯು ಮಗುವಿನೊಂದಿಗೆ ಕಿಟ್ಟನನ್ನು ಜತೆಗೊಂಡು ಆ 'ಅಮ್ಮ' ನ ಮನೆಗೆ ಹೋಗಿ, ಮಗುವನ್ನು ಬಿಟ್ಟು ಇನ್ನೂರು ರೂಪಾಯಿಗಳನ್ನೂ ಹದಿನಾರು ರೂಪಾಯಿಗಳ ಎರಡು ಸೀರೆಗಳನ್ನೂ ಪಡ ಕೊಂಡು ಬಂದಳು. ಗುಡಿಸಲ ಹೊಸ್ತಿಲೊಳಗೆ ಕಾಲಿಡುವಾಗ ಅವಳ ಹೃದ ಯವು ಹೆಪ್ಪುಗಟ್ಟಿತು. "ನಾನೇನು ಮಾಡಿಬಂದೆ?" ಎಂದವಳ ಆತ್ಮವು ಪ್ರಶ್ನಿಸಿತು. "ಇಗೋ, ಕಿಟ್ಟ—ನಾವು ಮಾಡಿದ ಕೆಲಸ ಸರಿಹೋಯಿತೆ?" ಅವಳು ಕಿಟ್ಟನನ್ನು ಕೇಳಿದಳು. ಕಿಟ್ಟನು ಹನಿವ ಕಣ್ಣುಗಳನ್ನೊರಸುತ್ತ, "ಹೇಗಾದರೂ ಇನ್ನು ಯೋಚಿಸಿ ಫಲವುಂಟೆ ರಾಜಿ?" ಎಂದನು. ಕ್ಷಣ ಹೊತ್ತು ರಾಜಿ ಮೌನವಾಗಿದ್ದಳು. ಕೊನೆಗೆ ಸವಾಳಿಸಿ, ಹಣದ ಥೈಲಿಯನ್ನು ಬಿಚ್ಚಿ ಸುರಿದು ಕಂಣುತುಂಬ ಅದನ್ನು ನೋಡಿದಳು. ಸೀರೆಗಳ ಗಳಿಗೆ ಮುರಿದು ಮುಂದಲೆಗಳನ್ನು ನೋಡಿ ಹಿಗ್ಗಿದಳು. ವಿಚಿತ್ರವಾದೊಂದನುಭವವು ಅವಳ ಮನಸ್ಸನ್ನಾವರಿಸಿತು.

ಆ ರಾತ್ರಿ ಕಳೆಯಿತು. ಮಾರನೆಯ ದಿನ ಮಂಗಳವಾರ; ಸಾಯಂಕಾಲ ರಾಜಿ ಹೊಸ ಸೀರೆ ಉಟ್ಟು ದೇವೀ ದರ್ಶನಕ್ಕಾಗಿ ಫಲತಾಂಬೂಲಗಳೊಂದಿಗೆ ನಡೆದಿದ್ದಳು. ಆಗ, ದೇವಿಯು ಪಾತ್ರಿಯ ದೇಹದಲ್ಲಿ ಆವೇಶವಾಗಿದ್ದು ಭಕ್ತರ ಮೊರೆಗಳನ್ನು ಕೇಳತೊಡಗಿದ್ದಳು.

"ಅವಳ ಅಭೀಷ್ಟ ಸಿದ್ಧಿಯಾದಲ್ಲಿ ನನಗೇನು ಸೇವೆ ಕೊಡುತ್ತಾ ಳಂತೆ?"— ಪಾತ್ರಿಯ ಮೂಲಕ ದೇವಿಯು ಕೇಳಿದಳು.

"ತಾಯಿ! ನನ್ನ ಶಕ್ತಿಯಿದ್ದ ಮಟ್ಟಿಗೆ ನಿನಗೆ ಸೇವೆ ಸಲ್ಲಿಸುತ್ತೇನೆ. ನಿನ್ನ ಪೀಠವನ್ನು ಚಿನ್ನದಿಂದ ಮುಚ್ಚಿಸುತ್ತೇನೆ. ನಿನ್ನ ಮಹಾದ್ವಾರಕ್ಕೆ ಬೆಳ್ಳಿಯ ಕವಚ ಮಾಡಿಸುತ್ತೇನೆ. ನಿನ್ನ ಧ್ವಜಸ್ತಂಭಕ್ಕೆ ತಾಮ್ರದ ತಗಡು ಹೊಡಿಸುತ್ತೇನೆ. ನಿನ್ನ ಮೂರ್ತಿಗೆ ಬೆಲೆಯುಳ್ಳ ಪೀತಾಂಬರವನ್ನುಡಿಸುತ್ತೇನೆ." ಆ ಭಕ್ತೆಯ ಪ್ರತಿಜ್ಞೆ.

" ಮೆಚ್ಚಿದೆ ! ಬರುವ ವರ್ಷ ಇದೇ ಸಮಯದಲ್ಲಿ, ಕೈಕೂಸಿನೊಂದಿಗೆ ಬರುವಂತೆ ಅನುಗ್ರಹಿಸಿದ್ದೇನೆ— ಸಂತೋಷ. ಇದೋ ಪ್ರಸಾದ " ದೇವಿಯ ಮಾರ್ನುಡಿ.

ರಾಜಿಯು ಇದನ್ನು ಕೇಳಿದಳು. ಅವಳ ಎದೆಯು ಧಾರೆಗಟ್ಟಿತು. ಅವರ್ಣ ನೀಯ ದುಃಖದಿಂದವಳು ಮನೆಗೆ ಹಿಂತಿರುಗಿದಾಗ ಕಿಟ್ಟನು ಜಗಲಿಯಲ್ಲಿ ದಾರಿ ಕಾಯುತ್ತ ಕುಳಿತಿದ್ದನು. ರಾಜಿಯು ಓಡೋಡಿಯೂ ಕಿಟ್ಟನ ಕಾಲಬಳಿಯಲ್ಲಿ ಹೋಗಿ ಕುಳಿತಳು. " ಕಿಟ್ಟ—ನಿನ್ನ ದಮ್ಮಯ್ಯ, ನನಗೆ ಈ ಸೀರೆ ಹಣ ಬೇಡ. ನನ್ನ ಮಗುವನ್ನು ಹೇಗಾದರೂ ಮಾಡಿ ಹಿಂದ ಕೊಡಿಸು. ಅದೇ ನನ್ನ ಸರ್ವ ಸಂಪತ್ತು. ಇಂದಿನಿಂದ ನಿನ್ನ ಮನನೋಯದಂತೆ ನಾನು ನಡೆದುಕೊಳ್ಳು ತ್ತೇನೆ. ಇರಲಿ. ನನ್ನ ಸರ್ವಾಪರಾಧವಾಯಿತು. ಅಷ್ಟೊಂದು ಉಪಕಾರ ಮಾಡು." ಬಿಕ್ಕಿಬಿಕ್ಕಿ ಅಳುತ್ತ ಹೇಳಿದಳು ರಾಜಿ.

ಕಿಟ್ಟನಿಗೂ ದುಃಖ ಬಂತು. ಅವನೆಂದನು : " ರಾಜಿ, ಕೈಮೀರಿ ಹೋದ ಕಾರ್ಯವನ್ನು ಸರಿಪಡಿಸುವುದು ಸುಲಭವಲ್ಲ. ಮೇಲೂ, ಸೀರೆಯನ್ನು ನೀನು ಉಟ್ಟುಬಿಟ್ಟಿರುವೆ. ಅಲ್ಲದೆ, ಆ ಅಮ್ಮ ಏನನ್ನೋ ಬರೆದು ತಕ್ಕೊಂಡು ನಮ್ಮ ಕೈಮೊಹರು ಬೇರೆ ಒತ್ತಿಸಿಕೊಂಡಿದ್ದಾರಲ್ಲ. ನಿನ್ನ ಈ ಬುದ್ಧಿ ಮೊದಲೇ ಎಲ್ಲಿ ಹೋಗಿತ್ತು ? "

" ಆದರೆ, ಕಿಟ್ಟ— ನನ್ನ ಮಗುವಿಲ್ಲದೆ ನಾನು ಖಂಡಿತ ಇನ್ನೊಂದು ಕ್ಷಣ ಜೀವವಿಟ್ಟುಕೊಂಡಿರಲಾರೆ— ಬಾವಿಗಾದರೂ ಬೀಳುವುದೇ ಸರಿ. ನಡೆ ಅವರಲ್ಲಿಗೆ ಹೋಗೋಣ. ನನ್ನ ಮಗು ರಾತ್ರಿಯಿಂದ ಎದೆ ಹಾಲು ಕುಡಿಯದೆ ಎಷ್ಟು ಕಷ್ಟಪಟ್ಟಿತೊ ! " ರಾಜಿ ಕೈಗಳಿಂದ ಎದೆಯನ್ನೊತ್ತಿಕೊಂಡಳು. ಕಿಟ್ಟ ಎದ್ದನು. ರಾಜಿ, ಹುಚ್ಚಿಯಂತೆ, ದೇವಿಯ ಪ್ರಸಾದವನ್ನು ಒಳಗೂ ಇಡುವಷ್ಟು ಸಮಯ ಹಾಳುಮಾಡದೆ ಕಿಟ್ಟನೊಂದಿಗೆ ಆ ' ಅಮ್ಮ ' ನ ಮನೆಗೆ ನಡೆದಳು. ಇವರ ಬರೋಣವನ್ನು ನೋಡಿದ ಆ ಅಮ್ಮ ಅಭಿಮಾನದಿಂದವರನ್ನು ಉಪ ಚರಿಸಿದಳು. ರಾಜಿ ಪ್ರಸಾದದ ಹರಿವಾಣವನ್ನು ಕೆಳಗಿಟ್ಟು, ಆ ಅಮ್ಮನ ಕಾಲಿಗೆ ಅಡ್ಡ ಬಿದ್ದಳು. " ಅಮ್ಮ–ತಾಯಿ, ನನ್ನನ್ನು ಕ್ಷಮಿಸಿ–ಕಾಪಾಡಿ, ಮಗುವಿಲ್ಲದೆ ನನ್ನ ಮನಸ್ಸು ಏನೇನೋ ಆಗುತ್ತಿದೆ. ನಿಮ್ಮ ಹಣವನ್ನು ಈಗಲೇ ತಂದು ಕೊಟ್ಟರೆ ನನ್ನ ಮಗುವನ್ನು ಕೊಟ್ಟುಬಿಡುವಿರಾ ? " ದೀನ

ವಾಣಿಯಿಂದ ಬೇಡಿದಳು ರಾಜಿ. ಕಿಟ್ಟನೂ ಕೈಜೋಡಿಸಿ, ರಾಜಿಯ ಹೆಣ್ಣು ಬುದ್ಧಿಯನ್ನು ಹಳಿಯುತ್ತಾ ದಯೆ ತೋರಬೇಕೆಂದು ಬೇಡಿದನು. ದಿನವೊಂದರೊಳಗೆ ಆ ದಂಪತಿಗಳು ಪಡೆದ ಅವಸ್ಥೆಯನ್ನು ನೋಡಿದ ಆ 'ಅಮ್ಮ'ನ ಮನಸ್ಸು ಕರಗಿ ಹೋಯಿತು. ಮಗು ಅವಳ ಕೈಯಲ್ಲಿತ್ತು. ಆಕೆ, ಅದಕ್ಕೊಂದು ಮುತ್ತನ್ನು ಕೊಟ್ಟು, "ತೆಗೆದುಕೊಳ್ಳಿಪ್ಪಾ—ನಿಮ್ಮ ಮಗುವನ್ನು ! ದೇವರು ನಿಮಗಿತ್ತ ಪವಿತ್ರ ಆಶೀರ್ವಾದವನ್ನು ನಾನೇಕೆ ಅಪಹರಿಸಲಿ ? ಅಲ್ಲದೆ, ನಿಮ್ಮ ಮನೋಬೇಗೆಯು ಅದಕ್ಕೆ ಅನಿಷ್ಟವನ್ನು ತಂದೀತು." ಎನ್ನುತ್ತ ಆ ಸುಶೀಲ ಸ್ತ್ರೀಯು ಮಗುವನ್ನು ರಾಜಿಯ ಕೈಗಿತ್ತು ಒಳಗೆ ಹೋದಳು. ಹೊರಗೆ ಬಂದಾಗ ಆಕೆಯ ಕಣ್ಣುಗಳು ಕೆಂಪಾಗಿದ್ದುವು. "ಇದೋ, ನೀವು ಬರೆದು ಕೊಟ್ಟ ಕಾಗದ. ಹರಿದು ಬಿಸಾಡಿ. ಒಂದು ರಾತ್ರಿ, ಒಂದು ಹಗಲು ನನ್ನ ಋಣವಿತ್ತು ಈ ಮಗುವಿಗೆ. ನೀವು ಹಣವನ್ನು ನನಗೆ ಹಿಂದೆ ಕೊಡುವುದು ಬೇಡ. ಆ ಮಗುವಿನ ಹೆಸರಿನಲ್ಲಿ, ನಿಮಗೆ ಧಾರೆಯೆರೆದಿದ್ದೇನೆ." ಆಕೆಯ ಗಂಟಲು ಬಿಗಿಯಿತು. ಎರಡು ಹನಿಗಳು ಗಲ್ಲದ ಮೇಲೆ ಹರಿದಿಳಿದವು.

ಮೂವರೂ ಕೆಲವು ನಿಮಿಷಗಳವರೆಗೆ ಸ್ತಬ್ಧರಾಗಿದ್ದರು. ರಾಜಿಯು ಇದ್ದಕ್ಕಿದ್ದಂತೆ ಪ್ರಜ್ಞೆಬಂದವಳಾಗಿ, ಆತುರದಿಂದ ಮಗುವನ್ನು ಎದೆಗೆ ಹಚ್ಚಿ ಹಾಲು ಕುಡಿಸಿದಳು. ಆ 'ಅಮ್ಮ' ತುಂಬಿದ ಹೃದಯದಿಂದ ಆ ದೃಶ್ಯವನ್ನು ನೋಡಿದಳು.

ಅಲ್ಲಿಂದ ಹೊರಡುವಾಗ, ರಾಜಿ, ದೇವಿಯ ಕುಂಕುಮವನ್ನು ಆ 'ಅಮ್ಮ'ನಿಗೆ ಕೊಟ್ಟು ಪುತ್ರವತಿಯಾಗುವಂತೆ ಬಗೆಬಗೆಯಿಂದ ಹರಸಿದಳು.

ರಾಜಿಯ ಹರಕೆ ವಿಫಲವಾಗಲಿಲ್ಲ. ಮರುವರ್ಷ ದೇವಿಗೆ, ಎರಡು ಜತೆ ಚಿನ್ನದ ಪೀಠ ಕವಚ, ಬೆಳ್ಳಿಯ ದ್ವಾರಕವಚ, ತಾಮ್ರದಧ್ವಜ, ಸ್ತಂಭಕವಚ ಮತ್ತು ಪೀತಾಂಬರಗಳ ಸೇವೆ ಸಲ್ಲಿದವು.

**ಸರಸ್ವತೀಬಾಯಿ ರಾಜವಾಡೆ**
**ಉಡುಪಿ**

# ಒಂದು ಎರಡು ಮೂರು.......

ಅಂದು ಸಾಹುಕಾರ ವಿನಾಯಕರಾಯರ ಮನೆಯಲ್ಲಿ ಮಗುವಿನ ನಾಮಕರಣವಿದ್ದ ಕಾರಣ ಎಲ್ಲಿ ನೋಡಿದರೂ ಉತ್ಸಾಹದ ಗದ್ದಲವೇ ನಡೆದಿತ್ತು. ಎಷ್ಟೋ ವರುಷದಿಂದ ಮಕ್ಕಳ ಮುಖವನ್ನು ಆ ಮನೆಯಲ್ಲಿ ಕಾಣದೆ ಇದ್ದ ಕಾರಣ ಈಗ ಮನೆಯವರಿಗೆಲ್ಲ ಆ ಮನೆಯು ಸ್ವರ್ಗದಂತೆ ಅನಿಸುತ್ತಿತ್ತು.

ಬಂದ ಮುತ್ತೈದೆಯರೆಲ್ಲ ಸವಿಯೂಟವನ್ನುಂಡು, ಮಗುವಿಗೂ ಮಗುವಿನ ತಾಯಿಗೂ ಹರಕೆಯನ್ನು ಕೊಟ್ಟು ತಮ್ಮ ತಮ್ಮ ಮನೆಗಳಿಗೆ ಹೋದರು.

ಬೆಳಗಿನಿಂದ ಮನೆಯಲ್ಲಿಯ ಜನರ ಗದ್ದಲದಲ್ಲಿ ವಿನಾಯಕರಾಯರಿಗೆ ಮಗುವಿನ ಮುಖವನ್ನು ನೋಡುವದಾಗಿರಲಿಲ್ಲ. ಅವರಿಗೆ ಅಸಮಾಧಾನವೆನ್ನಿಸ ಹತ್ತಿತು. ರಾತ್ರಿ ಎಲ್ಲರೂ ಹೋದಮೇಲೆ ಹೆಂಡತಿಯ ಕೋಣೆಗೆ ಹೋದರು. ಮಡದಿಯ ಮಗ್ಗುಲಲ್ಲಿ ಮಲಗಿದ ಮುದ್ದುಮಗುವಿನ ಮುಗುಳು ನಗೆಯನ್ನು ನೋಡಿ ಅವರಿಗಾದ ಸುಖ ಆನಂದಾಶ್ರುವಾಗಿ ಹರಿಯಿತು. ಎಷ್ಟೋ ಹೊತ್ತಿನ ವರೆಗೆ ಮಗುವನ್ನು ನೋಡುತ್ತ ಅಲ್ಲಿಯೇ ಕುಳಿತಿದ್ದರು.

ವಿನಾಯಕರಾಯರ ಮನೆಯವರಿಗೆಲ್ಲ ಮಗುವಿನ ಆಟಪಾಟಗಳಲ್ಲಿ ಒಂದು ವರುಷವು ಹೇಗೆ ಕಳೆಯಿತೋ ತಿಳಿಯಲಿಲ್ಲ. ಮರುವರುಷವೆಂಪರೆ ವಿಮಲೆ ಮತ್ತೊಂದು ಮಗುವಿನ ತಾಯಿಯಾಗುವದರಲ್ಲಿದ್ದಳು.

ಮೊದಲಿನ ಒಂದು ವರುಷದ ಸುಖ ಈಗ ವಿನಾಯಕರಾಯರಿಗಿಲಲಿಲ್ಲ. ತಮ್ಮ ಗೆಳೆಯರೆಲ್ಲ ತಮ್ಮ ಹೆಂಡಂದಿರೊಡನೆ ತಿರುಗಾಡುವದನ್ನು ನೋಡಿ ಅವರಿಗೆ ಕೆಡಕೆನಿಸುತ್ತಿತ್ತು. ಮೊದಲಿನ ಹೆಂಡತಿ ಹಳ್ಳಿಯವಳು, ಎರಡನೆಯವಳು ಸುಶಿಕ್ಷಿತಳಾದರೂ ಕುರೂಪಿ, ಅವರೊಡನೆ ಹೇಗೆ ಹೊರಗೆ ಹೋಗುವದು ಎಂದು ಅವರಿಗೆ ಅನಿಸುತ್ತಿತ್ತು. ಮಗುವಿನ ಮುಖವನ್ನು ನೋಡಿ ಅದನ್ನೆಲ್ಲ ಮರೆತುಬಿಡುತ್ತಿದ್ದರೂ ತಮ್ಮ ಹೆಂಡತಿ ಸುಂದರಿಯಲ್ಲವೆಂಬ ಕೊರಗು ಅವರಿಗೆ ಇದ್ದೇ ಇತ್ತು. ಈಚೆಗೆ ಅವರ ಒಂದಿಬ್ಬರು ಗೆಳೆಯರ ಉಪದೇಶದಿಂದ ಅವರಿಗೆ ತಾವು ಚೆಲುವೆಯಾದ ಇನ್ನೊಬ್ಬಳನ್ನು ಯಾಕೆ ಮದುವೆಯಾಗಬಾರದೆಂದು ಅನಿಸಹತ್ತಿತು.

"ನಾನು ಇನ್ನೊಂದು ಲಗ್ನವಾದರೆ ಈಗಿನ ನನ್ನ ಹೆಂಡತಿಗೂ ಮಕ್ಕಳಿಗೂ ಏನು ತೊಂದರೆ? ಬೇಕಾದಷ್ಟು ಆಸ್ತಿಯಿದೆ. ಉಂಡುಟ್ಟು ಸುಖದಿಂದ ಇರುವರು. ಈಗ ಮೊದಲನೆಯ ಹೆಂಡತಿ ಎರಡನೆಯವಳು ಬಂದರೂ ಸುಖದಿಂದ ಇಲ್ಲವೇ ?" ಎಂದು ವಿನಾಯಕರಾಯರು ವಿಚಾರ ಮಾಡುತ್ತಿದ್ದರು.

ನಿನ್ನೆ ಮಾಧವರಾಯರು ವಿನಾಯಕರಾಯರಿಗೆ "ನಿಮಗೇನು ಈಗ ವಯಸ್ಸಾಗಿದೆ? ಇನ್ನೂ ಐವತ್ತು ಆಗಿಲ್ಲ! ನೋಡಲಿಕ್ಕಂತೂ ಇಪ್ಪತ್ತೈದು ವರುಷದ ತರುಣರಂತೆ ಕಾಣುವಿರಿ" ಎಂದು ಅಂದರು. ಅದು ನಿಜ. ತಲೆಯಲ್ಲಿ ಹೆಚ್ಚಿಗೆ ಕೂದಲು ಬೆಳ್ಳಗಾಗಿಲ್ಲ, ಮುಖದ ಮೇಲಂತೂ ಮೀಶೆ ಇಲ್ಲ. ಪ್ರತಿ ದಿವಸ ಟೆನಿಸ್ ಆಡಲು ಹೋಗುವದರಿಂದ ಮುಖವೂ ಕಳೆಗುಂದಿಲ್ಲ. ವಿನಾಯಕರಾಯರ ಆಶಾಂಕುರಕ್ಕೆ ಗೆಳೆಯರ ಪ್ರೋತ್ಸಾಹವೆಂಬ ನೀರೂ ಆಗಾಗ್ಗೆ ಬೀಳುತ್ತಿತ್ತು.

*　　*　　*　　*　　*　　*

ನಿನ್ನೆ ಸಾಯಂಕಾಲ ನಾನೂ ನನ್ನ ಗೆಳತಿ ವಿಮಲ ತಿರುಗಾಡಲು ಹೋಗಿದ್ದೆವು. ಆಗ ಭೂದೇವಿಯು ಜೋಳದ ಬೆಳೆಯಿಂದ ಹಸಿರು ಸೀರೆಯನ್ನುಟ್ಟು, ಹತ್ತಿಯಗಿಡದ ಹೂ-ಕಾಯಿಗಳಿಂದ ಕಸೂತಿಯ ಕುಪ್ಪಸ ತೊಟ್ಟು, ಕುಂಕುಮದ ಬೊಟ್ಟನ್ನಿಟ್ಟುಕೊಂಡು, ನಿರಾಭರಣಸುಂದರಿಯಾಗಿ ಪತಿಯ ಸನ್ನಿಧಿಗೆ ಹೊರಟ ಗಂಭೀರ ಗರತಿಯಂತೆ ಕಾಣಿಸಿದಳು. ಒಂದು ದಿಕ್ಕಿನಲ್ಲಿ ಕಣ್ಣಿಗೆ ತೃಪ್ತಿಯನ್ನುಂಟುಮಾಡುವ ಹೊಂಬಣ್ಣದ ಮನೋಹರವಾದ ಸೂರ್ಯಾಸ್ತದ ನೋಟ. ಸುತ್ತಲೂ ಪಕ್ಷಿಗಳ ಕಿಲಕಿಲಾಟ. ಈ ಸಮಯದಲ್ಲಿ ದಂಪತಿಗಳಿಬ್ಬರು ಆನಂದದಿಂದ ತೋಟದಲ್ಲಿಯ ಕೆಲಸವನ್ನು ಮುಗಿಸಿಕೊಂಡು, ಅವಸರದಿಂದ ಮನೆಗೆ ಹೊರಟಿದ್ದರು. ಅದನ್ನು ನೋಡಿ ವಿಮಲೆಗೆ ದುಃಖವನ್ನು ತಡೆಯಲಾಗಲಿಲ್ಲ—ಅಳಹತ್ತಿದಳು. ಅದು ಎಷ್ಟೋ ಹೊತ್ತಿನ ವರೆಗೆ ನನಗೆ ಗೊತ್ತೇ ಆಗಿರಲಿಲ್ಲ. ನಾನು ಸುತ್ತಲಿನ ಸುಂದರ ವಾತಾವರಣದಲ್ಲಿ ಮೈಮರೆತಿದ್ದೆ. ಬಹಳ ದೂರ ಹೋದದ್ದರಿಂದ ಇನ್ನು ತಿರುಗಿ ಮನೆಗೆ ಹೋಗಬೇಕೆಂದು ವಿಮಲೆಯ ಕಡೆಗೆ ನೋಡಿದೆ. ಅವಳ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿದ್ದವು.

" ವಿಮಲಾ, ಮನೆಯಲ್ಲೂ ಇದೇ ಹಾಡು; ಸ್ವಲ್ಪ ಹೊತ್ತಾದರೂ ಸುತ್ತಲಿನ ನೋಟವನ್ನು ನೋಡಿ ಸಮಾಧಾನ ಮಾಡಿಕೊ " ಎಂದೆ.

ಗದ್ಗದ ಸ್ವರದಿಂದ " ಲೀಲಾ..........." ಅಂದಳು. ಮುಂದೆ ಮಾತೇ ಹೊರಡಲಿಲ್ಲ. ಇಬ್ಬರೂ ಅಲ್ಲಿಯೇ ಒಂದು ಗಿಡದ ಕೆಳಗೆ ಕೂತೆವು.

ವಿಮಲೆಯು ಕೆಲಹೊತ್ತು ಮೌನವಾಗಿದ್ದು ಅಳುವದನ್ನು ನಿಲ್ಲಿಸಿ " ಲೀಲೂ, ನನ್ನ ಬಾಳು ಗೋಳಾಯಿತಲ್ಲ, ಏನು ಮಾಡಲಿ ? ಈಗ ನೋಡಲಿಲ್ಲವೇ, ಇಬ್ಬರು ದಂಪತಿಗಳು ಹೇಗೆ ಬೆಳಗಿನಿಂದ ಸಾಯಂಕಾಲದ ವರೆಗೆ ದುಡಿದು ಸುಖದಿಂದ ಮನೆಗೆ ಹೊರಟಿದ್ದರು. ಅವರ ಮುಖದ ಮೇಲಿನ ಸ್ವರ್ಗೀಯ ನಗೆ ಈಗಲೂ ನನ್ನ ಕಣ್ಣೆದುರು ಕುಣಿದಂತಾಗುತ್ತದೆ. ಅಂತಹ ಸುಖ ಸುಶಿಕ್ಷಿತರೆನಿಸಿಕೊಳ್ಳುವ ನಮ್ಮಂಥ ಎಷ್ಟು ಜನರಿಗುಂಟು ? ಆ ದಂಪತಿಗಳಿಬ್ಬರೂ ಜೊತೆಯಾಗಿ ದುಡಿದು ಸರಿಸಮಾನತೆಯಿಂದ, ಸುಖದಿಂದ ಇರುವರು. ಅವರ ಆ ನಗೆಯಿಂದ ನನಗೆ ಅವರ ಜೀವನದಲ್ಲಿ ಮುಚ್ಚುಮರೆ, ಮೋಸಗಳು ಇಲ್ಲವೆಂದೆನಿಸಿತು. ನಿಜವಾದ ಪ್ರೇಮಕ್ಕೆ ದುಡ್ಡಿನ ಅವಶ್ಯಕತೆಯೇ ? ಪ್ರೇಮಕ್ಕೆ ನಿಶ್ಚಲವಾದ ನಿರ್ಮಲವಾದ ಮನಸ್ಸೇ ಕಾರಣವಲ್ಲವೇ ? " ಎಂಬ ವಿಚಾರಗಳ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಲಾರಂಭಿಸಿದಳು. ನನಗೆ ಅವಳಿಗೇನು ಉತ್ತರ ಕೊಡಬೇಕೋ ತಿಳಿಯಲಿಲ್ಲ ಸುಮ್ಮನೆ ಕೂತಿದ್ದೆ.

" ನೋಡು, ನಾನು ಸಿರಿವಂತಿಕೆಯ ಸೊಬಗಿನಲ್ಲಿ ಮೆರೆಯುತ್ತಿದ್ದರೂ, ಪತಿಯ ನಿಜವಾದ ಪ್ರೇಮದ ಆಳ ತಿಳಿದುಕೊಳ್ಳಲಿಲ್ಲ, ಪತಿಯ ಪ್ರೇಮಕ್ಕೆ ಅರ್ಹಳಾಗಲಿಲ್ಲ. ' ಗಂಡನ ಗುಣವನು ಕಂಡೇನೆಂಬೋಳು ಜಾಣೆ ' ಎಂಬದು ಸುಳ್ಳಲ್ಲ."

" ವಿಮಲಾ, ನಿನ್ನನ್ನೇನು ಹೊರಗೆ ಹಾಕುವರೇ ? ಅವರ ಪ್ರೀತಿ ನಿನ್ನ ಮೇಲೆ, ನಿನ್ನ ಮಕ್ಕಳ ಮೇಲೆ ಇಲ್ಲವೇ ? ಆದದ್ದಾಯಿತು. ಅವರಿಗೆ ಸುಂದರಿಯಾದ ಇನ್ನೊಬ್ಬಳು ಪತ್ನಿ ಬೇಕಾಗಿದ್ದಳಂತೆ. ಮತ್ತೊಬ್ಬಳನ್ನು ಲಗ್ನವಾದರು. ಆಸ್ತಿಗೇನು ಕೊರತೆಯಿಲ್ಲ. ನಿಮಗೆ ಮೂವರಿಗೂ ಹೊಟ್ಟೆಗೆ ಹಾಕಬಲ್ಲರು " ಎಂದೆ.

" ಲೀಲೂ ಜಗತ್ತಿನಲ್ಲಿ ಕೇವಲ ಹೊಟ್ಟೆ ತುಂಬಿಸಿಕೊಳ್ಳುವದೇ ಮಾನವನ ಜೀವನದ ಆದರ್ಶವೇನು ? ಪಶುಗಳೂ ಹೊಟ್ಟೆ ತುಂಬಿಕೊಳ್ಳುವವು.

ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ ? ನೋಡು, ಮಕ್ಕಳಿಲ್ಲದ್ದಕ್ಕೆ ಮದುವೆಯಾಗುವರೆಂದು ನಂಬಿ ನನ್ನನ್ನು ಇವರಿಗೆ ಕೊಟ್ಟರು. ಈಗ ನನ್ನ ತಂದೆ ಇದ್ದಿದ್ದರೆ ಇವರಿಗೆ ಬುದ್ಧಿಯನ್ನು ಚೆನ್ನಾಗಿ ಕಲಿಸುತ್ತಿದ್ದರು. ಎರಡು ಮಕ್ಕಳನ್ನು ಕಟ್ಟಿಕೊಂಡು ಅಣ್ಣನ ಮನೆಯಲ್ಲಿ ಎಷ್ಟು ದಿನವಿರಬಹುದು ? ನನ್ನ ದೆಂಬ ಸ್ವತಂತ್ರ ಮನೆಯಿದೆಯೇ ನನಗೆ ? ಹಿರಿಯ ಸವತಿ, ಕಿರಿಯ ಸವತಿಯ ರಲ್ಲಿ ನನ್ನ ಪತಿಯ ಮನೆ ನನ್ನದೆನ್ನುವದಕ್ಕೆ ಅವಕಾಶವುಂಟೇ ? ನನ್ನ ಪತಿ ತಮ್ಮ ಕಾಮವಾಸನೆಗಾಗಿ ನನ್ನ ಜೀವನವನ್ನು ಬಲಿಕೊಟ್ಟರಲ್ಲ ! ಮೊದಲು ಮಕ್ಕಳಿರಲಿಲ್ಲವೆಂದು ನನ್ನನ್ನು ಲಗ್ನವಾದರು. ನಾನು ರೂಪವತಿಯಲ್ಲವೆಂದು ಮತ್ತೊಬ್ಬಳನ್ನು ಲಗ್ನವಾದರು. ಇನ್ನೂ ಮತ್ತೊಬ್ಬಳ ಮೇಲೆ ಆಶೆಯಾಗ ಬಹುದು. ಪುರುಷರ ಆಶೆಗೆ, ಕಾಮವಾಸನೆಗೆ ಮಿತಿಯುಂಟೇ ? ಮುಖ್ಯವಾಗಿ ನನ್ನದೇ ತಪ್ಪು. ಮೊದಲಿನ ಹೆಂಡತಿಯಿದ್ದು ನಾನು ಇವರನ್ನು ಲಗ್ನವಾಗ ಬಾರದಾಗಿತ್ತು. ಇವರ ವಿದ್ಯೆಗೆ ಹಣಕ್ಕೆ ಮೋಸ ಹೋದೆ."

"ವಿಮಲಾ ನೀನನ್ನುವದೆಲ್ಲ ನಿಜ. ಆದರೆ ಈಗ ಏನು ಮಾಡುವಂತಿದೆ ? ಲಗ್ನವಾಗುವವರೆಗೆ ಏಕೆ ಸುಮ್ಮನಿದ್ದೆ ? ನಿನ್ನ ಅಣ್ಣನನ್ನು ಕರೆಸಿ ಲಗ್ನಕ್ಕೆ ಅಡ್ಡಿ ಮಾಡಿದರಾಗುತ್ತಿರಲಿಲ್ಲವೇ ? "

"ಅವರ ಲಗ್ನದ ವಿಚಾರ ನನ್ನ ಕನಸಿನಲ್ಲಿಯೂ ಬಂದಿರಲಿಲ್ಲ."

"ಏಕೆ, ನಿನಗೆ ಗೊತ್ತಿರಲಿಲ್ಲವೇ ? "

"ಇಲ್ಲ, ಕ್ರಿಸ್‌ಮಸ್‌ರಜೆ ಇದ್ದ ಕಾರಣ ಮೈಸೂರು ನೋಡಿಕೊಂಡು ಬರುವೆನೆಂದರು. ಅಲ್ಲದೆ ನನಗೆ ಹುಡುಗರಿಗೆ ಏನೇನು ತರಬೇಕೆಂದು ಕೇಳಿದರು. "

"ಬರುವಾಗ ಏನನ್ನು ತಂದರೇ ? " ಎಂದೆ.

"ತಂದರಲ್ಲ ನನಗೆ ಸವತಿಯನ್ನೂ, ಮಕ್ಕಳಿಗೆ ಮಲತಾಯಿಯನ್ನೂ. ಇವಕ್ಕೂ ಹೆಚ್ಚಿಗೆ ಇನ್ನೇನು ತಂದಾರು." ಎಂದಳು. ಆಗ ಅವಳ ಮುಖದಲ್ಲಿ ಒಂದು ವ್ಯಥೆಯಿಂದ ಕೂಡಿದ ನಗೆ ಮೋಡದಲ್ಲಿಯ ಮಿಂಚಿನಂತೆ ಮಿಂಚಿ ಮಾಯವಾಯಿತು.

"ಎರಡು ಮೂರು ಸಲ ಹೆಣ್ಣು ನೋಡಲು ಬೆಂಗಳೂರಿಗೆ, ವಿಜಾಪುರಕ್ಕೆ ಹೋಗಿದ್ದರು." ಅವರ ಗೆಳೆಯರೊಬ್ಬರು ನನಗೆಂದರು: 'ಅಕ್ಕಾ' ರಾಯರು

ಹೆಣ್ಣು ನೋಡಲು ಹೋಗಿದ್ದಾರೆ, ಇನ್ನೊಂದು ಮದುವೆ ಮಾಡಿಕೊಳ್ಳುವರಂತೆ ' ಎಂದು. ನಾನು ಚೇಷ್ಟೆಗೆ ಅನ್ನುವರೆಂದು ತಿಳಿದೆ; ಅಲ್ಲದೆ ಅವರು ಬಂದ ಮೇಲೆ ' ಹೆಣ್ಣು ನೋಡಲು ಹೋಗಿದ್ದಿರಾ? ' ಎಂದು ಕೇಳಿದೆ, ' ಹೌದು ನಮ್ಮ ಆಫೀಸಿನಲ್ಲಿಯ ರಂಗಣ್ಣನ ಹೆಂಡತಿ ತೀರಿಕೊಂಡಿಲ್ಲವೇ ? ಅವನಿಗಾಗಿ ನೋಡಲು ಹೋಗಿದ್ದೆ ' ಎಂದರು. ಅವರಾ ಮಾತುಗಳು ನಿಜವೆನಿಸಿದವು."

ಹೊತ್ತು ಬಹಳವಾದ್ದರಿಂದ ಇಬ್ಬರೂ ಮನೆಗೆ ಹೋದೆವು.

*     *     *     *     *     *

ವಿಮಲೆಯು ಮಕ್ಕಳೊಡನೆ ಗಂಡನ ಮನೆಗೆ ಹೊರಟಳು. ಅವಳಣ್ಣ ಎಷ್ಟು ಹೇಳಿದರೂ ಕೇಳಲಿಲ್ಲ. ನಿನ್ನ ಗಂಡ ತಾನಾಗಿ ಕರೆಯಲು ಬಂದಾಗ ಹೋಗುವಿಯಂತೆ ಎಂದರು. ಅವಳು ಒಪ್ಪಲಿಲ್ಲ. ನಾನೂ ಅವಳ ಅತ್ತಿಗೆಯೂ ಹೇಳಿ ನೋಡಿದೆವು; ಸಿಟ್ಟಿಗೆದ್ದಳು. ' ನಾನು ಇದ್ದರೂ ಅಷ್ಟೇ; ಸತ್ತರೂ ಅಷ್ಟೇ. ಅಲ್ಲಿಯೇ ಸಾಯುವೆನು. ಅವರೇನು ಹೋಗು ಎಂದು ನನ್ನನ್ನು ಕಳುಹಿರಲಿಲ್ಲ; ಯಾಕೆ ಕರೆಯಲು ಬಂದಾರು ? ನಾನು ಈಹೊತ್ತೇ ಹೋಗುವೆ ' ಎಂದು ಹಟಹಿಡಿದು ಹೋಗಿಯೇ ಬಿಟ್ಟಳು.

ಹೋಗುವಾಗ " ನಾನು ನಿಮ್ಮೆಲ್ಲರನ್ನು ಇನ್ನೊಮ್ಮೆ ನೋಡುವೆನೇ ? " ಎಂದಳು.

" ಯಾಕೆ, ಹಾಗೆ ಹೇಳುವಿ ? ನಿನ್ನ ಗಂಡನಿಗೆ ಮಕ್ಕಳ ಮೇಲೆ ಬಲು ಪ್ರೀತಿ. ನಿನ್ನೊಡನೆ ಚೆನ್ನಾಗಿ ಇರದಿದ್ದರೂ ನಿನ್ನ ಮಕ್ಕಳೊಡನೆಯಾದರೂ ಇರಲಾರನೇ ? ಮಕ್ಕಳನ್ನು ನೋಡಿ ' ಸುಖದಿಂದ ಇರು ' " ಎಂದೆ.

" ಇರಲೇ ಬೇಕಲ್ಲ " ಎಂದಳು.

" ಹೋದೊಡನೆ ಪತ್ರ ಬರೆ " ಎಂದೆ.

" ಆಗಲಿ .......................................... "

ವಿಮಲೆ ಹೋಗಿ ನಾಲ್ಕು ದಿನಗಳಾದವು. ಚಾತಕ ಪಕ್ಷಿಯು ಮಳೆಯನ್ನು ನಿರೀಕ್ಷಿಸುವಂತೆ ಅವಳ ಪತ್ರವನ್ನು ನಿರೀಕ್ಷಿಸುತ್ತಲಿದ್ದೆ. ಅವರ ಮನೆಗೆ ಹೋಗಿ ವಿಚಾರಿಸಿದೆ; ಅವರಿಗೂ ಪತ್ರವಿಲ್ಲವಂತೆ.

ಇಂದು ಮಧ್ಯಾಹ್ನ ಅವಳ ಪತ್ರ ಬಂತು.

" ನಲುಮೆಯ ಗೆಳತಿ ಲೀಲೆಗೆ—

" ನಾನು ಇಲ್ಲಿಗೆ ಬಂದು ನಾಲ್ಕು ದಿನಗಳಾದರೂ ಪತ್ರಬರೆಯುವ ಮನಸ್ಸಾಗಿರಲಿಲ್ಲ. ಇಂದು ನಿನ್ನ ಸಮಾಧಾನಕ್ಕಾಗಿ ನನ್ನ ದುಃಖವನ್ನು ಬದಿಗಿರಿಸಿ ಬರೆಯಲು ಕುಳಿತಿದ್ದೇನೆ.

" ನನ್ನ ಸವತಿ ಮನೆಗೆ ಬಂದಂದು ನಾನು ತವರುಮನೆಗೆ ಬರಲಿಲ್ಲವೇ, ಈ ಮೂರು ತಿಂಗಳಲ್ಲಿ ಮನೆಯ ಸ್ವಾತಂತ್ರ್ಯವೆಲ್ಲ ಕಿರಿಯ ಸವತಿಯದೇ. ಹಿರಿಯವಳ ಸ್ವಭಾವ ನಿನಗೆ ಗೊತ್ತು. ಅರೆಮರುಳಾದವಳು, ಯಾವಾಗಲೂ ಅಡಿಗೆಮನೆಯಲ್ಲಿ ಕೆಲಸ ಮಾಡುತ್ತ ಕೂಡುವಳು.

"ನಾನು ಇಲ್ಲಿಗೆ ಬಂದಾಗ ನನ್ನ ಪತಿ ಮನೆಯಲ್ಲಿದ್ದರು. ಆದರೆ ನನ್ನನ್ನು ಮಾತನಾಡಿಸಲಿಲ್ಲ. ಇಂದಿನವರೆಗೂ ನನ್ನನ್ನಾಗಲಿ ಮಕ್ಕಳನ್ನಾಗಲೀ ಮಾತನಾಡಿಸಿಲ್ಲ. ಇದರಿಂದ ನನಗೆ ಮತ್ತಿಷ್ಟು ಅಸಮಾಧಾನವಾಗಿದೆ.

" ಇಷ್ಟು ದಿನಗಳವರೆಗೆ ಮಕ್ಕಳನ್ನಾದರೂ ಚೆನ್ನಾಗಿ ನೋಡಬಹುದೆಂಬ ಆಶೆ ಇತ್ತು. ಈಗ ಆ ಆಶೆಯೂ ಇಲ್ಲ. ಆತ್ಮಹತ್ಯ ಮಾಡಿಕೊಳ್ಳಬೇಕೆನಿಸುತ್ತದೆ. ಆದರೆ ಅದಕ್ಕೂ ಆಸ್ಪದವಿಲ್ಲ. ನಾನು ಸತ್ತರೆ ಮಕ್ಕಳ ಸ್ಥಿತಿ ಏನಾಗಬೇಕು ? ಮಕ್ಕಳ ಸಲುವಾಗಿ ಬಾಳಬೇಕಾಗಿದೆ.

" ನನ್ನ ಪತಿ ಹೀಗೆ ಮೂರು ಲಗ್ನಮಾಡಿಕೊಂಡರೂ ಅವರ ವಿದ್ಯೆಗಾಗಿ, ವಿಶೇಷವಾಗಿ ಅವರ ಹಣಕ್ಕಾಗಿ ಸಮಾಜದಲ್ಲಿ ಅವರಿಗೊಂದು ಗಣ್ಯಸ್ಥಾನವಿದೆ. ಇದು ಯೋಗ್ಯವೇ ? ಜಗತ್ತಿನಲ್ಲಿ ನ್ಯಾಯವಿದೆಯೇ ? ಎಂದೆನಿಸುವದು.

" ಈಗ ಹೆಚ್ಚಿಗೆ ಬರೆಯಲಾರೆ. ಮತ್ತೊಮ್ಮೆ ಮನಸ್ಸಿಗೆ ಸಮಾಧಾನವೆನಿಸಿದಾಗ ಬರೆಯುವೆ. ಉತ್ತರ ಬರೆ.

ನಿನ್ನ ದುಃಖಿ
**ವಿಮಲೆ "**

* * * * * *

ವಿಮಲೆಯ ಅಣ್ಣ ನೌಕರಿಯ ಮೇಲೆ ಮತ್ತೊಂದು ಊರಿಗೆ ಹೋಗಿದ್ದಾರೆ. ಆದಕಾರಣ ಈಗ ಎರಡು ವರುಷಗಳಿಂದ ಅವಳ ಸುದ್ದಿ ನನಗಿರಗಿಲ್ಲ. ಅವಳಿಗೆ ಎರಡು ಪತ್ರ ಬರೆದೆ; ಉತ್ತರವಿಲ್ಲ. ಅವಳ ಸ್ಥಿತಿ ಏನಾಯಿತೆಂದು ಮತ್ತಿಷ್ಟು ಕಳವಳವಾಗಹತ್ತಿತು.

ಮೊನ್ನೆ ಅವಳಣ್ಣ ನಮ್ಮಲ್ಲಿ ಬಂದಿದ್ದರು. ವಿಮಲೆ ಈಗ ಒಂದು ವರುಷದಿಂದ ಹುಚ್ಚರ ಆಸ್ಪತ್ರೆಯಲ್ಲಿ ಇರುವಳೆಂದು ಹೇಳಿದರು.

ಇವನ್ನು ಕೇಳಿ ನನ್ನ ಹೃದಯಕ್ಕೆ ಆಘಾತವಾದಂತಾಯಿತು.

ನಾಲ್ಕು ದಿನಗಳ ಹಿಂದೆ ನಾನು ಓರ್ವ ಪರಿಚಯದವರ ಲಗ್ನಕ್ಕೆ ಧಾರವಾಡಕ್ಕೆ ಹೋಗಬೇಕಾಗಿ ಬಂತು. ಆಗ ವಿಮಲೆಯನ್ನು ಕಂಡು ಬರಬೇಕೆಂದು ಜೊತೆಗೊಬ್ಬರನ್ನು ಕರೆದುಕೊಂಡು ಆಸ್ಪತ್ರೆಗೆ ಹೋದೆ. ವಿಮಲೆಯನ್ನು ತೋರಿಸಿದರು. ಆದರೆ ಅವಳ ಗುರುತು ಹಿಡಿಯುವದೇ ಕಷ್ಟವಾಯಿತು.

ಅವಳ ಹರಹಿದ ತಲೆ, ಬಾಡಿದ ಮುಖಗಳನ್ನು ನೋಡುತ್ತ ಬೆಪ್ಪಾಗಿ ಕೆಲಹೊತ್ತು ಸುಮ್ಮನೆ ನಿಂತಿದ್ದೆ. ನನ್ನ ಗುರುತು ಅವಳಿಗೆ ಹತ್ತುವದೇ ಸಾಧ್ಯವಿರಲಿಲ್ಲ. ಒಂದೇಸವನೆ ಅವಳು ಮಾತನಾಡುತ್ತಿದ್ದಳು. “ಒಂದು—ಎರಡು—ಮೂರು....ಹಹಾ....ಹ, ಸಮಾಜ....ಸಮಾಜಕ್ಕೆ ಹೆದರಿ ರಾಮ ಸೀತಿನ್ನ ಅಡವಿಗಟ್ಟಿದ. ಹ....ಹಾ....ಸಮಾಜ. ಮನಸ್ಸಿಗೆ ತಿಳಿದಷ್ಟು ಹೆಣ್ಣುಗಳನ್ನು ಲಗ್ನವಾಗುವರು ಗಂಡು—ಅಸುರರು. ಹ—ಹಾ ಸಮಾಜ. ಒಂದು—ಎರಡು—ಮೂರು.” ಎಂದು ಬೆರಳುಗಳನ್ನು ಎಣಿಸುತ್ತಿದ್ದಳು. ಅವನ್ನು ಕಂಡು ನನಗೆ ಎದೆಯಲ್ಲಿ ಅಲಗಿಕ್ಕಿ ತಿರುವಿದಂತಾಯಿತು.

ಇದೇನು ನನ್ನ ಗೆಳತಿಯ ಅವಸ್ಥೆ ಎಂದುಕೊಂಡೆ. ವಿಚಾರಗಳ ತಾಕಲಾಟ ಹಾಗೇ ನಡೆದಿತ್ತು.

“ಹೆಣ್ಣು ಏನಾದರೂ ಮಾರ್ಗ ತಪ್ಪಿದರೆ, ಹಡೆದ ತಂದೆ, ಕೈಹಿಡಿದ ಗಂಡ, ಸಮಾಜದ ಮುಂದಾಳುಗಳು, ಧರ್ಮದ ಗುರುಗಳು ಬಹಿಷ್ಕರಿಸುವರು. ಅದೇ ಗಂಡಸು ಏನು ಮಾಡಿದರೂ ತಪ್ಪಿಲ್ಲ. ನಮ್ಮ ಸಮಾಜದಲ್ಲಿ ಸ್ತ್ರೀಯರಿಗಿರುವಂತೆ ಪುರುಷರಿಗೂ ಬಹಿಷ್ಕಾರವುಂಟೆ? ಧರ್ಮದಲ್ಲಿ ಕಟ್ಟುಂಟೆ?

ನ್ಯಾಯದಲ್ಲಿ ಸ್ತ್ರೀಗೂ ಸ್ಥಾನವುಂಟೆ ? ಪುಣ್ಯಭೂಮಿಯೆಂದು ಹೇಳಿಕೊಳ್ಳುವ ಭರತಖಂಡವಲ್ಲಿ ಬಹುಪತ್ನೀತ್ವವು ಬಹುದಿನಗಳ ಸಂಪ್ರದಾಯವಾಗಿದೆಯಲ್ಲವೇ ? ನಮ್ಮವರು ಈ ದುಷ್ಟ ಸಂಪ್ರದಾಯಗಳನ್ನು ಕಿತ್ತೊಗೆಯುವರೇ ?

ಆದರ್ಶ ಗೃಹಿಣಿಯಾಗಿದ್ದ ವಿಮಲೆ ಆಸ್ಪತ್ರೆಯನ್ನು ಸೇರಬೇಕಾಗಿ ಬಂದುದು ಯಾರ ತಪ್ಪು ? ಸರಿ; ಈ ನನ್ನ ವಿಚಾರಗಳ ತಾಕಲಾಟದಿಂದ ವಿಮಲೆಯ ದುಃಖವಾಗಲಿ, ನಮ್ಮ ಸಮಾಜದ ಕ್ರೂರತನವಾಗಲೀ ಅಳಿಯುವದು ಹೇಗೆ ?

**ಶ್ರೀಮತಿ ಶಾಂತಾದೇವಿ ಮಾಳವಾಡ**
**ಧಾರವಾಡ**

# ವೇಣೀಸಂಹಾರ

"ಹತ್ತನೆಯ ದಿನವೆ ಆ ಅನಿಷ್ಟಕಾರ್ಯ ಮುಗಿದುಹೋಗಲಿ ಶಂಭೂ ! ಶ್ರಾದ್ಧ–ಸಂತರ್ಪಣೆಗಳಲ್ಲಿಯೂ ಹುಡುಗಿ ಹೀಗೆಯೇ ಕೇಶ ಬಿಟ್ಟು ಕೊಂಡು ಮಧ್ಯದಲ್ಲಿ ಬಂದರೆ, ಅದೊಂದು ಅಸಂಬದ್ಧ ! ಮೋಹಕ್ಕೆ ಬಲಿ ಬಿದ್ದು ಧರ್ಮವಿರೋಧವಾದುದನ್ನು ಎಷ್ಟು ದಿವಸ ಸಹಿಸಲಿಕ್ಕಾದೀತು ಹೇಳು ! ಮತ್ತೆ ಬೇರೆಯವರ ಹಾಗೆ ಪುರೋಹಿತನಾದ ನಾನೂ ದಾಕ್ಷಿಣ್ಯಹಿಡಿದರೆ' ಲೋಕವೆಲ್ಲ ಏನೆಂದೀತು ಎಂಬುದನ್ನು ಲಕ್ಷ್ಯಕ್ಕೆ ತಂದುಕೋ !"

"ನಿಮ್ಮ ಮಾತು ಯುಕ್ತ ಪುರೋಹಿತರೇ ! ಈಗ ಬಿಟ್ಟರೆ ಇಂತಹ ಸಂಧಿ ಮುಂದೆ ದೊರಕುವಂತೆ ಇಲ್ಲ ! ಆದರೆ ಶಾಂತೆಯ ಸ್ವಭಾವ ನೆನೆದರೆ.... ಹಾಂ! ನೀವೂ ಸ್ವಲ್ಪ ಹೇಳಿ ! ಈಗ ಅವಳನ್ನು ಇಲ್ಲಿಗೇ ಕರೆಯಿಸಲೇ ?"

"ಛೀ ! ಅದು ನಿನಗೆ ಕೂಡಿದ್ದು ! 'ಈ ಧರ್ಮ ಹಾಳಾಗಲಿ' ಎಂದು ಪ್ರತಿವಾದಮಾಡುವವರೊಡನೆ ವಿವೇಕದಿಂದ ಮಾತನಾಡಲು ನನಗೆ ಸಾಧ್ಯವಿಲ್ಲ ! ನಿನ್ನ ಮಗಳನ್ನಷ್ಟೇ ಲಕ್ಷಿಸಿ ನಾನು ಈ ಮಾತು ಹೇಳುತ್ತಿಲ್ಲ. ಈಗಿನ ಕಾಲದ ಹೆಣ್ಣು–ಗಂಡು ಎಲ್ಲಾ ಹೀಗೆಯೇ ! ಇನ್ನು ಹೆಚ್ಚು ಪೃಚ್ಛಾಪೃಚ್ಛೆ ಮಾಡಿ ಪ್ರಯೋಜನವಿಲ್ಲ ! ನಾಡಿದ್ದು ಎಲ್ಲಾ ಅಣಿಮಾಡಿರು; ಈಗ ನಾನು ಹೊರಟೆ. ಎಲ್ಲಿಯೊ ಒಂದೆಡೆ ಸತ್ಯನಾರಾಯಣವ್ರತವಿದೆ, ಹೋಗಬೇಕು."

ಶಂಭುವಿನ ವಿಷಣ್ಣವಾದ ಮೊಗದಿಂದ ನಿಟ್ಟುಸಿರೊಂದು ಹೊಗೆಯಾಡಿತು. ಪುರೋಹಿತರು ಆದಾಗಲೇ ಬಾಗಿಲುದಾಟಿ ಹೋದದ್ದರಿಂದ, ಆ ಕಡೆಗೆ ಅವರ ಲಕ್ಷ್ಯ ಹೋಗಲಿಲ್ಲವೇನೋ !

೨

ಶಾಂತೆಗೆ ಇನ್ನೂ ಏಳು ವರ್ಷ ವಯಸ್ಸು ಎನ್ನುವಾಗಲೇ ಮುದ್ದು ಮುದ್ದಾದ ಅಂಗಾಂಗಗಳಿಂದ ಕಣ್ಸೆಳೆಯುವ ಆ ಬಾಲಿಕೆಯನ್ನು, ಅಗ್ನಿಹೋತ್ರಿ ಚಿದಾನಂದ ದೀಕ್ಷಿತರೆಂಬವರು ಮೆಚ್ಚಿ ಮದುವೆಯಾದರು. ಅವರ

ಮೊದಲಿನ ಹೆಂಡತಿ ತೀರಿಕೊಂಡಿದ್ದಾಳೆ. ಮನೆಯಲ್ಲಿ ನಾಲ್ಕು ಮಕ್ಕಳು; ಮೂರು ಮಂದಿ ತಮ್ಮಂದಿರು ಬೇರೆ ಮದುವೆಯಾಗಿ ದೀಕ್ಷಿತರೊಡನೆಯೆ ಸೇರಿಕೊಂಡು ಸಂಸಾರಮಾಡುತ್ತಿದ್ದಾರೆ. ವಯಸ್ಸು ೪೫ ದಾಟಿದೆ. ಆದರೂ ಅಗ್ನಿ ಇಟ್ಟವರಾದ್ದರಿಂದ, ಯಜ್ಞೇಶ್ವರನ ಆರಯಿಕೆಗೆ ವ್ಯತ್ಯಯ ಬರಬಾರದೆಂಬ ಧರ್ಮಬುದ್ಧಿಯಿಂದ ಇನ್ನೊಂದು ಲಗ್ನಮಾಡಿಕೊಂಡಿದ್ದಾರೆ. ಶಾಂತೆಯ ಅದೃಷ್ಟ ಚೆನ್ನಾಗಿಲ್ಲದ್ದರಿಂದಲೇ ಮದುವೆಯಾದ ವರುಷದೊಳಗೇ ದೀಕ್ಷಿತರು ತೀರಿಕೊಂಡರು ಶಂಭುವು ಮಗಳನ್ನು ತನ್ನ ಮನೆಗೆ ಕರೆದುಕೊಂಡು ಬಂದ. ಹುಡುಗಿಯ ಕೇಶ ತೆಗೆಯುವ ಸಂಸ್ಕಾರ ಆಗಲೇ ನೆರವೇರಬೇಕಾಗಿತ್ತು. 'ಇನ್ನೂ ಚಿಕ್ಕಹುಡುಗಿ, ಮೈನೆರೆದ ಮೇಲೆ ತೆಗೆಯಿಸಿದರಾಯಿತು' ಎಂದು ತಂದೆ ಶಂಭುವು, ಮಗಳ ಮೇಲಿನ ವ್ಯಾಮೋಹದಿಂದ ಆಗ ಉದಾಸೀನ ಮಾಡಿದ! ಇಷ್ಟು ಬೇಗನೆ ಕಾಲಬದಲಾಯಿಸುವುದೆಂದು ಆತನಿಗೇನು ಗೊತ್ತು? ಈಗಲೋ! ಮಂಡೆಬೋಳಿಸುವುದು ಹಾಗಿರಲಿ, 'ವಿಧವೆಯರಿಗೆ ಮದುವೆ ಮಾಡಬೇಕು' ಎನ್ನುವ 'ನಾಸ್ತಿಕರು' ಎಲ್ಲ ಕಡೆಯಂತೆ ಪುಣ್ಯಕ್ಷೇತ್ರಗಳಲ್ಲಿಯೂ ಹೆಚ್ಚಿಕೊಂಡಿದ್ದಾರೆ. ಶಂಭುವಿನ ಹಿರಿಯಮಗನೂ ಅವರೊಳಗಿನವನೆ. ಆತ ಹೊರಗೆ ತಿರುಗಾಡಲು ಹೋಗುವಾಗ ತಂದೆಯಂತೆ ಧೋತರ ಹೊದೆಯುವುದಿಲ್ಲ! ಸ್ಕೂಲಿನ ಹುಡುಗರ ಹಾಗೆ ಶರಟು ತೊಟ್ಟುಕೊಳ್ಳುತ್ತಾನೆ. ಅವನ ಗೆಳೆಯರೂ ಅಂಥವರೆ. ಹಳೆಯವರ ಸಂಪ್ರದಾಯಗಳಲ್ಲಿ ಅವರಿಗೆಲ್ಲ ಜುಗುಪ್ಸೆ.

* * * * * *

ಶಾಂತೆಗೆ ಈಗ ಹದಿನೆಂಟು ವರುಷ. ಸುಂದರವೂ, ಸುಸಂಘಟಿತವೂ ಆದ ಅಂಗಾಂಗಗಳು. ಪ್ರಾಯ ಬಂದಹಾಗೆ ಲಾವಣ್ಯವೂ ರಾಶಿರಾಶಿಯಾಗಿ ಅವಳಾ ಶರೀರದಲ್ಲಿ ಒಟ್ಟುಗೂಡುತ್ತಲಿದೆ. ತಿಳಿದವರೆನಿಸಿಕೊಂಡವರು ಕೂಡ, ಶಾಸ್ತ್ರಗಳಲ್ಲಿಯೂ ಸಂಸ್ಕಾರಗಳಲ್ಲಿಯೂ ಅಶ್ರದ್ಧೆಪಡಬಹುದಾದ ರೂಪ ಅದು. ಎಲ್ಲಕ್ಕೂ ಮೀರಿದ ಆಕರ್ಷಣೆಯೆಂದರೆ ಆಕೆಯ ಕೇಶರಾಶಿ. ನಿಂತು ಸ್ವಲ್ಪ ತಲೆ ಎತ್ತಿದರೆ, ಹಿಂದಿನಿಂದ ಪಾದದ ಹಿಮ್ಮಡವನ್ನು ಮುತ್ತಿಡುವಂತಿದ್ದ—ನಳನಳಿಸುವ ಆ ನೀಲವರ್ಣದ ಸುದೀರ್ಘ ಕೇಶಗುಚ್ಛವನ್ನು, ವಿಧವಿಧವಾಗಿ ಉಪಚರಿಸುವುದೇ ಅವಳಿಗೊಂದು ಕ್ರೀಡೆ. ಅಭ್ಯಂಜನಮಾಡಿ, ಒದ್ದೆಯಾದ

ಕೂದಲುಗಳನ್ನು ಗಾಳಿಯಲ್ಲಿ ಆರೆಬಿಟ್ಟಾಗ, ಅವು ಮುಖಕ್ಕೆ ಕಚ್ಚಿಕೊಂಡು ಘಮಘಮಿಸುತ್ತಿದ್ದರೆ ಶಾಂತೆಗೆ ಸೊಗಸು. ಅದೇ ಒಂದು ಹೆಮ್ಮೆ. ಈಗ ಆ ಸಂತೋಷದ ಆ ಹೆಮ್ಮೆಯ ಭಾರ ಇಳಿಯಲೆಬೇಕು!

ಶಂಭುವು ಇಂತಹ ಕ್ರೂರ ನಿರ್ಧಾರಕ್ಕೆ ಬರಲು ತುಂಬಾ ಕಾರಣಗಳಿದ್ದುವು. ಅವನಂತೆ ಕ್ಷೇತ್ರಪೌರೋಹಿತ್ಯವನ್ನೇ ನೆಚ್ಚಿಕೊಂಡು ಬಾಳ್ವೆ ಮಾಡುವ ಇತರರು, ಸ್ವಾಭಾವಿಕವಾಗಿಯೆ ತಮ್ಮೊಳಗೆ ಒಬ್ಬರನ್ನೊಬ್ಬರು ಮನಸ್ಸಿನಿಂದ ಮೆಚ್ಚುತ್ತಿರಲಿಲ್ಲ. ಅಸೂಯಾಪರರಾದ ಆ ಜನರು, ಹೊರಗಿಂದ ಶಂಭುವಿನಲ್ಲಿಗೆ ಬರುವ ಯಜಮಾನರುಗಳಿಗೆ ಮಧ್ಯದಲ್ಲಿಯೆ ಗಂಟುಬಿದ್ದು, "ಅವನು ಪರಮನಾಸ್ತಿಕ; ವಿಧವೆಯಾದ ಮಗಳಿಗೆ ಮುಂಡನ ಮಾಡಿಸದೆ ಹಾಗೆಯೆ ಬೆಳೆಯಿಸಿದ್ದಾನೆ. ಅವಳ ಅಡಿಗೆ ಆದರಣೆ ನಿಮ್ಮಂತಹ ಸಂಭಾವಿತರಿಗೆ ಉಚಿತವಾಗುದುದಲ್ಲ!" ಹೀಗೆ ಏನೇನನ್ನೋ ಹೇಳಿ, ಶಂಭುವಿನ ಆಸ್ತಿಕಕುಳಗಳನ್ನೆಷ್ಟೋ ತಪ್ಪಿಸಿಬಿಡುತ್ತಿದ್ದರು. ಆದುದರಿಂದಲೆ ಆತನ ಸಾಲ ಈಗಿತ್ತ ಬೆಳೆದಿತ್ತು. ಸದ್ಯ ದೊಡ್ಡಮ್ಮ ತೀರಿಕೊಂಡು ಎಂಟು ದಿನ ಸಂದಿಹೋಗಿವೆ. ಅವಳ ಉತ್ತರಕ್ರಿಯೆಗೆಂದು ಶಂಭುವು ಐದು ನೂರು ರೂಪಾಯಿಗಳನ್ನು ಸಾಲ ತೆಗೆದಿದ್ದಾನೆ. ವಯಸ್ಸಿಗೆ ಬಂದ ಮಗನೂ ಕೈಗೆ ಬರುವಂತಿಲ್ಲ. ಈ ಎಲ್ಲ ತೊಂದರೆಗಳಿಂದಾಗಿ ಶಂಭುವಿನ ಮನಸ್ಸು ರೋಸಿಹೋಗಿದೆ. ಇನ್ನೂ ಒಂದು ಕಾರಣವೆಂದರೆ ಪರಊರಿನ ಶ್ರೀಮಂತ ಯಜಮಾನರೊಬ್ಬರಿಂದ "ಮಗಳ ಕೇಶಖಂಡನ ವಿಧಿಯನ್ನು ನೆರವೇರಿಸಬೇಕಾಗಿದೆ. ನಾವು ನಿಮ್ಮಲ್ಲಿಗೆ ಸದ್ಯವೇ ಯಾತ್ರೆಗೆ ಬರುತ್ತೇವೆ!" ಎಂದು ಅಂದೆಯೆ ಪತ್ರ ಬಂದಿದ್ದಿತು. ಆ ಗೃಹಸ್ಥರೋ ತುಂಬ ಶ್ರೀಮಂತರು. ಅಲ್ಲದೆ ಆಸ್ತಿಕರು. ಧರ್ಮಕೃತ್ಯಕ್ಕೆಂದು ನೂರಾರು ರೂಪಾಯಿಗಳನ್ನು ವೆಚ್ಚ ಮಾಡುವ ಸಂಭವವಿದೆ. ಅವರು ಬಂದಾಗ ಮನೆಯಲ್ಲಿ ಈ ಅಸಡ್ಡಾಳವನ್ನು ನೋಡಿ ಮುನಿದುಕೊಂಡರೆ....? ಪುರೋಹಿತರೆಂದಂತೆ ಆ ವಿಧಿಯನ್ನು ಈ ಅವಸರದಲ್ಲಿ ಮುಗಿಸದೆ ನಿರ್ವಾಹವಿಲ್ಲ.

೩

ಶಂಭುವು ಹೆಂಡತಿಯೊಡನೆ ಪ್ರಸ್ತಾಪವೆತ್ತಲೆಂದೇ ಒಳಅಂಗಳಕ್ಕೆ ಬಂದ. ಅಲ್ಲಿ ಆಕೆ ಬಾಚಣಿಗೆ ಹಿಡಿದು ಮಗಳ ಕೂದಲನ್ನು ಹಿಕ್ಕುತ್ತಿದ್ದಾಳೆ. ಆ

ದೃಶ್ಯ ನೋಡಿ ಅವನಿಗೆ ಚೇಳು ಕುಟುಕಿದಂತಾಯ್ತು. ಹಾಗೆಯೇ ಹಿಂದೆ ಸರಿದು ಬಾಗಿಲಿಗೆ ಆತುಕೊಂಡ. ಮಗಳ ನಿಡಿದಾದ ಕೂದಲುಗಳ ರಾಶಿಯನ್ನು ಹಿಡಿಹಿಡಿಯಾಗಿ ಹಿಡಿದು ಹಣಿಗೆಯಾಡಿಸುತ್ತಿದ್ದಂತೆಯೇ ತಾಯಿಯ ಕೈ ಸೋತುಹೋಯ್ತು.

"ಥೂ! ಇನ್ನು ನನ್ನಿಂದ ಆಗುವುದಿಲ್ಲ. ಏನೆಂದು ಇವು ಇಷ್ಟು ಬೆಳೆದಿವೆಯೋ; ತೋಳಿಗೆ ಕಸ ಬಂದುಬಿಟ್ಟಿತು! ಪಾಪಿ! ಎಂದಾದರೂ ಕಳೆಯಲೇಬೇಕಾದ ಈ ಕೇಶಗಳನ್ನು ಹೀಗೇಕೆ ಆರಯಿಕೆ ಮಾಡಿಕೊಳ್ಳುತ್ತಿದ್ದೀಯೋ ಕಾಣೆ!"

ಮಾತಾಡುತ್ತಿದ್ದಂತೆಯೇ ಆಯಾಸಗೆಟ್ಟು, ಆ ತಾಯಿಹೆಂಗುಸಿನ ಕಣ್ಣುಗಳಲ್ಲಿ ನೀರು ಧಾರೆಯಾಗಿ ಹರಿಯಿತು. ಆಗಾಗ ಈ ನೋವಿನ ಬುಗ್ಗೆ ಚಿಮ್ಮುತ್ತಿದೆ. ಈ ಬಾರಿ ಅದು ಇನ್ನಿಷ್ಟು ಪುಟಿಯಿತು. ಶಾಂತೆಯ ಕಣ್ಣುಗಳಲ್ಲಿಯೂ ಹನಿ! ಮರುಕ್ಷಣದಲ್ಲಿಯೇ ಹುಡುಗಿ ಸಿಡಿದೆದ್ದಳು:

"ಆಗದಿದ್ದರೆ ಬಿಡು; ಹುಟ್ಟಿದ ಮಕ್ಕಳಲ್ಲಿ ನಾನೊಬ್ಬಳು ಬೇಡವಾಗಿದ್ದರೆ, ಕುತ್ತಿಗೆಗೆ ಕಲ್ಲುಕಟ್ಟಿ, ಬಾವಿಗಾದರೂ ಚೆಲ್ಲಬಾರದಿತ್ತೇ! ಹಾಳಾದವಳನ್ನು ಏಕೆ ಇನ್ನೂ ಈ ಲೋಕದಲ್ಲಿ ಇಟ್ಟಿದ್ದಾನೆಯೋ ಭಗವಂತ!"

ಕೋಪ ಕರುಣೆಗಳಿಂದ ಕಲುಷಿತವಾದ ಆ ಸನ್ನಿವೇಶ, ತಾಯಿ ಮಗಳು ಇಬ್ಬರಿಗೂ ಅಸಹ್ಯವೆನಿಸಿ, ಒಬ್ಬರನ್ನೊಬ್ಬರು ಮುಖವೆತ್ತಿ ನೋಡದೆ ಅಲ್ಲಿಂದ ಎದ್ದುಹೋಗುವಂತೆ ಮಾಡಿತು. ಮತ್ತೆ ಅವಸರದಿಂದ ಏಳುವಾಗ, ತಾಯಿಯು ಕೈಯೆತ್ತಿ ಹಿಂದೆ ಬಿಸಾಡಿದ ಹಣಿಗೆ—ಪಾಪ—ಮುಂದೆ ಹೆಜ್ಜೆ ಇಟ್ಟಿದ್ದ ಶಂಭುವಿನ ಹಣೆಗೆ ತಾಗಿ, ನೆಲಕ್ಕೆ ಬಿತ್ತು. ತಾಯಿ-ಮಗಳ ಮಾತು ಕೇಳಿದಾಗಲೆ ಹಣೆಬಡಿದುಕೊಳ್ಳಲು ಶಂಭುವು ಕೈಯೆತ್ತಿದ್ದ. ಈಗ ಆ ಕೈ ಹಣೆಗೆ ಇನ್ನಿಷ್ಟು ಗಟ್ಟಿಯಾಗಿ ಒತ್ತಿಕೊಂಡಿತು. 'ಸಾಯಂಕಾಲ ಹೇಳೋಣ' ಎಂದು ಆತ ಅಲ್ಲಿಂದ ಕಾಲ್ದೆಗೆದ.

೪

ಬೆಳಗಿನಿಂದಲೂ ಶಂಭುವಿನ ಮನೆಯಲ್ಲಿ ರೋದನ. ಶಾಂತೆಯ ಗಂಡನು ಸತ್ತದಿನದ ವೇದನೆ ಇಂದು ಎಲ್ಲರಲ್ಲಿಯೂ ಮತ್ತೆ ಮರುಕೊಳಿಸಿದೆ. ಶಾಂತೆ

ಯನ್ನು ಈಗಿದ್ದ ಸ್ಥಿತಿಯಲ್ಲಿ ಇನ್ನು ಯಾರೂ ನೋಡಲಾರರು. ಗೆಳತಿಯರ ಸಲ್ಲಾಪದಲ್ಲಿ ನಿತ್ಯವೂ ಎನ್ನುವಂತೆ ವರ್ಣನೆಯ ವಸ್ತುವಾಗಿದ್ದ ಆ ಕಬರೀ ಗುಚ್ಛವನ್ನು ಕೈಯಿಂದ ಹಿಸುಕುತ್ತ ಘೋರವಾಗಿ ಅಳುತ್ತಿದ್ದಾಳೆ ಶಾಂತೆ. ಆಕೆಯ ಅಣ್ಣನೊಬ್ಬನನ್ನು ಬಿಟ್ಟರೆ, ಅಲ್ಲಿ ಉಪಸ್ಥಿತರಾಗಿದ್ದ ಇನ್ನಾರಿಗೂ ಅದೆಷ್ಟು ಭೀಭತ್ಸವಾಗಿದ್ದರೂ—ಆ ವಿಧಿ ಪರಿಹಾರ್ಯವೆಂದು ಎನ್ನಿಸಲಿಲ್ಲ. ಇದ್ದಕ್ಕಿದ್ದಹಾಗೆಯೇ ಹುಡುಗಿ ತನ್ನ ಕೋಣೆಯ ಕಡೆಗೆ ಧಾವಿಸಿದಳು. "ಅಯ್ಯೋ ನೋಡಿ; ಅವಳೆಲ್ಲಿಯಾದರೂ ಕುತ್ತಿಗೆಗೆ........" ತಾಯಿ ಬೊಬ್ಬೆ ಇಟ್ಟಳು. ಶಾಂತೆಯ ಅಣ್ಣ ಎದ್ದು ಆ ಕಡೆಗೆ ನಡೆದ. ಒಮ್ಮೆಲೇ ಕೋಣೆಯ ಒಳಗೆ ಹೋಗಲು ಮನಃಸ್ಥೈರ್ಯಸಾಲದೆ, ಬಾಗಿಲಹೊರಗೇ ತಡೆದು ನಿಂತ.

ಕೋಣೆಯ ಮಗ್ಗುಲುಗೋಡೆಗೆ ಹೊಂದಿ ಒಂದು ಎತ್ತರವಾದ ಮಂಚ ವಿದೆ. ಮೇಲುಗಡೆಯಲ್ಲಿ ದೊಡ್ಡದಾದ ನಿಲುವುಗನ್ನಡಿ. ಶಾಂತೆಯು ಒಳಗೆ ಹೋದವಳೇ ಬದಿಯಲ್ಲಿದ್ದ ಕಪಾಟಿನಿಂದ ಬಾಟ್ಲಿಯೊಂದನ್ನು ಹೊರಕ್ಕೆ ತೆಗೆ ದಳು. ಹಾಗೆಯೇ ಅದರೊಳಗಿದ್ದ ಸುಗಂಧದ ಎಣ್ಣೆಯನ್ನು ನೆತ್ತಿಯಮೇಲೆ ಸುರಿದುಕೊಂಡು, ಕೂದಲುಗಳಿಗೆ ಚೆನ್ನಾಗಿ ಸವರಿ ತುರುಬುಕಟ್ಟಿಕೊಂಡಳು. ಡಬ್ಬದಿಂದ ಕುಂಕುಮ ತೆಗೆದು ಹಣೆಗೆ ಹಚ್ಚಿಕೊಂಡಿದ್ದಲ್ಲದೆ, ತುರುಬಿನಲ್ಲಿ ಅದೇ ಆಗ ಅರಳಿದ ಹೂವೊಂದನ್ನು ಮುಡಿದು ಕನ್ನಡಿಯ ಎದುರು ನಿಂತಳು. ಕೆನ್ನೆಯ ಮೇಲಿನ ಬಾಷ್ಪದ ಬಿಂದುಗಳು ಇನ್ನೂ ಉದುರುತ್ತಿರುವಾಗಲೇ ಆ ಸೌಂದರ್ಯಶಾಲಿನಿಯ ಕುಡಿಗಣ್ಣಿನಿಂದ ಮಿಂಚೊಂದು ಹೊರಹೊಮ್ಮಿತು. ತುಟಿಯ ಅಂಚಿನಲ್ಲಿ ಕಿರುನಗೆ! ಅವಳು ಎಷ್ಟು ಹೊತ್ತು ಹಾಗೆಯೆ ನಿಂತು ಕೊಳ್ಳಬೇಕೆಂದಿದ್ದಳೋ!

* * * * * *

"ಅಮ್ಮಾ! ನಾನೆಲ್ಲಿ ಕೂಡ್ರಲಿ?"

ಹೊರಗೆ ನಾಪಿತನ ಧ್ವನಿ. ಒಡನೆಯೇ ಕೋಣೆಯೊಳಗಿಂದ ಚೀತ್ಕಾರ ದೊಡನೆ ಏನೋ ಭಾರವಾದ ವಸ್ತುವು ಬಿದ್ದಹಾಗೆ! ಶಂಭುವು ತಲೆ ಚಚ್ಚಿ ಕೊಳ್ಳುತ್ತ ಕೋಣೆಯೊಳಗೆ ಬಂದ. ಶಾಂತೆಯು ಸ್ಮೃತಿತಪ್ಪಿ ಬಿದ್ದಿದ್ದಾಳೆ. ಅವಳ ತುರುಬು ಬಿಚ್ಚಿಹೋಗಿದೆ. ಕೂದಲುಗಳೆಲ್ಲ ಅಸ್ತವ್ಯಸ್ತವಾಗಿ ಹರಡಿವೆ.

ಅಣ್ಣನು ದಿಗ್ಭ್ರಾಂತನಾಗಿ ಒಂದೆಡೆ ಕಂಬದಂತೆ ನಿಂತಿದ್ದಾನೆ. ಒಂದು ಕ್ಷಣ— ಅಲ್ಲಿಯ ಹವೆಕೂಡ ಉಸಿರನ್ನು ಹಿಡಿದುಕೊಂಡಿದೆಯೋ ಎನ್ನುವಂತೆ—ಎಲ್ಲವೂ ನೀರವ ! ನಿಷ್ಪಂದ !

“ ಇಲ್ಲ, ಇದು ಆಗದ ಮಾತು ! ನನ್ನ ಸಮಕ್ಷಮದಲ್ಲಿ ನಾನೆಂದಿಗೂ ಇಂತಹ ಹಿಂಸೆಗೆ ಅವಕಾಶಕೊಡುವುದಿಲ್ಲ. ನಿಮ್ಮ ಧರ್ಮ ಹಾಳಾಗಲಿ ! ನೀವೆಲ್ಲ ರಾಕ್ಷಸರು ! ”

ಮನಸ್ಸಿನ ಆವೇಗವನ್ನು ತಡೆಯಲಾರದೆ ಶಾಂತೆಯ ಅಣ್ಣ ಅವಡುಗಚ್ಚಿಕೊಂಡ. ಕಣ್ಣುಗಳಿಂದ ಬಿಸಿಯಾದ ಬಾಷ್ಪ ಧಾರೆಗಟ್ಟಿ ಹರಿಯಿತು. ಶಂಭುವು ಇದ್ದುಬಿದ್ದ ತಾಳ್ಮೆಯನ್ನೆಲ್ಲ ಶೇಖರಿಸಿಕೊಂಡು, ಮೃದುವಾಗಿ ಹೇಳಿದ :

“ ಏನಣ್ಣಾ ! ನಿನ್ನಂತೆ ನಮಗೂ ಅಂತಃಕರಣ, ಅನುಕಂಪೆಯೇನು ಇಲ್ಲವೇ ? ಮತ್ತೆ ನಮ್ಮದು ಹೆತ್ತಕರುಳು. ಕೇವಲ ಇಲ್ಲಿಯದನ್ನೇ ನೆಚ್ಚಿಕೊಂಡು, ಪರಲೋಕವನ್ನು ಮರೆಯುವಂತಹ ಹೀನವೃತ್ತಿ ನಮ್ಮ ಜಾತಿಗೆ ಕೂಡದು. ಈಗ ನಾವು ಹೃದಯವನ್ನು ಪಾಷಾಣವಾಗಿಸದೆ ವಿಧಿಯಿಲ್ಲ. ಅಲ್ಲದೆ ನಾಳೆ ಪುರೋಹಿತರು ಶ್ರಾದ್ಧ, ಪುಷ್ಟಿಗಳಿಗೆ ನಮ್ಮಲ್ಲಿಗೆ ಬರಬೇಡವೇ ? ತಂಗಿಯ ಮೇಲೆ ಅಭಿಮಾನವಿದ್ದರೆ, ಅವಳ ಮುಂದಿನ ವ್ರತ–ಉಪವಾಸಗಳಿಗೆ ಅನುಕೂಲತೆ ಮಾಡಿಕೊಟ್ಟು, ಧರ್ಮವನ್ನು....” ಗೃಹಸ್ವಾಮಿಯು ಇನ್ನೂ ಏನೇನನ್ನೊ ಹೇಳುವುದರಲ್ಲಿದ್ದ. ಆದರೆ ಅದನ್ನೆಲ್ಲ ಕೇಳಲು ಮಗನು ನಿಂತರಷ್ಟೇ ? ಆತ ದುರ್ದಮ್ಯವಾದ ವೇದನೆಯಿಂದ ಹೊರಟುಹೋಗಿದ್ದಾನೆ.

ಶಾಂತೆಯನ್ನು ಅರ್ಧಮೂರ್ಛಿತಸ್ಥಿತಿಯಲ್ಲಿರುವಾಗಲೆ, ನಾಪಿತನ ಎದುರು ಕುಳ್ಳಿರಿಸಿದುದಾಯಿತು. ಅವಳ ಮುಂದಿನ ಅಲಂಕಾರಕ್ಕೆಂದು ಎದುರಿಗೆ ಪ್ರೌಢೆಯಾದ ವಿಧವೆಯೊಬ್ಬಳು ರಕ್ತವಸ್ತ್ರವನ್ನು ಹಿಡಿದು ನಿಂತಿದ್ದಾಳೆ. ಅಂತಹ ಹೆಂಗುಸಿಗಲ್ಲದೆ ಇನ್ನಾರಿಗೆ ಆ ದಾರ್ಢ್ಯಬರಬೇಕು ! ಶಂಭುವು ಆ ಘೋರ ನೋಡಲಾರದೆ ಬೇರೆ ಕಡೆಗೆ ಹೋದ.

ನಾಪಿತ ತನ್ನ ಕೆಲಸ ಪ್ರಾರಂಭಿಸಿದ. ಒತ್ತಾಗಿ ಬೆಳೆದಿದ್ದ ಕಬರಿಯನ್ನು ಕತ್ತರಿಸಿ ರಾಶಿಹಾಕಿದ. ಒಂದು ಕ್ಷಣಕ್ಕೆ ಹಿಂದೆ ಬಿನ್ನಾಣದಿಂದ ಕುಲುಕುಲು ನಗುವುವೋ ಎನ್ನುವಂತಿದ್ದ ಕುರುಳುಗಳು, ಇದೀಗ ಕೆಸರುಮಣ್ಣಿನ ಹಾವಸೆಯಂತೆ ಒಂದೆಡೆ ರಾಶಿಬಿತ್ತು. ಅಂತೂ ಧರ್ಮ ಉಳಿದುಕೊಂಡಿತು. ಪರ

ಲೋಕದ ಗಂಡನಿಗೆ, ಆಹಾರದ ಜೊತೆಯಲ್ಲಿ ಭೂಲೋಕದಲ್ಲಿಯ ಹೆಂಡತಿಯ ತಲೆಗೂದಲಿನ ನೀರು ಬೆರೆದುಕೊಳ್ಳುವುದು ತಪ್ಪಿತು. ಹೆಣ್ಣು ಮಡಿಯಾದಳು; ಸ್ವರ್ಗಕ್ಕೆ ಹಾದಿ ನಿರಂತರವಾಯ್ತು.

ಪ್ರಥಮಸಂಸ್ಕಾರವಾದ ಮೇಲೆ ತಲೆಯನ್ನು ನುಣ್ಣಗೆ ಮಾಡಬೇಕೆಂದು ನಾಪಿತ ನೆತ್ತಿಗೆ ನೀರು ತಟ್ಟಿದ. ಹೊರಗೆ ತಂಗಾಳಿ ಬೀಸುತ್ತಿದೆ; ಜೊತೆಗೆ ನೀರು ಬಿತ್ತು. ಶಾಂತೆಗೆ ಈಗ ಚೆನ್ನಾಗಿ ತಿಳಿವು ಉಂಟಾಗುತ್ತಬಂತು. ನಾಪಿತ ತನ್ನ ಕೆಲಸದಲ್ಲಿ ಆಲಸ್ಯಮಾಡದೆ, ಅಂತಹ ಭದ್ರಕಾರ್ಯಕ್ಕಾಗಿಯೆ ಮೀಸಲಾಗಿಟ್ಟಿದ್ದ ಮೊಂಡುಗತ್ತಿಯನ್ನು ತೆಗೆದು ಕರಕರನೆ ಎಳೆದ. ಕ್ಷಣಮಾತ್ರದಲ್ಲಿ ಶಾಂತೆಗೆ ತಾನೆಲ್ಲಿರುವೆನೆಂಬ ಕಲ್ಪನೆಯಾಯ್ತು. ಅಲ್ಲಿಯೇ ರಾಶಿ-ರಾಶಿಯಾಗಿದ್ದ ಕೂದಲುಗಳು ಕಂಡುವು. ಎದುರಿಗೆ ಕೆಂಪುಸೀರೆಯನ್ನು ಹಿಡಿದಿದ್ದ ವಿಧವೆಯನ್ನು ನೋಡಿದಳು. ಎದೆಗೆ ಸಿಡಿಲು ಬಡಿಯಿತು.

"ಅಯ್ಯೋ ಅಣ್ಣಾ! ನನಗಾರೂ ಇಲ್ಲ; ನನ್ನ ತಂದೆ–ತಾಯಿ ಎಲ್ಲ ಸತ್ತು ಹೋಗಿದ್ದಾರೆ! ನಾನೂ ಸತ್ತೆ!"

ಆ ಬಾಲಿಕೆಯ ವಿಕಾರವಾದ ಕೂಗು ಗಾಳಿಯಲ್ಲಿ ಲೀನವಾಗುತ್ತಿದ್ದಂತೆಯೇ ಆ ಕೋಮಲವಾದ ತನುಲತೆ ಬೋಧೆ ತಪ್ಪಿ ನೆಲಕ್ಕೆ ರಾವಿಕೊಂಡು ಬಿತ್ತು.

೫

ಶಂಭುವಿನ ತ್ಯಾಗ, ಸಹನೆ, ಧರ್ಮಬುದ್ಧಿ ಒಂದೂ ಆತನ ಲೌಕಿಕವನ್ನು ಸುಧಾರಿಸುವುದಕ್ಕೆ ಸಹಾಯಕವಾಗಲಿಲ್ಲ. ಬರಲಿದ್ದ ಶ್ರೀಮಂತ ಯಜಮಾನನು ಮಗಳನ್ನು ಕಟ್ಟಿಕೊಂಡು ಬೇರಾವುದೋ ಕ್ಷೇತ್ರಕ್ಕೆ ಹೋದನೆಂಬ ಸುದ್ದಿ ಅನಂತರ ತಿಳಿದು ಬಂದಿತು.

"ಆದದ್ದು ಒಳಿತೇ ಆಯ್ತು. ಆ ಶಾಂತೆ ಅಷ್ಟೇನೂ ಸಂಭಾವಿತ ಹುಡುಗಿಯಲ್ಲ. ಎಷ್ಟು ಜನರೊಡನೆ ಆಕೆ ಸಂಪರ್ಕವಿಟ್ಟುಕೊಂಡಿದ್ದಾಳೆಯೋ!"

ಇನ್ನೂ ಏನೇನೋ ಹೇಳಿಕೊಳ್ಳುತ್ತಿದೆ ಜನ. ಕೊನೆಗೂ ಶಂಭುವಿನ ಸಂತಾನಕ್ಕೆ ದೊರೆತ ಸಂಭಾವನೆ ಇಷ್ಟೆ!

**ಕುಮಾರಿ ದೇವಾಂಗನಾ ಶಾಸ್ತ್ರಿ**
**ಗೋಕರ್ಣ**